ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಮೇ 24 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 38 | ಪುಟಗಳು: 12


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪ್ರಜ್ವಲ್...ತಕ್ಷಣ ಎಸ್‌ಐಟಿ ಮುಂದೆ ಶರಣಾಗು...

● ತಪ್ಪಿದರೆ ಕುಟುಂಬದಿಂದಲೇ ಹೊರ ಹಾಕುವುದಾಗಿ ಟ್ವೀಟ್ ಮೂಲಕ ಮಾಜಿ ಪ್ರಧಾನಿ ದೇವೇಗೌಡರ ವಾರ್ನಿಂಗ್ ● ನನ್ನ ಬಗ್ಗೆ ಏನಾದರೂ ಗೌರವ ಇದ್ದಲ್ಲಿ ಕೂಡಲೆ ವಿದೇಶದಿಂದ ಹಿಂದಿರುಗುವಂತೆ ಸಲಹೆ



ಬೆಂಗಳೂರು, ಮೇ 23(ಕೆಎಂಶಿ)– ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಆರೋಪದಲ್ಲಿ ಸಿಲುಕಿರುವ ಸಂಸದ ಪ್ರಜ್ವಲ್ ರೇವಣ್ಣ ತಕ್ಷಣವೇ ಎಸ್‌ಐಟಿ ಮುಂದೆ ಶರಣಾಗದಿದ್ದರೆ ಆತನನ್ನು ಕುಟುಂಬದಿಂದ ಹೊರಗಿಡಬೇಕಾಗುತ್ತದೆ ಎಂದು ಮಾಜಿ ಪ್ರಧಾನಿ ಹಾಗೂ ಅವರ ತಾತ ಎಚ್.ಡಿ. ದೇವೇಗೌಡ ಇಂದಿಲ್ಲಿ ಕಟ್ಟೆಚ್ಚರ ನೀಡಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಇದು ನಾನು ನಿನಗೆ ಕೊಡುತ್ತಿರುವ ಕೊನೆಯ ಎಚ್ಚರಿಕೆ ಎಂದು ತಿಳಿಯಬೇಕು. ಈ ಎಚ್ಚರಿಕೆಗೆ ಮನ್ನಣೆ ಕೊಡದಿದ್ದಲ್ಲಿ, ಅವನು ನನ್ನ ಮತ್ತು ನನ್ನ ಕುಟುಂಬದವರೆಲ್ಲರ ಕೋಪವನ್ನು ಎದುರಿಸಬೇಕಾಗುತ್ತದೆ. ಅವನು ಎಸಗಿದ್ದಾನೆ ಎನ್ನಲಾದ ತಪ್ಪುಗಳನ್ನು ತೀರ್ಮಾನಿಸಲು ಕಾನೂನು ಇದೆ. ಈ ಎಚ್ಚರಿಕೆಗೆ ಪ್ರಜ್ವಲ್ ತಲೆಬಾಗದಿದ್ದಲ್ಲಿ, ಮನೆಯವರ ಕಣ್ಣಲ್ಲಿ ಏಕಾಂಗಿಯಾಗುವುದರಲ್ಲಿ ಸಂದೇಹವಿಲ್ಲ.

ನನ್ನ ಬಗ್ಗೆ ಏನಾದರೂ ಗೌರವ ಇದ್ದಲ್ಲಿ ಕೂಡಲೆ ಹಿಂದಿರುಗಬೇಕೆಂದು ಸಲಹೆ ಮಾಡಿದ್ದಾರೆ. ಪ್ರಜ್ವಲ್ ವಿಷಯದಲ್ಲಿ ನಾನಾಗಲೀ, ನನ್ನ ಕುಟುಂಬದವರಾಗಲೀ ವಿಚಾರಣೆಯಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂಬ ಭರವಸೆ ಕೊಡುತ್ತೇನೆ ಎಂದು ಟ್ವೀಟ್‌ನಲ್ಲಿ ಹೇಳಿದ್ದಾರೆ. ಅವನು ಎಸಗಿದ್ದಾನೆ ಎನ್ನಲಾದ ಕೃತ್ಯಗಳು ಮತ್ತು ತಪ್ಪುಗಳಿಂದ ನೊಂದಿರುವ, ಅನ್ಯಾಯಕ್ಕೆ ಒಳಗಾಗಿರುವ ಎಲ್ಲರಿಗೂ ನ್ಯಾಯ ಸಿಗುವುದಷ್ಟೇ ನನಗೆ ಮುಖ್ಯ. ಜನರ ವಿಶ್ವಾಸ ಮರಳಿ ಪಡೆಯುವುದಷ್ಟೇ ನನ್ನ ಗುರಿ. ಕಳೆದ ಆರು ದಶಕಗಳ ಕಾಲದ ನನ್ನ ರಾಜಕೀಯ ಜೀವನದುದ್ದಕ್ಕೂ ಜನತೆ ನನ್ನ ಜೊತೆ ನಿಂತಿದ್ದಾರೆ, ಅವರಿಗೆ ನಾನು ಸದಾ ಋಣಿ. ನಾನು ಬದುಕಿರುವವರೆಗೂ ಅವರ ಹಿತದ ವಿರುದ್ಧ ನಡೆದುಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಪ್ರಜ್ವಲ್ ಸ್ನೇಹಿತರು, ಕಾರ್ಯಕರ್ತರು ಮತ್ತು ಕುಟುಂಬದವರಿಗೆ ತಂದೊಡ್ಡಿರುವ ಆಘಾತ ಮತ್ತು ನೋವಿನಿಂದ ಹೊರಬಂದು ಮಾತನಾಡಲು ಸ್ವಲ್ಪ ಸಮಯಾವಕಾಶ ಹಿಡಿಯಿತು. ನಾನೀಗಾಗಲೇ ತಿಳಿಸಿರುವಂತೆ, ಆತ ತಪ್ಪಿತಸ್ಥನೆಂದಾದರೆ, ಆತನಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂಬ ನನ್ನ ನಿಲುವಿನಲ್ಲಿ ಬದಲಾವಣೆ ಇಲ್ಲ.

ಪ್ರಕರಣಕ್ಕೆ ಸಂಬಂಧಿಸಿದಂತೆ ಜನರು ನನ್ನ ಮತ್ತು ನನ್ನ ಕುಟುಂಬದವರ ಕುರಿತಾಗಿ ಅತ್ಯಂತ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಇವೆಲ್ಲವೂ ನನಗೆ ತಿಳಿದಿದೆ, ನಾನು ಅವರು ಮಾತನಾಡುವುದನ್ನು ತಪ್ಪಿಸಲು ಹೋಗುವುದಿಲ್ಲ.

ಹಗರಣದ ಎಲ್ಲಾ ಸತ್ಯಾಂಶಗಳು ಹೊರಬರುವವರೆಗೂ ಅವರು ತಾಳ್ಮೆಯಿಂದ ಕಾಯಬೇಕಿತ್ತು ಎಂಬ ವಾದಕ್ಕೂ ನಾನು ಇಳಿಯುವುದಿಲ್ಲ.

ಪ್ರಜ್ವಲ್‌ನ ಚಟುವಟಿಕೆಗಳ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಎಂದು ಸ್ಪಷ್ಟಪಡಿಸಿರುವ ದೇವೇಗೌಡರು, ಘಟನೆ ನಂತರ ನಡೆದಿರುವ ರಾಜಕೀಯ ಪಿತೂರಿಗಳು, ಚಿತಾವಣೆಗಳು, ಉತ್ಪ್ರೇಕ್ಷೆಗಳು ಮತ್ತು ಮಿಥ್ಯಾರೋಪಗಳ ಬಗ್ಗೆ ಈಗ ವಿಶ್ಲೇಷಣೆ ಮಾಡುವುದಿಲ್ಲ. ಅವುಗಳನ್ನು ಮಾಡಿದವರು ದೇವರಿಗೆ ಉತ್ತರಿಸಬೇಕಾಗುತ್ತದೆ ಮತ್ತು ನಾವು ಎಸಗಿದ ಕೃತ್ಯಗಳಿಗೆ ಸೂಕ್ತ ಬೆಲೆ ತೆರಬೇಕಾಗುತ್ತದೆ ಎಂದು ನಂಬಿದ್ದೇನೆ. ನನ್ನ ಸತ್ಯ ಮತ್ತು ನೋವಿನ ಹೊರೆಯನ್ನು ಭಗವಂತನ ಪದತಳದಲ್ಲಿ ಇರಿಸಿದ್ದೇನೆ ಎಂದಿದ್ದಾರೆ.

ಪ್ರಜ್ವಲ್ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸಲು ಪ್ರಧಾನಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೊಂದು ಪತ್ರ



ಬೆಂಗಳೂರು, ಮೇ 23(ಕೆಎಂಶಿ)– ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ದೇಶಕ್ಕೆ ವಾಪಸು ಕರೆತರಲು, ಅವರಿಗೆ ನೀಡಿರುವ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಮತ್ತೊಂದು ಪತ್ರ ಬರೆದಿದ್ದಾರೆ. ಸಂಸದ ಪ್ರಜ್ವಲ್ ರೇವಣ್ಣ ಎಸಗಿರುವ ಕೃತ್ಯ ಕರ್ನಾಟಕ ಮಾತ್ರವಲ್ಲದೆ ಇಡೀ ದೇಶದ ಗಮನ ಸೆಳೆದಿದ್ದು, ಆರೋಪಿಯು ಲೋಕಸಭಾ ಸದಸ್ಯನಾಗಿರುವುದಲ್ಲದೆ, ಪ್ರಸಕ್ತ ಸಾರ್ವತ್ರಿಕ ಚುನಾವಣೆಯಲ್ಲೂ ಸ್ಪರ್ಧಿಸಿದ್ದಾನೆ. ಪ್ರಜ್ವಲ್ ರೇವಣ್ಣ ವಿರುದ್ಧದ ಆರೋಪ ತನಿಖೆಗೆ ಕರ್ನಾಟಕ ಸರ್ಕಾರ ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸಿದೆ. ಮಹಿಳೆಯರ ಮೇಲಿನ ಲೈಂಗಿಕ ● 9ನೇ ಪುಟಕ್ಕೆ

ಪ್ರಜ್ವಲ್ ರೇವಣ್ಣನನ್ನು ವಿದೇಶಕ್ಕೆ ಕಳುಹಿಸಿರುವುದು ಅವರೇ ಅಲ್ವಾ!

ಮೈಸೂರು: ಪ್ರಜ್ವಲ್ ಅವರನ್ನು ವಿದೇಶಕ್ಕೆ ಕಳುಹಿಸಿರುವುದೇ ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರು ಎಂದು ಸಿಎಂ ಸಿದ್ದರಾಮಯ್ಯ ಆರೋಪಿಸಿದ್ದಾರೆ. ಅಶ್ಲೀಲ ವಿಡಿಯೋ ಪ್ರಕರಣದಲ್ಲಿ ವಿದೇಶದಲ್ಲಿ ತಲೆಮರೆಸಿಕೊಂಡಿರುವ ತಮ್ಮ ಮೊಮ್ಮಗ ಪ್ರಜ್ವಲ್ ಅವರಿಗೆ ಇಂದು ದೇವೇಗೌಡರು ಪತ್ರ ಬರೆದಿದ್ದಾರೆ. ಈ ಬಗ್ಗೆ ನಗರದ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸಿಎಂ, ನನ್ನ ಪ್ರಕಾರ ವಿದೇಶಕ್ಕೆ ಕಳುಹಿಸಿರುವುದೇ ಅವರಲ್ವಾ (ಹೆಚ್.ಡಿ.ದೇವೇಗೌಡರು). ಈಗ ಸುಮ್ಮನೆ ಸಾರ್ವಜನಿಕರ ಅನುಕಂಪಕ್ಕೋಸ್ಕರ ಪತ್ರ ಬರೆದಿದ್ದಾರೆ ಎಂದು ದೂರಿದರು.

ನಾಳೆ ಲೋಕಸಭಾ 6ನೇ ಹಂತದ ಮತದಾನ

ಬಹಿರಂಗ ಪ್ರಚಾರ ಅಂತ್ಯ

ಹೈದರಾಬಾದ್: 2024ರ ಸಾರ್ವತ್ರಿಕ ಲೋಕಸಭೆ ಚುನಾವಣೆಯ ಐದು ಹಂತಗಳು ಪೂರ್ಣಗೊಂಡಿದ್ದು, ಆರನೇ ಹಂತದ ಚುನಾವಣೆ ಶನಿವಾರ (ಮೇ 25) ನಡೆಯಲಿದೆ. ಅಂದು 8 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ ಸೇರಿ 58 ಲೋಕಸಭಾ ಸ್ಥಾನಗಳಿಗೆ ಮತದಾನ ನಡೆಯಲಿದೆ. ಒಟ್ಟು 889 ಅಭ್ಯರ್ಥಿಗಳು ತಮ್ಮ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ. ಮತದಾನ ಬೆಳಗ್ಗೆ 7 ಗಂಟೆಗೆ ಆರಂಭವಾಗಿ ಸಂಜೆ 6 ಗಂಟೆಗೆ ಮುಕ್ತಾಯವಾಗಲಿದೆ.

ಬಿಹಾರ (8 ಸ್ಥಾನ), ಹರಿಯಾಣ (ಎಲ್ಲಾ 10 ಸ್ಥಾನ), ಜಮ್ಮು ಮತ್ತು ಕಾಶ್ಮೀರ (1 ಸ್ಥಾನ), ಜಾರ್ಖಂಡ್ (4 ಸ್ಥಾನ), ದೆಹಲಿ (ಎಲ್ಲ 7 ಸ್ಥಾನಗಳು), ಒಡಿಶಾ (6 ಸ್ಥಾನ), ಉತ್ತರ ಪ್ರದೇಶ (14 ಸ್ಥಾನ) ಮತ್ತು ಪಶ್ಚಿಮ ಬಂಗಾಳ (8 ಸ್ಥಾನ)ದಲ್ಲಿ ಮತದಾನ ನಡೆಯಲಿದೆ. ಹರಿಯಾಣದಲ್ಲಿ (223) ಗರಿಷ್ಠ ಅಭ್ಯರ್ಥಿಗಳು ಕಣದಲ್ಲಿದ್ದರೆ, ಜಮ್ಮು ಮತ್ತು ಕಾಶ್ಮೀರದಿಂದ (20) ಕನಿಷ್ಠ ಅಭ್ಯರ್ಥಿಗಳು ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಇಂದು ಸಂಜೆ ಬಹಿರಂಗ ಮತ ಪ್ರಚಾರ ಕೊನೆಗೊಂಡಿತು.

2024ರ ಲೋಕಸಭೆ ಚುನಾವಣೆ ಏಳು ಹಂತಗಳಲ್ಲಿ ನಡೆಯಲಿದ್ದು, ಈಗಾಗಲೇ 5 ಹಂತದ ಮತದಾನ ಪೂರ್ಣಗೊಂಡಿದೆ. ಮೊದಲ ಹಂತದ ಚುನಾವಣೆ ಏಪ್ರಿಲ್ 19, ಎರಡನೇ ಹಂತ ಏಪ್ರಿಲ್ 26, ಮೂರನೇ ಹಂತ ಮೇ 7, ನಾಲ್ಕನೇ ಹಂತ ಮೇ 13 ಮತ್ತು ಐದನೇ ಹಂತ ಮೇ 20ರಂದು ನಡೆಸಲಾಯಿತು. ಆರನೇ ಹಂತವು ಮೇ 25ರಂದು ಮತ್ತು ಏಳನೇ ಹಂತವು ಜೂನ್ 1ರಂದು ನಡೆಯಲಿದೆ. ಫಲಿತಾಂಶ ಜೂನ್ 4ರಂದು ಪ್ರಕಟಗೊಳ್ಳಲಿದೆ.



ಚಾಮರಾಜನಗರದಲ್ಲಿ ಗಜ ಗಣತಿ ಆರಂಭ: ಮೊದಲ ದಿನ ಆನೆ ಹಿಂಡು ಲೆಕ್ಕ ಹಾಕಿದ ಸಿಬ್ಬಂದಿ

ಚಾಮರಾಜನಗರ, ಮೇ 23– ಜಿಲ್ಲೆಯಲ್ಲಿ ಅರಣ್ಯ ಇಲಾಖೆಯು ಇಂದಿನಿಂದ ಮೂರು ದಿನಗಳ ಗಜ ಗಣತಿ ಆರಂಭಿಸಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಿಳಿಗಿರಿರಂಗನಾಥ ದೇವಾಲಯ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಕಾವೇರಿ ವನ್ಯಜೀವಿಧಾಮದಲ್ಲಿ ಮೊದಲ ದಿನ ಸಿಬ್ಬಂದಿ ಗಣತಿ ಕಾರ್ಯ ನಡೆಸಿದರು.

ಇಂದು ಆರಂಭವಾಗಿರುವ ಆನೆ ಗಣತಿ ಕಾರ್ಯ ಮೇ 25 ರವರೆಗೆ ನಡೆಯಲಿದೆ. ಮೊದಲ ದಿನವಾದ ಇಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಒಟ್ಟು 13 ವಲಯದ 113 ಬೀಟ್‌ಗಳು, ಕಾವೇರಿ ವನ್ಯಜೀವಿಧಾಮದ 43 ಗಸ್ತುಗಳ 72 ಬ್ಲಾಕ್‌ಗಳಲ್ಲಿ 162 ಸಿಬ್ಬಂದಿ ಮತ್ತು ಬಿಳಿಗಿರಿರಂಗನಾಥ ದೇವಾಲಯ ಹುಲಿ ಸಂರಕ್ಷಿತ ಪ್ರದೇಶದಲ್ಲಿ 170 ಸಿಬ್ಬಂದಿ ಆನೆ ಗಣತಿ ಕೈಗೊಂಡರು. ಗಜ ಗಣತಿಯು ಮೂರು ದಿನಗಳ ಕಾಲ ಬೆಳಗ್ಗೆ 6ರಿಂದ ಸಂಜೆ 6 ಗಂಟೆಯವರೆಗೆ ನಡೆಯಲಿದೆ. ಗುರುವಾರ 15 ಕಿಮೀ ನಡೆದು ಆನೆ ಗುಂಪುಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ಲೆಕ್ಕ ಹಾಕಿದ್ದಾರೆ. ಆನೆ ಗುಂಪಿನಲ್ಲಿ ಎಷ್ಟು ಹೆಣ್ಣಾನೆಗಳಿವೆ, ಎಷ್ಟು ಮರಿಗಳಿವೆ, ಗುಂಪಿನಲ್ಲಿ ಎಷ್ಟು ಆನೆಗಳಿವೆ ಎಂಬುದನ್ನು ಗುರುತು ಮಾಡಲಾಗಿದೆ. ಪ್ರತಿ ಬೀಟ್‌ನಲ್ಲೂ ಮೂವರು ಸಿಬ್ಬಂದಿ ನಡೆದುಕೊಂಡೇ ಆನೆ ಗುಂಪುಗಳನ್ನು ಕಂಡು ಲೆಕ್ಕ ಹಾಕಿದ್ದಾರೆ.

ಎರಡನೇ ದಿನದಂದು ಆನೆ ಲದ್ದಿಯನ್ನು ಪತ್ತೆ ಹಚ್ಚಿ ಒಂಟಿ ಆನೆಯೋ, ಗುಂಪುಗಳ ಆನೆಯೋ ಎಂದು ಆ ಪರಿಸರದಲ್ಲಿ ಆನೆಗಳ ಅಂದಾಜು ಲೆಕ್ಕ ಹಾಕಲಾಗುತ್ತದೆ. ಮೂರನೇ ದಿನ ಕೆರೆಗಳ ಬಳಿ ಸಿಬ್ಬಂದಿ ಬೆಳಗ್ಗೆಯಿಂದ ಸಂಜೆವರೆಗೆ ಕಾದು ನೀರು ಕುಡಿಯಲು ಬರುವ ಆನೆಗಳನ್ನು ಸಿಬ್ಬಂದಿ ಲೆಕ್ಕ ಹಾಕಲಿದ್ದಾರೆ. ಒಟ್ಟಾರೆಯಾಗಿ 3 ದಿನಗಳಲ್ಲಿ ಕಂಡ ಆನೆಗಳ ಲೆಕ್ಕವನ್ನು ತುಲನಾತ್ಮಕವಾಗಿ ● 9ನೇ ಪುಟಕ್ಕೆ

ಕಲುಷಿತ ನೀರು ಸೇವನೆಯಿಂದ ಸಾವು–ನೋವು

ಕೆ.ಸಾಲುಂಡಿಗೆ ಸಿಎಂ ಸಿದ್ದರಾಮಯ್ಯ ಭೇಟಿ; ಮೃತ ಕನಕರಾಜು ಕುಟುಂಬಕ್ಕೆ ಸಾಂತ್ವನ

● ಐದು ಲಕ್ಷ ರೂ. ಪರಿಹಾರ ಭರವಸೆ; ಕುಟುಂಬ ಸದಸ್ಯರಿಗೆ ಉದ್ಯೋಗ ಖಾತರಿ ● ಅಸ್ವಸ್ಥರಿಗೆ ಜಿಲ್ಲಾಡಳಿತದಿಂದಲೇ ಚಿಕಿತ್ಸಾ ವ್ಯವಸ್ಥೆ ● ಗ್ರಾಮದಲ್ಲಿ ಶುದ್ಧ ಕುಡಿಯುವ ನೀರು ಪೂರೈಕೆಗೆ ತಾಕೀತು



ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಕೆ.ಸಾಲುಂಡಿ ಗ್ರಾಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಭೇಟಿ ನೀಡಿ, ಕಲುಷಿತ ನೀರು ಸೇವನೆಯಿಂದ ಮೃತಪಟ್ಟ ಕನಕರಾಜು ಕುಟುಂಬಕ್ಕೆ ಸಾಂತ್ವನ ಹೇಳಿದರು.

ಮೈಸೂರು, ಮೇ 23(ಎಸ್‌ಬಿಡಿ)– ಮೈಸೂರು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕೆ.ಸಾಲುಂಡಿಯಲ್ಲಿ ಕಲುಷಿತ ನೀರು ಸೇವಿಸಿ ಮೃತಪಟ್ಟ ಕನಕರಾಜು ಮನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

ಕನಕರಾಜು ತಾಯಿ ರತ್ನಮ್ಮ ಹಾಗೂ ಅವರ ದೊಡ್ಡ ಮಗ ರವಿ ಅವರೊಂದಿಗೆ ಮಾತನಾಡಿ, ಸಾಂತ್ವನ ಹೇಳಿದರಲ್ಲದೆ ಸರ್ಕಾರದ ವತಿಯಿಂದ 5 ಲಕ್ಷ ರೂ. ಪರಿಹಾರ ನೀಡುವ ಭರವಸೆ ನೀಡಿದರು. ಇದೇ ವೇಳೆ ಕುಟುಂಬಕ್ಕೆ ವೈಯಕ್ತಿಕ ಆರ್ಥಿಕ ನೆರವು ನೀಡಿದರು. ಈ ವೇಳೆ ಪುತ್ರ, ಮಾಜಿ ಶಾಸಕ ಡಾ.ಯತೀಂದ್ರ ನೀಡಿದ ವೈಯಕ್ತಿಕ ● 6ನೇ ಪುಟಕ್ಕೆ

ಬೋಗಾದಿ ಪಪಂ ಮುಖ್ಯಾಧಿಕಾರಿ ಸೇರಿ ಮೂವರು ಅಧಿಕಾರಿಗಳ ಅಮಾನತು

ಮೈಸೂರು, ಮೇ 23– ಕಲುಷಿತ ನೀರು ಸರಬರಾಜು ಮಾಡಿದ ಆರೋಪದಡಿ ಬೋಗಾದಿ ಪಟ್ಟಣ ಪಂಚಾಯ್ತಿಯ ಮುಖ್ಯಾಧಿಕಾರಿ ಸೇರಿದಂತೆ ಮೂವರನ್ನು ಅಮಾನತು ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬೋಗಾದಿ ಪಟ್ಟಣ ಪಂಚಾಯ್ತಿಯವರು ನೀರಿನ ಪರೀಕ್ಷೆ ನಡೆಸದೆ ಕಲುಷಿತ ನೀರು ಪೂರೈಸಿದ ಕಾರಣ ಕೆ.ಸಾಲುಂಡಿ ಗ್ರಾಮದಲ್ಲಿ ಅನೇಕ ಜನ ಅಸ್ವಸ್ಥರಾಗಿದ್ದಾರೆ. ಓರ್ವ ಯುವಕ ಸಾವನ್ನಪ್ಪಿದ್ದಾನೆ. ನಿರ್ಲಕ್ಷ್ಯ ವಹಿಸಿದ ಬೋಗಾದಿ ಪಟ್ಟಣ ಪಂಚಾಯ್ತಿ ಚೀಫ್ ಆಫೀಸರ್, ಇಇ ಹಾಗೂ ಎಇಇ ಅವರನ್ನು ಅಮಾನತು ಮಾಡಲಾಗಿದೆ. ಇದಕ್ಕೂ ಮುಡಾಗೂ ಸಂಬಂಧವಿಲ್ಲ ಎಂದು ತಿಳಿಸಿದರು.

ಜಿಲ್ಲಾಡಳಿತಕ್ಕೆ ಸೂಚನೆ: ಹವಾಮಾನ ಮುನ್ಸೂಚನೆ ಪ್ರಕಾರ ಈ ಬಾರಿ ಅತೀ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ. ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಬಹುದು. ಈ ಹಿನ್ನೆಲೆಯಲ್ಲಿ ಯಾವುದೇ ಪರಿಸ್ಥಿತಿ ನಿರ್ವಹಣೆಗೆ ಜಿಲ್ಲಾಡಳಿತ ಸಜ್ಜಾಗಿರಬೇಕು. ಹಿಂದೆ ಪ್ರವಾಹ ಉಂಟಾಗಿದ್ದ ಪ್ರದೇಶಗಳಲ್ಲಿ ಮುಂಜಾಗ್ರತೆ ವಹಿಸಬೇಕು. ಯಾವುದೇ ಸಮಸ್ಯೆ ಆಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ ಎಂದರು.

ನಿತ್ಯ ಪರೀಕ್ಷೆ ಮಾಡಿ: ಜಿಲ್ಲೆಯ ಎರಡು ಕಡೆ ಕಾಲರಾ ಭೀತಿ ಎದುರಾಗಿರುವುದರಿಂದ ಕಲುಷಿತ ನೀರು ಪೂರೈಕೆಯಾಗದಂತೆ ಕ್ರಮ ವಹಿಸಬೇಕು. ಪ್ರತಿನಿತ್ಯ ನೀರಿನ ಪರೀಕ್ಷೆ ನಡೆಸಬೇಕು. ನೀರಿನ ಶುದ್ಧತೆಯನ್ನು ಖಚಿತಪಡಿಸಿಕೊಳ್ಳಬೇಕು. ಮುಂಗಾರು ಶುರುವಾಗುತ್ತಿದ್ದು, ಎಲ್ಲೆಡೆ ಕೃಷಿ ಚಟುವಟಿಕೆ ಆರಂಭವಾಗುತ್ತದೆ. ಗೊಬ್ಬರ, ಬಿತ್ತನೆ ಬೀಜ ಸೇರಿದಂತೆ ಯಾವುದಕ್ಕೂ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ರೈತರಿಂದ ದೂರು ಬರದಂತೆ ನಿರ್ವಹಣೆ ಮಾಡಬೇಕು.

ಮೈಸೂರಿನ ಲಿಂಗಾಂಬುದಿ ಕೆರೆ ಆವರಣ ಆಗಲಿದೆ

‘ಮೀಸಲು ಅರಣ್ಯ’

● ಕರ್ನಾಟಕ ಅರಣ್ಯ ಕಾಯ್ದೆ 1963ರ 17ನೇ ನಿಯಮಕ್ಕೆ ಸೇರ್ಪಡೆ ಪ್ರಕ್ರಿಯೆಗೆ ಚಾಲನೆ
● ಕೆರೆ ಜಾಗದ ಹಕ್ಕು ಸೇರಿದಂತೆ ಏನೇ ಆಕ್ಷೇಪಣೆಗಳಿದ್ದರೂ ಸಲ್ಲಿಸಲು ಜೂ.15ರ ಗಡುವು
● ಬಳಿಕ ಸರ್ವೆ ಮಾಡಿ 218.23 ಎಕರೆ ಕೆರೆ ಜಾಗ ಮೀಸಲು ಅರಣ್ಯ ಘೋಷಣೆ
● ವನ್ಯಜೀವಿ, ಪಕ್ಷಿ ಸಂಕುಲ, ಕೆರೆ ಪರಿಸರವೂ ಸೇರಿದಂತೆ ಸಂರಕ್ಷಣೆಗೆ ಆದ್ಯತೆ



■ ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಮೇ 23– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಹಿತಕರ ವಾತಾವರಣಕ್ಕೆ ಪೂರಕವಾದ ಕೆರೆಗಳ ಸಂರಕ್ಷಣೆ ಅತ್ಯಂತ ಅವಶ್ಯ. ಈ ನಿಟ್ಟಿನಲ್ಲಿ ಲಿಂಗಾಂಬುದಿ ಕೆರೆಯ 218.23 ಎಕರೆ ವಿಶಾಲವಾದ ಪ್ರದೇಶವನ್ನು ‘ಮೀಸಲು ಅರಣ್ಯ’ ಪ್ರದೇಶವಾಗಿ ಘೋಷಿಸುವ ಪ್ರಕ್ರಿಯೆಗೆ ಚಾಲನೆ ದೊರೆತಿದ್ದು, ಜುಲೈ ಅಂತ್ಯದ ವೇಳೆಗೆ ಮೈಸೂರು ನಗರ ವ್ಯಾಪ್ತಿಯಲ್ಲೇ ಹೃದಯಭಾಗದಲ್ಲಿ ಮತ್ತೊಂದು ಮೀಸಲು ಅರಣ್ಯ ತಲೆ ಎತ್ತಲಿದೆ.

ಮೈಸೂರಿನ ಪ್ರಮುಖ ಕೆರೆಗಳಲ್ಲಿ ಬೃಹತ್ತಾದ ಲಿಂಗಾಂಬುದಿ ಕೆರೆಗೆ ಕಲುಷಿತ ಹಾಗೂ ಒಳಚರಂಡಿ ನೀರು ವ್ಯಾಪಕವಾಗಿ ಹರಿದು ಪರಿಸರ ಹಾಳಾಗುತ್ತಿದ್ದು, ಇದೀಗ ನೈಸರ್ಗಿಕ ಕಾಯಕಲ್ಪ ನೀಡಲು ಸಹಕಾರಿಯಾಗಿ ಘೋಷಣೆ ಶೀಘ್ರವೇ ಹೊರ ಬೀಳುವ ಕಾಲ ಸನ್ನಿಹಿತವಾಗಿರುವುದರಿಂದ ಪರಿಸರ ಹಾಗೂ ವನ್ಯಜೀವಿ ಪ್ರೇಮಿಗಳಲ್ಲಿ ಸಂತಸ ಮನೆ ಮಾಡಿದೆ. ವಲಸೆ ಪಕ್ಷಿಗಳ ಆವಾಸ ಸ್ಥಾನವೂ ಆಗಿರುವ ಲಿಂಗಾಂಬುದಿಕೆರೆ ಈಗಲೂ ಸಹಜ ಅರಣ್ಯ ಪ್ರದೇಶದಂತೆಯೇ ಇದೆ. ಅರಣ್ಯ ಪ್ರದೇಶದ ನೈಸರ್ಗಿಕ ವಾತಾವರಣವುಳ್ಳ ಈ ಕೆರೆಯಲ್ಲಿ ಚಿರತೆ, ನರಿ, ಕಾಡುಹಂದಿ ಹಾಗೂ ವೈವಿಧ್ಯಮಯ ಪಕ್ಷಿ ಸಂಕುಲವನ್ನು ಹೊಂದಿದೆ. ಇದರೊಂದಿಗೆ ವಿದೇಶಿ ಪಕ್ಷಿಗಳೂ ● 9ನೇ ಪುಟಕ್ಕೆ

ಕೆರೆ ಜಾಗದ ಮೇಲೆ ಹಕ್ಕಿದ್ದರೆ ದಾಖಲೆ ಸಲ್ಲಿಸಿ...

ಲಿಂಗಾಂಬುದಿ ಕೆರೆ ಜಾಗದ ಮೇಲೆ ಹಕ್ಕು, ಋಣ ಇಲ್ಲವೇ ಬೇರಾವುದೇ ತಕರಾರುಗಳಿದ್ದರೆ ಜೂ.15ರೊಳಗೆ ಅಗತ್ಯ ದಾಖಲೆಯೊಂದಿಗೆ ಅರಣ್ಯ ವ್ಯವಸ್ಥಾಪನಾಧಿಕಾರಿಗಳ ಕಚೇರಿ, ಮೈಸೂರು ವಿಭಾಗ, ಕೆಎಸ್‌ಡಿಎಲ್ ಕಾಂಪೌಂಡ್, ಡಾ.ಬಿ.ಆರ್. ಅಂಬೇಡ್ಕರ್ ರಸ್ತೆ ಎನ್‌ಐಇ ಕಾಲೇಜು ಹಿಂಭಾಗ, ಅಶೋಕಪುರಂ, ಮೈಸೂರು–570008. ಈ ವಿಳಾಸಕ್ಕೆ ಖುದ್ದಾಗಿ ಸಲ್ಲಿಸಬಹುದಾಗಿದೆ.



ಮೈಸೂರಿನ ಲಿಂಗಾಂಬುದಿ ಕೆರೆಯ ವಿಹಂಗಮ ನೋಟ.

ಮೈಸೂರು ಜಿಪಂ ಕಚೇರಿಯಲ್ಲಿ ಜಲ ಸೇವಾ ನಿಯಂತ್ರಣ ಕೊಠಡಿ ಆರಂಭ

ಮೈಸೂರು,ಮೇ 23(ಪಿಎಂ)– ಕುಡಿಯುವ ನೀರಿನ ಅಭಾವ ಉಂಟಾಗದಂತೆ ತಡೆಗಟ್ಟಲು ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಜಲ ಸೇವಾ ನಿಯಂತ್ರಣ ಕೊಠಡಿ ತೆರೆಯಲಾಗಿದೆ.

ಮೈಸೂರು ಜಿಲ್ಲೆಯಲ್ಲಿ ಪ್ರಸ್ತುತ ಬರ ಪರಿಸ್ಥಿತಿಯಿಂದ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ಸ್ವೀಕೃತವಾಗುವ ದೂರುಗಳನ್ನು ದಾಖಲಿಸಲು ಮೈಸೂರು ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ 24X7 ಕಂಟ್ರೋಲ್ ರೂಮ್ ವ್ಯವಸ್ಥೆ ಮಾಡಲಾಗಿದೆ.

ಸದರಿ ಸಹಾಯವಾಣಿ ಸಂಖ್ಯೆ 0821–2526355ಗೆ ಕರೆ ಮಾಡಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ದೂರು ದಾಖಲಿಸಬಹುದು. ಅಲ್ಲದೆ, ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸಮರ್ಪಕ ಕುಡಿಯುವ ನೀರಿನ ಪೂರೈಕೆಯ ಮೇಲ್ವಿಚಾರಣೆಗಾಗಿ ಜಿಲ್ಲಾ ಪಂಚಾಯಿತಿಯಿಂದ ತಾಲೂಕುಗಳಿಗೆ ನೋಡೆಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಜಿಪಂ ಪ್ರಕಟಣೆ ತಿಳಿಸಿದೆ.

ನೋಡಲ್ ಅಧಿಕಾರಿಗಳು: ಮೈಸೂರು ಹಾಗೂ ಪಿರಿಯಾಪಟ್ಟಣ ತಾಲೂಕುಗಳಿಗೆ ಜಿಪಂ ಉಪಕಾರ್ಯದರ್ಶಿಯವರನ್ನು (ಆಡಳಿತ) ನೋಡೆಲ್ ಅಧಿಕಾರಿಯಾಗಿ ನೇಮಿಸಲಾಗಿದೆ. ಅವರ ದೂ.ಸಂ. 0821–2526321, 94808 73002 ಆಗಿದೆ. ಅಂತೆಯೇ ನಂಜನಗೂಡು, ಹೆಚ್‌ಡಿ ಕೋಟೆ ಹಾಗೂ ಸರಗೂರು ತಾಲೂಕುಗಳಿಗೆ ಜಿಪಂ ಉಪಕಾರ್ಯದರ್ಶಿಯವರನ್ನು (ಅಭಿವೃದ್ಧಿ) ನೋಡೆಲ್ ಅಧಿಕಾರಿಯಾಗಿ ನಿಯೋಜಿಸಿದ್ದು, ಅವರ ದೂ.ಸಂ. 0821–2526354, 94806 73666 ಆಗಿದೆ. ಟಿ.ನರಸೀಪುರ ತಾಲೂಕಿಗೆ ಜಿಪಂ ಯೋಜನಾ ನಿರ್ದೇಶಕರನ್ನು ನೋಡೆಲ್ ಅಧಿಕಾರಿಯಾಗಿ ನೇಮಿಸಿದ್ದು, ಅವರ ದೂ. ಸಂ. 0821–2526355, 94808 73001 ಆಗಿದೆ.

ಕೆಆರ್ ನಗರ ಮತ್ತು ಸಾಲಿಗ್ರಾಮಕ್ಕೆ ಜಿಪಂ ಮುಖ್ಯ ಯೋಜನಾಧಿಕಾರಿಯವರನ್ನು ನೋಡೆಲ್ ಅಧಿಕಾರಿಯಾಗಿ ನೇಮಿಸಿದ್ದು, ಅವರ ದೂ.ಸಂ. 0821–2526308, 94808 73004 ಆಗಿದೆ. ಹುಣಸೂರು ತಾಲೂಕಿಗೆ ಜಿಪಂ ಮುಖ್ಯ ಲೆಕ್ಕಾಧಿಕಾರಿಯವರನ್ನು ನೋಡೆಲ್ ಅಧಿಕಾರಿಯಾಗಿ ನಿಯೋಜಿಸಿದ್ದು, ಅವರ ದೂ.ಸಂ. 0821–2526302, 94808 73003 ಆಗಿದೆ.

ಶುದ್ಧ ಕುಡಿಯುವ ನೀರಿಗೆ ತ್ಯಾಜ್ಯ ನೀರು ಸೇರ್ಪಡೆಯಾಗುತ್ತಿದ್ದರೆ ಕೂಡಲೇ ಮಾಹಿತಿ ನೀಡಿ

ಮೈಸೂರು, ಮೇ 23(ಎಸ್‌ಪಿಎನ್)– ಮೈಸೂರು ವಾಣಿವಿಲಾಸ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದಿಂದ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ವಿವಿಧ ಮೂಲಗಳಿಂದ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದ್ದು, ಇತರೆ ಕಾರಣಗಳಿಂದ ಕುಡಿಯುವ ನೀರಿಗೆ ತ್ಯಾಜ್ಯ ನೀರು ಸೇರಿ ಕಲುಷಿತಗೊಳ್ಳುತ್ತಿರುವ ಬಗ್ಗೆ ಸಾರ್ವಜನಿಕರಿಗೆ ಕಂಡುಬಂದಲ್ಲಿ ಪತ್ರ ಮುಖೇನ ಕಾರ್ಯಪಾಲಕ ಅಭಿಯಂತರರು ಈ ಮೇಲ್ (mysoreugd gmail. com/eevvww2012 @gmail.com) ಮೂಲಕ ತಿಳಿಸುವಂತೆ ಕೋರಿದ್ದಾರೆ.

ಹೆಚ್ಚಿನ ವಿವರಗಳಿಗೆ ದೂ.ಸಂ: 0821 –2418849/94498–41196 ಮುಖಾಂತರ ಸಾರ್ವಜನಿಕರು ಅಧಿಕಾರಿಗಳನ್ನು ಸಂಪರ್ಕಿಸಬಹುದು. ಅಲ್ಲದೆ, ಕೆಆರ್‌ಎಸ್ ಮತ್ತು ಕಬಿನಿ ಜಲಾಶಯಕ್ಕೆ ಮಳೆ ಸೇರುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಮುನ್ನೆಚ್ಚರಿಕಾ ಕ್ರಮವಾಗಿ ನೀರನ್ನು ಕುದಿಸಿ, ಆರಿಸಿ ಕುಡಿಯುವಂತೆ ವಾಣಿ ವಿಲಾಸ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗ (ಪಶ್ಚಿಮ) ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ನೀರು ಕುದಿಸಿ, ಆರಿಸಿ ಕುಡಿಯಲು ಮನವಿ

> ಮೈಸೂರು ಹೊರವಲಯದಲ್ಲಿ ಕಲುಷಿತ ನೀರು ಸೇವಿಸಿ ಓರ್ವ ಯುವಕ ಸಾವನ್ನಪ್ಪಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್, ಕಬಿನಿ ಜಲಾಶಯಗಳ ನೀರನ್ನು ಟ್ಯಾಂಕ್‌ಗಳಲ್ಲಿ ಶೇಖರಿಸಿ ಮೈಸೂರಿನ ವಿವಿಧ ಬಡಾವಣೆಗಳಿಗೆ ಸರಬರಾಜು ಮಾಡಲಾಗುತ್ತಿವೆ. ಆದರೆ, ಟ್ಯಾಂಕ್‌ಗಳ ಸ್ವಚ್ಛತೆ ಕಂಡು ಅದೆಷ್ಟು ವರ್ಷಗಳು ಕಳೆದಿದೆಯೋ ತಿಳಿಯದಾಗಿದ್ದು, ಕೂಡಲೇ ಟ್ಯಾಂಕ್‌ಗಳ ಸ್ವಚ್ಛತೆಗೆ ಮುಂದಾಗುವಂತೆ ಪಾಲಿಕೆ ಅಧಿಕಾರಿಗಳಿಗೆ ಸಾರ್ವಜನಿಕರು ಮನವಿ ಮಾಡಿದ್ದಾರೆ.

ಡಾ.ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಶಕ್ತಿ ತುಂಬಿದರು

ಧಮ್ಮ ಪದ-ಜಾಗತಿಕ ಅನಿವಾರ್ಯ ಉಪನ್ಯಾಸದಲ್ಲಿ ಪ್ರೊ.ಶಂಕರ್ ವಿಚಾರ ಮಂಡನೆ

ಮೈಸೂರು, ಮೇ23(ಬಿಎಲ್‌ಯು)– ರಾಜಕೀಯ, ಸಾಮಾಜಿಕ ಇತರೆ ಕಾರಣಕ್ಕೆ ಭಾರತದಲ್ಲಿ ಬೌದ್ಧ ಧರ್ಮ ಕ್ಷೀಣಿಸುವ ಸಮಯದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಬೌದ್ಧ ಧರ್ಮ ಸ್ವೀಕರಿಸಿ ಶಕ್ತಿ ತುಂಬಿದರು ಎಂದು ಖ್ಯಾತ ವಿಮರ್ಶಕ ಪ್ರೊ.ಡಿ.ಎ. ಶಂಕರ್ ಇಂದಿಲ್ಲಿ ತಿಳಿಸಿದರು.



ಮಾನಸಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ 2568ನೇ ಬುದ್ಧ ಪೂರ್ಣಿಮೆ ಅಂಗವಾಗಿ ಆಯೋಜಿಸಿದ್ದ ಧಮ್ಮ ಪದ–ಜಾಗತಿಕ ಅನಿವಾರ್ಯ ಕುರಿತ ಉಪನ್ಯಾಸವನ್ನು ಬೈಲುಕುಪ್ಪೆಯ ಸೆರಾ ಜೆ ಮೊನಾಸ್ಟಿಕ್ ವಿಶ್ವವಿದ್ಯಾನಿಲಯದ ಭಿಕ್ಕು ಜಂಪಾ ಗ್ಯಾಲ್ ಸ್ಟೇನ್ ಉದ್ಘಾಟಿಸಿದರು.

ಮೈಸೂರಿನ ಮಾನಸಗಂಗೋತ್ರಿಯ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ 2568ನೇ ಬುದ್ಧ ಪೂರ್ಣಿಮೆ ಅಂಗವಾಗಿ ಗುರುವಾರ ಆಯೋಜಿಸಿದ್ದ ಧಮ್ಮ ಪದ– ಜಾಗತಿಕ ಅನಿವಾರ್ಯ ಕುರಿತು ಉಪನ್ಯಾಸ ನೀಡಿದ ಅವರು, ಭಾರತದಲ್ಲಿ ಡಾ.ಅಂಬೇಡ್ಕರ್ ಬೌದ್ಧ ಧರ್ಮವನ್ನು ಪುನರುತ್ಥಾನ ಮಾಡಿದ ನಂತರ ಬೌದ್ಧ ಧರ್ಮ ವಿಸ್ತರಣೆ ಪಡೆಯುತ್ತಾ ಹೋಗಿದೆ ಎಂದು ತಿಳಿಸಿದರು.

ಹಿಂದೂ ಧರ್ಮದಲ್ಲಿ ಸಾವಿರಾರು ದೇವತೆಗಳಿದ್ದರೂ ಡಾ.ಬಿ.ಆರ್. ಅಂಬೇಡ್ಕರ್ ಹಿಂದೂ ಧರ್ಮ ತ್ಯಜಿಸಿ ಬೌದ್ಧ ಧರ್ಮ ಸ್ವೀಕರಿಸಿದರು. ಗೌತಮ ಬುದ್ಧ ಪುರಾಣ ಪುರುಷನಾಗಿರಲಿಲ್ಲ, ಹುಟ್ಟಿದ ಬಗ್ಗೆ ಪವಾಡಗಳಾಗಿರಲಿಲ್ಲ, ಅದ್ಭುತಗಳಿರಲಿಲ್ಲ. ಗೌತಮ ಬುದ್ಧ ಬೆಳೆದ ಹಾದಿ, ಬದುಕಿದ ರೀತಿಯೆಲ್ಲಾ ಸಹಜವಾಗಿತ್ತು. ಆದರೂ ಡಾ.ಅಂಬೇಡ್ಕರ್ ಅವರ ವೈಚಾರಿಕ ಮನಸ್ಸು ಗೌತಮ ಬುದ್ಧನನ್ನು ಆಕರ್ಷಿಸಿತು ಎಂದು ಪ್ರೊ.ಡಿ.ಎ.ಶಂಕರ್ ಹೇಳಿದರು.

ಬದುಕಿನಲ್ಲಿ ಅರ್ಥವಾಗದ ವಿಚಾರಗಳನ್ನು ಬುದ್ಧ ಸರಳ ರೀತಿಯಲ್ಲಿ ಬೋಧನೆ ಮಾಡಿದ. ದೇವರು, ಸ್ವರ್ಗ–ನರಕ ಪರಿಕಲ್ಪನೆ ಬಿಟ್ಟು ನೆಮ್ಮದಿ ಜೀವನವನ್ನು ಬೋಧಿಸಿದ. ತೀರದ ಬಾಯಾರಿಕೆ ಹೋಗ ಬೇಕೆಂದರೆ ಆಸೆ ಬಿಡಬೇಕು ಎಂದು ಬುದ್ಧ ಮನದಟ್ಟು ಮಾಡಿದನು ಎಂದರು. ಬುದ್ಧ ಪ್ರತಿಯೊಂದು ವಿಚಾರಗಳನ್ನು ವೈಚಾರಿಕ ನೆಲೆಗಟ್ಟಿನಲ್ಲಿ ಬೋಧಿಸಿದನು ಎಂದು ಹೇಳಿದರು.

ಯೋಚನೆ ಸರಿ ಇಲ್ಲವೆಂದರೆ ನಡವಳಿಕೆ ಸರಿ ಇರುವುದಿಲ್ಲ, ನಡವಳಿಕೆ ಸರಿ ಇಲ್ಲದಿದ್ದರೆ ಬದುಕಿನಲ್ಲಿ ನೋವಿನ ಕ್ಷಣ ಅನುಭವಿಸಬೇಕು. ಚಾವಣಿ ಸರಿ ಇಲ್ಲವೆಂದರೆ ಮನೆಯೊಳಗೆ ಮಳೆ ನೀರು ಹೇಗೆ ಸೇರುವುದೋ, ಹಾಗೆ ಚಿಂತನೆ ಸರಿ ಇಲ್ಲವೆಂದರೆ ಬೇಡವಾದ ವಿಚಾರಗಳು ತಲೆಗೆ ಹೊಕ್ಕುತ್ತವೆ ಎಂದು ಪ್ರೊ.ಡಿ.ಎ. ಶಂಕರ್ ತಿಳಿಸಿದರು.

ಬೈಲುಕುಪ್ಪೆಯ ಸೆರಾ ಜೆ ಮೊನಾಸ್ಟಿಕ್ ವಿಶ್ವವಿದ್ಯಾನಿಲಯದ ಭಿಕ್ಕು ಜಂಪಾ ಗ್ಯಾಲ್ ಸ್ಟೇನ್ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿದರು. ಭಿಕ್ಕು ಸೋನಮ್, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಪ್ರಾಧ್ಯಾಪಕ ಡಾ.ನರೇಂದ್ರಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

> ಮಂತ್ರ, ತಂತ್ರ, ಜಪ ಮಾಡುವುದರಿಂದ ದೇಹಕ್ಕೆ ದಂಡನೆ ಆಗುತ್ತದೆ. ಆದರೆ ದೇಹ ದಂಡನೆಗಿಂತ ಮನಸ್ಸನ್ನು ಮುಕ್ತವಾಗಿಟ್ಟುಕೊಳ್ಳಬೇಕು. ನಡವಳಿಕೆ ಸರಿ ಇಟ್ಟುಕೊಂಡರೆ ಎಲ್ಲವೂ ಸರಿ ಹೊಂದುತ್ತದೆ. ತಪಸ್ಸು ಮಾಡುವುದರಿಂದ ಸತ್ಯ ದರ್ಶನವಾಗುವುದಿಲ್ಲ. ನಮ್ಮ ಮನಸ್ಸು ಹಾಗೂ ಚಿಂತನೆ ಸರಿ ಇದ್ದರೆ ಸತ್ಯ ದರ್ಶನವಾಗುತ್ತದೆ. **–ಪ್ರೊ.ಶಂಕರ್**

ಪಂಡಿತ್ ನೆಹರೂ ಪ್ರೌಢಶಾಲೆಗೆ ಶೇ.100 ಫಲಿತಾಂಶ

ಮೈಸೂರು: ಈ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ಕುವೆಂಪುನಗರದ ಪಂಡಿತ್ ನೆಹರೂ ಪ್ರೌಢಶಾಲೆಗೆ ಶೇ.100 ಫಲಿತಾಂಶ ಲಭಿಸಿದೆ. ಒಟ್ಟು 30 ವಿದ್ಯಾರ್ಥಿಗಳಲ್ಲಿ 13 ಮಂದಿ ಶೇ.85ಕ್ಕಿಂತಲೂ ಹೆಚ್ಚು ಅಂಕ ಗಳಿಸಿದ್ದಾರೆ. 14 ಮಂದಿ ಪ್ರಥಮ ಶ್ರೇಣಿ, ಮೂವರು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಕು.ಹೆಚ್. ಯೋಗಿತಾ 611 ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಅರ್ಜಿಗೆ ಆಹ್ವಾನ

ಮೈಸೂರು: ಶ್ರೀ ಸಂಜೀವಿನಿ ಫೌಂಡೇಶನ್ ಫಾರ್ ರೂರಲ್ ಆರ್ಗನೈಸೇಷನ್ ಹಾಗೂ ಬಾಲ್ಕ್ ಕಂಪ್ಯೂಟರ್ ಎಜುಕೇಷನ್ ಸೆಂಟರ್ ವತಿಯಿಂದ ಮಹಿಳೆಯರಿಗೆ ಉಚಿತ ಬ್ಯೂಟಿ ಪಾರ್ಲರ್ ತರಬೇತಿ, ಲೇಡೀಸ್ ಟೈಲರಿಂಗ್, ಬ್ಲೌಸ್ ಹ್ಯಾಂಡ್ ವರ್ಕ್, ಬ್ರೈಡಲ್ ಮೇಕಪ್ ಹಾಗೂ ಕಂಪ್ಯೂಟರ್ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದೆ. ಸರಸ್ವತಿಪುರಂನಲ್ಲಿರುವ ಜವರೇಗೌಡ ಪಾರ್ಕ್ ಹತ್ತಿರ ನಂ51, 5ನೇ ಕ್ರಾಸ್, 8ನೇ ಮೈನ್ ಬಾಲ್ಕ್ ಕಂಪ್ಯೂಟರ್ ಕೇಂದ್ರದಲ್ಲಿ ತರಬೇತಿ ನೀಡಲಾಗುವುದು. ಮೇ 27ರಂದು ಅರ್ಜಿ ಸಲ್ಲಿಸಲು ಕಡೆಯ ದಿನ. ಆಸಕ್ತರು ಮಾಹಿತಿಗೆ ಮೊ.ಸಂ. 7411330015, 9141100667 ಸಂಪರ್ಕಿಸಬಹುದು.

ಮೈಸೂರು ಕಾನೂನು ವಿವಿ ಕುಲಪತಿ ಪ್ರೊ.ಬಸವರಾಜುಗೆ ನಾಳೆ ಅಭಿನಂದನೆ

ಮೈವಿವಿ ಪ್ರಾಧ್ಯಾಪಕ ಹುದ್ದೆಯಿಂದ ವಯೋನಿವೃತ್ತಿ



ಮೈಸೂರು: ಕಾನೂನು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಸಿ.ಬಸವರಾಜು ಅವರ ಅಭಿನಂದನಾ ಸಮಾರಂಭವು ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಮೇ 25ರ ಬೆಳಗ್ಗೆ 10.30ಕ್ಕೆ ನಡೆಯಲಿದೆ. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಹೈಕೋರ್ಟ್ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ, ಮೈಸೂರು ವಿವಿ ಕುಲ ಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿನಂ ದಿಸುವರು. ಮುಖ್ಯ ಅತಿಥಿಗಳಾಗಿ ಸಾಹಿತಿ ಪ್ರೊ.ಪ್ರಧಾನ ಗುರುದತ್ತ, ಸಮಾಜ ಸೇವಕ ಮ. ವೆಂಕಟ ರಾಮ್, ವಿಶ್ರಾಂತ ಕುಲಪತಿಗಳಾದ ಪ್ರೊ.ಕೆ.ಎಸ್. ರಂಗಪ್ಪ, ಪ್ರೊ.ಕೆ. ಆರ್.ವೇಣು ಗೋಪಾಲ್, ಪ್ರೊ.ವಿ.ವಿಜಯಕುಮಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಭಾಗವಹಿಸುವರು. ಕುವೆಂಪು ವಿವಿಯ ವಿಶ್ರಾಂತ ಕುಲಪತಿ ಪ್ರೊ.ಪಿ. ವೆಂಕಟರಾಮಯ್ಯ ಅಧ್ಯಕ್ಷತೆ ವಹಿಸುವರು ಎಂದು ಅಭಿನಂದನಾ ಸಮಿತಿಯ ಅಧ್ಯಕ್ಷ ಪ್ರೊ.ಎಂ.ಎಸ್. ಬೆಂಜಮಿನ್, ಗೌರವಾಧ್ಯಕ್ಷ ಡಾ.ಕೆ.ಬಿ.ಕೆಂಪೇಗೌಡ ಹಾಗೂ ಪ್ರಧಾನ ಕಾರ್ಯದರ್ಶಿ ಪ್ರೊ. ಎನ್. ಸತೀಶ್ ಗೌಡ ತಿಳಿಸಿದ್ದಾರೆ.

ಪ್ರೊ.ಸಿ. ಬಸವರಾಜು ಅವರು ಕಾನೂನು ವಿವಿ ಕುಲಪತಿಯಾಗಿ ಮುಂದುವರೆದಿದ್ದು, ಮೈವಿವಿ ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತಿ ಆಗುತ್ತಿರುವುದರಿಂದ ಈ ಬೀಳ್ಕೊಡುಗೆ ಸಮಾರಂಭ ಏರ್ಪ ಡಿಸಲಾಗಿದೆ ಎಂದು ಅವರು ಹೇಳಿದ್ದಾರೆ.


ಇಂದು, ನಾಳೆ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ವಾರ್ಷಿಕ ಸಾಂಸ್ಕೃತಿಕ ಹಬ್ಬ

ಮೈಸೂರು, ಮೇ 23– ಬನ್ನೂರು ರಸ್ತೆಯಲ್ಲಿರುವ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಾಲೇಜಿನ ವಾರ್ಷಿಕ ಸಾಂಸ್ಕೃತಿಕ ಹಬ್ಬ ಆತ್ಮೀಯ–2024 ಅಂಗವಾಗಿ ಕಾಲೇಜಿನ ವಿದ್ಯಾರ್ಥಿಗಳಿಂದ ವಿವಿಧ ಮನರಂಜನೆ ಕಾರ್ಯಕ್ರಮಗಳನ್ನು ಮೇ 24, 25ರಂದು ಸಂಜೆ 6:30ರಿಂದ ಆಯೋಜಿಸಲಾಗಿದೆ ಎಂದು ಎಟಿಎಂಇ ಕಾಲೇಜಿನ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಡಾ.ಡಿ.ಪುಟ್ಟೇಗೌಡ ತಿಳಿಸಿದ್ದಾರೆ.

ಮುಖ್ಯ ಅತಿಥಿಗಳಾಗಿ ಚಲನಚಿತ್ರ ನಟ ನೆನಪಿರಲಿ ಪ್ರೇಮ್, ಗೌರವ ಅತಿಥಿಗಳಾಗಿ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯ ಅಧ್ಯಕ್ಷ ಆರ್.ಗುರು, ಕೃಷ್ಣ ಗ್ರೂಪ್ಸ್ ಆಫ್ ಹಾಸ್ಪಿಟಲ್ ಮ್ಯಾನೇಜಿಂಗ್ ಟ್ರಸ್ಟಿ ಡಾ.ಸುರೇಶ್ ಶೆಟ್ಟಿ, ಸಮಾಜ ಸೇವಕ ಬನ್ನೂರು ಡಾ.ಮಹೇಂದ್ರಸಿಂಗ್ ಕಾಳಪ್ಪ, ರಾಜ್ಯ ಸರ್ಕಾರದ ಆಯುರ್ವೇದ ಸೆಂಟರ್‌ನ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ್ ಶೆಣೈ ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ಅಧ್ಯಕ್ಷ ಎಲ್.ಅರುಣ್‌ಕುಮಾರ್ ವಹಿಸಲಿದ್ದಾರೆ. ಸಮಾರಂಭದಲ್ಲಿ ಕಾಲೇಜಿನ ಆಡಳಿತ ಮಂಡಳಿ ಕಾರ್ಯದರ್ಶಿ ಕೆ.ಶಿವಶಂಕರ್, ಖಜಾಂಚಿ ಆರ್ ವೀರೇಶ್, ಪ್ರಾಂಶುಪಾಲ ಡಾ..ಎಲ್ ಬಸವರಾಜ್ ಉಪಸ್ಥಿತರಿರಲಿದ್ದಾರೆ. ಮೇ 24ರ ಸಂಜೆ ಜಯಂತಿ ಬಲ್ಲಾಳ್ ನೇತೃತ್ವದಲ್ಲಿ ಚಲನಚಿತ್ರ ನಟ–ನಟಿಯರೊಂದಿಗೆ ವಿದ್ಯಾರ್ಥಿಗಳ ಫ್ಯಾಶನ್ ವಾಕ್ ನಡೆಯಲಿದೆ. 25ರ ಸಂಜೆ ಲೈವ್ ಕನ್ಸರ್ಟ್ ಹಾಗೂ ಬ್ಯಾಂಡ್ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 29ಕ್ಕೆ ಬಸವ ಜಯಂತಿ; ಕಾಯಕಶ್ರೀ ಪ್ರಶಸ್ತಿ ಪ್ರದಾನ




ಮೈಸೂರು,ಮೇ 23(ಎಂಟಿವೈ)– ಮೈಸೂರಿನ ಅಗ್ರಹಾರದ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಮೇ 29ರಂದು ಸಂಜೆ 5ಕ್ಕೆ ಬಸವ ಜಯಂತಿ, ಕಾಯಕ ದಿನಾಚರಣೆ ಹಾಗೂ ಕಾಯಕ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ಶರಣ ಸಾಹಿತ್ಯ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶರಣ ಸಾಹಿತ್ಯ ಪರಿಷತ್ ಹಾಗೂ ಕದಳಿ ಮಹಿಳಾ ವೇದಿಕೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಬಸವ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯವನ್ನು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ.ಧರಣಿದೇವಿ ಮಾಲಗತ್ತಿ ಕಾರ್ಯಕ್ರಮವನ್ನು ಉದ್ಘಾಟಿಸಿ, 'ಬಸವಣ್ಣ ಮತ್ತು ಕಾಯಕ' ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಕಾನೂನು ಸೇವೆಗಳ ಸದಸ್ಯ ಕಾರ್ಯದರ್ಶಿ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಜಿ.ದಿನೇಶ್ ವಹಿಸಲಿದ್ದಾರೆ. ಇದೇ ವೇಳೆ ಎಲೆಮರೆ ಕಾಯಿಯಂತೆ ದುಡಿಯುತ್ತಿರುವ ಕಾಯಕ ಜೀವಿಗಳಾದ ಎಂ.ಬಿ.ಮಹದೇವಪ್ಪ ಹಾಗೂ ಜಯಮ್ಮ ಅವರಿಗೆ ಕಾಯಕಶ್ರೀ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುತ್ತದೆ ಎಂದು ಸದಾನಂದಯ್ಯ ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಶರಣ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಟಿ.ಎಸ್. ಕುಮಾರಸ್ವಾಮಿ ಹಾಗೂ ಕದಳಿ ಮಹಿಳಾ ವೇದಿಕೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೇ 26, ಅಕ್ಕಮಹಾದೇವಿ ಜಯಂತಿ; ಕದಳಿ ಮಹಿಳಾ ವೇದಿಕೆ ರಜತೋತ್ಸವ



ಮೈಸೂರು,ಮೇ 23(ಎಂಟಿವೈ)– ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಮೇ 26ರಂದು ಸಂಜೆ 4.30ಕ್ಕೆ ಅಕ್ಕಮಹಾದೇವಿ ಜಯಂತಿ ಹಾಗೂ ಕದಳಿ ಮಹಿಳಾ ವೇದಿಕೆಯ ರಜತೋತ್ಸವ ಸಮಾರಂಭ ಆಯೋಜಿಸಲಾಗಿದೆ ಎಂದು ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 24 ವರ್ಷದಿಂದ ಕದಳಿ ಮಹಿಳಾ ವೇದಿಕೆ ಶರಣ–ಶರಣೆಯರ ಬಗ್ಗೆ ಅರ್ಥಪೂರ್ಣ ಕಾರ್ಯಕ್ರಮದೊಂದಿಗೆ ಕಾಲೇಜು ವಿದ್ಯಾರ್ಥಿಗಳು ಸನ್ಮಾರ್ಗದತ್ತ ಸಾಗುವ ದೃಷ್ಟಿಕೋನದಲ್ಲಿ ಹಲವು ಸಾರ್ಥಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸುತ್ತಾ ಬಂದಿದೆ. 25ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವ ಕದಳಿ ಮಹಿಳಾ ಸಂಘ ಮುಂಬರುವ ದಿನಗಳಲ್ಲಿ ಮತ್ತಷ್ಟು ಸೇವಾ ಕಾರ್ಯಕ್ರಮವನ್ನು ಮುಂದುವರೆಸಲಿದೆ. ಶರಣ–ಶರಣೆಯರ ಜನ್ಮಸ್ಥಳ, ಮಠಗಳಿಗೆ ಸಂಘದ ಸದಸ್ಯರನ್ನು ಆಧ್ಯಾತ್ಮಿಕ ಪ್ರವಾಸಕ್ಕೆ ಕರೆದೊಯ್ದು ಶರಣ ಸಾಹಿತ್ಯ, ವಚನಗಳ ಬಗ್ಗೆಯೂ ಮಾಹಿತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮೇ 26ರಿಂದ ಸಂಜೆ 4.30ಕ್ಕೆ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮವನ್ನು ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊಪದ್ಮಾ ಶೇಖರ್ ಉದ್ಘಾಟಿಸಲಿದ್ದಾರೆ. ರಜತೋತ್ಸವ ಕಾರ್ಯಕ್ರಮವನ್ನು ಕದಳಿ ಮಹಿಳಾ ವೇದಿಕೆಯ ರಾಜ್ಯ ಸಂಚಾಲಕರಾದ ಸುಶೀಲಾ ಸೋಮಶೇಖರ್ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್ ವಹಿಸಲಿದ್ದಾರೆ. ಇದೇ ವೇಳೆ ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ 'ಅಕ್ಕನ ಆಧ್ಯಾತ್ಮಿಕ ಮತ್ತು ಅನುಭಾವದ ದರ್ಶನ' ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಶರಣ ಸಾಹಿತ್ಯ ಪರಿಷತ್ ನಗರಾಧ್ಯಕ್ಷ ಮ.ಗು.ಸದಾನಂದಯ್ಯ, ಜಿಲ್ಲಾಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಕದಳಿ ಮಹಿಳಾ ವೇದಿಕೆ ಕಾರ್ಯದರ್ಶಿ ವಾಗ್ದೇವಿ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಶರಣ ಸಾಹಿತ್ಯ ಪರಿಷತ್ ನಗರಾಧ್ಯಕ್ಷ ಮ.ಗು.ಸದಾನಂದಯ್ಯ, ಕದಳಿ ಮಹಿಳಾ ವೇದಿಕೆ ಕಾರ್ಯದರ್ಶಿ ವಾಗ್ದೇವಿ, ರಾಜೇಶ್ವರಿ ಇದ್ದರು.

ನಾಳೆ ಕನ್ನಡ ಗೀತೆ, ನೃತ್ಯ ಕಾರ್ಯಕ್ರಮ

ಮೈಸೂರು,ಮೇ23(ಎಂಟಿವೈ)– ಸೋಷಿಯಲ್ ಮೈಸೂರು ಸಭಾಂಗಣದಲ್ಲಿ ಮೇ 25ರಂದು ಸಂಜೆ 7ರಿಂದ ರಾತ್ರಿ 11.30ರವರೆಗೆ ಕನ್ನಡ ಗೀತೆ, ನೃತ್ಯ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ನೃತ್ಯ ಸಂಯೋಜಕ, ನಟ ಕಿಶನ್ ಬಿಳಗಲಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಸ್ತಿತ್ವ ಫೌಂಡೇಷನ್ ಸಹಯೋಗದೊಂದಿಗೆ ಕಾರ್ಯಕ್ರಮ ನಡೆಸಲಾಗುತ್ತಿದ್ದು, ಕ್ರೇಜಿಸ್ಟಾರ್ ರವಿಚಂದ್ರನ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಬಿಗ್ ಬಾಸ್ ಖ್ಯಾತಿಯ ನಮ್ರತಾಗೌಡರೊಂದಿಗೆ ಕಿಶನ್ ಬಿಳಗಲಿ ನೃತ್ಯ ಪ್ರದರ್ಶನವಿದೆ ಎಂದರು.

ಮೈಸೂರು ಅರಮನೆ ಟಿಕೆಟ್ ಕೌಂಟರ್‌ಗಳ ಮೇಲೆ ಲೋಕಾಯುಕ್ತ ದಾಳಿ; ಲೆಕ್ಕವಿಲ್ಲದ 4.10 ಲಕ್ಷ ರೂ. ಪತ್ತೆ



ಮೈಸೂರು, ಮೇ 23– ಮೈಸೂರು ಅರಮನೆ ಟಿಕೆಟ್ ಕೌಂಟರ್‌ನಲ್ಲಿ ಭಾರೀ ಅವ್ಯವಹಾರ ನಡೆದಿರುವುದು ಲೋಕಾಯುಕ್ತ ದಾಳಿ ವೇಳೆ ಬಯಲಾಗಿದೆ.

ಅರಮನೆ ಪ್ರವೇಶ ದ್ವಾರ ಹಾಗೂ ಪಾರ್ಕಿಂಗ್ ವ್ಯವಸ್ಥೆಯಲ್ಲಿ ಅವ್ಯವಹಾರ ನಡೆಯುತ್ತಿದೆ ಎಂಬ ಮಾಹಿತಿ ಮೇರೆಗೆ ಲೋಕಾಯುಕ್ತ ಅಧಿಕಾರಿಗಳು ಗುರುವಾರ ದಿಢೀರ್ ದಾಳಿ ನಡೆಸಿದ ವೇಳೆ ಯಾವುದೇ ಲೆಕ್ಕವಿಲ್ಲದ 4.10 ಲಕ್ಷ ರೂ. ಪತ್ತೆಯಾಗಿದೆ. ಲೋಕಾಯುಕ್ತ ಎಸ್ಪಿ ಸಜಿತ್ ಅವರ ಮಾರ್ಗದರ್ಶನದಲ್ಲಿ ಡಿವೈಎಸ್ಪಿಗಳು, ಮೈಸೂರು ವಿಭಾಗದ ಅಧಿಕಾರಿಗಳು ಹಾಗೂ ಸಿಬ್ಬಂದಿ ದಾಳಿ ನಡೆಸಿದ್ದು, ಪತ್ತೆಯಾದ ಹೆಚ್ಚುವರಿ ಮೊತ್ತವನ್ನು ವಶಪಡಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ವಿದ್ಯಾಶ್ರೀ ಹತ್ಯೆ ಆರೋಪಿ ಜೈಲಿಗೆ

ಜಗಳದಲ್ಲಿ ಮೊಬೈಲ್ ಕಿತ್ತು ಬಿಸಾಡಿದ್ದರಿಂದ ಕೊಲೆ




ಬಂಧಿತ ನಂದೀಶ

ಮೈಸೂರು, ಮೇ 23 (ಆರ್‌ಕೆ)– ಕೌಟುಂಬಿಕ ವಿಚಾರದಲ್ಲಿ ಉಂಟಾದ ಜಗಳದ ವೇಳೆ ತನ್ನ ಮೊಬೈಲ್ ಕಿತ್ತು ಬಿಸಾಡಿದ್ದರಿಂದ ಕೋಪಗೊಂಡು ಸುತ್ತಿಗೆಯಿಂದ ಹೊಡೆದು ಪತ್ನಿ ಕೊಲೆ ಮಾಡಿದ್ದಾಗಿ ಬಂಧಿತ ನಂದೀಶ ತಿಳಿಸಿದ್ದಾನೆ.

ವಿಚಾರಣೆ ವೇಳೆ ಬನ್ನೂರು ಠಾಣೆ ಪೊಲೀಸರಿಗೆ ಹೇಳಿಕೆ ನೀಡಿರುವ ಆರೋಪಿ, ಜಗಳವಾಗುತ್ತಿದ್ದಾಗ ನನಗೆ ಏಕವಚನದಲ್ಲಿ ಬೈದ ಪತ್ನಿ ಶ್ರೀವಿದ್ಯಾ, ನನ್ನ ಮೊಬೈಲ್ ಫೋನ್ ಕಿತ್ತು ಬಿಸಾಡಿದಳು. ಅದಕ್ಕಾಗಿ ಕೋಪದಲ್ಲಿ ಸ್ಥಳದಲ್ಲಿದ್ದ ಕಬ್ಬಿಣದ ಸುತ್ತಿಗೆಯಿಂದ ಹೊಡೆದು ಕೊಲೆಗೈಯ್ದಿದ್ದಾಗಿ ತಿಳಿಸಿದ್ದಾನೆ.

ಸುದೀರ್ಘ ವಿಚಾರಣೆ ನಡೆಸಿದ ಬಳಿಕ ಆರೋಪಿಯನ್ನು ಮಧ್ಯಾಹ್ನ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಆತನನ್ನು 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.05.2024 ಶುಕ್ರವಾರ, ಮಳೆ ನಕ್ಷತ್ರ: ಕೃತ್ತಿಕ 11.05.2024ರಿಂದ 24.05.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಅನುರಾಧ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಕ್ಕಳ ಕಣ್ಣಿನ ದೃಷ್ಟಿ ಸಮಸ್ಯೆಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಪಾರಂಪರಿಕ ಹಾಸು ಆಟಗಳ 10ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್–ಹ್ಯಾಂಡಿಕ್ರಾಫ್ಟ್ ಸೇಲ್ಸ್ ಎಂಪೋರಿಯಂ, ಮೃಗಾಲಯ ಎದುರು, ಬೆಳಗ್ಗೆ 10 ರಿಂದ.


■ **ಮಹಾರಾಜ ಕಾಲೇಜು ಪಠ್ಯೇತರ ಚಟುವಟಿಕೆಗಳ ಸಮಿತಿ :** ಕಾಲೇಜು ವಾರ್ಷಿಕೋತ್ಸವ, ಉದ್ಘಾಟನೆ: ಚಾಮರಾಜನಗರ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್, ಮುಖ್ಯ ಅತಿಥಿಗಳು: ಕಾಲೇಜು ಹಿರಿಯ ವಿದ್ಯಾರ್ಥಿ ರಾಘವೇಂದ್ರ ಹುಣಸೂರು, ಅಧ್ಯಕ್ಷತೆ: ಮಹಾರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ.ಹೆಚ್.ಸೋಮಶೇಖರಪ್ಪ, ಉಪಸ್ಥಿತರು: ಆಡಳಿತಾಧಿಕಾರಿ ಪ್ರೊ.ವಿ.ಷಣ್ಮುಗಂ, ಸಮಿತಿ ಸಂಚಾಲಕ ಪ್ರೊ.ಸಿ.ಈ.ಲೋಕೇಶ್, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು:** ಕನ್ನಡ ಸಾಹಿತ್ಯ ಮತ್ತು ವರ್ತಮಾನ ಕುರಿತು ವಿಚಾರ ಸಂಕಿರಣ, ವಿದ್ಯಾರ್ಥಿನಿಯರಿಂದ ಪ್ರಬಂಧ ಮಂಡನೆ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಹಿರಿಯ ಪತ್ರಕರ್ತ ಕೆ.ನರಸಿಂಹಮೂರ್ತಿ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಉಪಸ್ಥಿತರು: ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಶಾರದ, ಉಪ ಪ್ರಾಂಶುಪಾಲ ಡಾ.ಜಿ.ಪ್ರಸಾದಮೂರ್ತಿ, ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಎಂ.ಎಸ್.ಸಂಧ್ಯಾರಾಣಿ, ಸ್ಥಳ: ಸೆಮಿನಾರ್ ಹಾಲ್, ಬೆಳಗ್ಗೆ 10.30ಕ್ಕೆ.

■ **ಬಾಸುದೇವ ಸೋಮಾನಿ ಕಾಲೇಜು:** ಪದವೀಧರರ ದಿನಾಚರಣೆ, ಉದ್ಘಾಟನೆ: ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು: ಕಾರ್ಯದರ್ಶಿ ಕುಬೇರ್ ಪಿ.ಗೌಡ, ಮುಖ್ಯ ಆಡಳಿತಾಧಿಕಾರಿ ಪಿ.ಗೀತಾಂಜಲಿ, ಮ್ಯಾನೇಜಿಂಗ್ ಟ್ರಸ್ಟಿ ಎಸ್.ಪ್ರಭಾ, ಅಧ್ಯಕ್ಷತೆ: ಬಾಸುದೇವ ಸೋಮಾನಿ ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಮಹದೇವಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.45ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ:** ಹೆಣ್ಣು ಭ್ರೂಣ ಹತ್ಯೆ ಹಾಗೂ ಮಹಿಳಾ ದೌರ್ಜನ್ಯಗಳು–ಒಂದು ಚಿಂತನೆ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಸಾಹಿತಿ ಡಾ.ಕೆ.ಲೀಲಾಪ್ರಕಾಶ್, ಅಧ್ಯಕ್ಷತೆ: ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಪ್ರಾಸ್ತಾವಿಕ ನುಡಿ: ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಮಾಜಿ ಧರ್ಮದರ್ಶಿ ಶ್ರೀಮತಿ ಸವಿತಾ ಘಾಟ್ಕೆ, ವಿಶೇಷ ಆಹ್ವಾನಿತರು: ಸಾಹಿತಿ ಬನ್ನೂರು ಕೆ.ರಾಜು, ಚಲನಚಿತ್ರ ನಟ ಸುಪ್ರೀತ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ 'ಬಣ್ಣದ ಬಾನಾಡಿಗಳು' ಬಾನುಲಿ ಸರಣಿ, ರಚನೆ: ಡಾ. ಎಸ್.ವಿ. ನರಸಿಂಹನ್, ಪ್ರಸ್ತುತಿ: ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45ಕ್ಕೆ ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ. ಆರ್. ಹೆಚ್. ಪವಿತ್ರಾ, ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಪ್ರಾಯೋಜಕರು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ತ್ರಿಚೂರ್ ವಿ. ರಾಮಚಂದ್ರನ್, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ–ಅಂಬುಜಾ ಶ್ರೀಧರ್, 12.45 ಕಾದಂಬರಿ ವಿಹಾರ, 1.20 ಭಾವಗೀತೆ–ರಜನಿ ಅನಿಲ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.55 ಸಿರಿಗನ್ನಡಂ ಗೆಲ್ಗೆ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಟಿ. ಜಿ. ತ್ಯಾಗರಾಜನ್–ಪಿಟೀಲು ವಾದನ, 4.00 ಮಹಿಳಾರಂಗ– 'ಸಖೀ ಪದ' ಪ್ರಸ್ತುತಿ: ಎಂ.ಎಸ್. ಭಾರತಿ, 4.30 ವೃತ್ತಿ ಮಾರ್ಗದರ್ಶನ–'ಸಕ್ಕರೆ ತಂತ್ರಜ್ಞಾನ ಅಂದರೆ ಶುಗರ್ ಟೆಕ್ನಾಲಜಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು' ಕುರಿತು ಮಂಡ್ಯದ ತೂಬಿನಕೆರೆಯಲ್ಲಿರುವ ಮೈಸೂರು ವಿಶ್ವವಿದ್ಯಾಲಯದ ಸರ್ ಎಂ. ವಿ. ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಕ್ಕರೆ ತಂತ್ರಜ್ಞಾನ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥರಾದ ಡಾ. ಎಂ.ಪಿ.ಮನೋಹರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 6.55 ಕೃಷಿರಂಗ–ಬಿತ್ತನೆ ಬೀಜದ ಆಯ್ಕೆ ಈ ಕುರಿತು ತೋಟಗಾರಿಕಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಹೆಚ್. ಎಂ. ಪಲ್ಲವಿ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 8.00 'ಸಂಧ್ಯಾರಾಗ' ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಚಿದಾನಂದಗೌಡ ಹಾಗೂ ಅವರ ಶ್ರೀಮತಿ ತಾರಿಣಿ ಚಿದಾನಂದಗೌಡ ಅವರೊಂದಿಗೆ ಮಾತುಕತೆ. ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 10.00 ತತ್ವ ಸಂಚಾರ : ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ: ಡಾ. ಮೈಸೂರು ಉಮೇಶ್, 10.30 ಸವಿನೆನಪು

■ **ಮೈಸೂರು ವಿಶ್ವವಿದ್ಯಾನಿಲಯ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ :** ಶುಕ್ರವಾರದ ಉಪನ್ಯಾಸ ಮಾಲಿಕೆ, ಮೈಸೂರು ವಿವಿ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ. ಬಿ. ಚಂದ್ರಶೇಖರ ಅವರಿಂದ ಭೌಗೋಳಿಕ ಚಿಂತನೆಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಪ್ರೊ. ಎಂ. ಚಂದ್ರಶೇಖರ, ಸ್ಥಳ: ಡಾ. ಎಸ್.ಆರ್. ರಂಗನಾಥನ್ ಸಭಾಂಗಣ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ, ಮಧ್ಯಾಹ್ನ 3.30ಕ್ಕೆ.

■ **ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಶ್ರೀ ಪದ್ಮಾವತಿ ಅಮ್ಮನವರ ವರ್ಧಂತಿ, ಸಂಜೆ 6 ಗಂಟೆಗೆ ಪುಷ್ಪ ಪಲ್ಲಕ್ಕಿ ಉತ್ಸವ, ಸ್ಥಳ: ಸಭಾ ಆವರಣ, ತಿಲಕ್‌ನಗರ.

■ **ಕದಂಬ ರಂಗ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಕದಂಬ ನಗೆ ನಾಟಕೋತ್ಸವ, ಬೆಂಗಳೂರು ಸೈಡ್‌ವಿಂಗ್ ಕಲಾವಿದರಿಂದ ಈ ಪ್ರೇಮಲೋಕದಾ ಗೀತೆಯೋ... ನಾಟಕ ಪ್ರದರ್ಶನ, ನಿರ್ಮಾಣ : ಎಂ.ಎಂ. ಶೈಲೇಶ್‌ಕುಮಾರ್, ರಚನೆ ಮತ್ತು ನಿರ್ದೇಶನ : ಸ. ಜಗನ್ನಾಥ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ.

ಅಂತರ್ಜಾತಿ ವಿವಾಹಕ್ಕೆ ಸರ್ಕಾರದಿಂದ ಸಹಾಯ–ಸಹಕಾರವಿದೆ

• ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ • ಆರ್ಥಿಕ, ಸಾಮಾಜಿಕ ಸಮಾನತೆ ಇಲ್ಲದೆ ಸಮ ಸಮಾಜ ನಿರ್ಮಾಣ ಸಾಧ್ಯವಿಲ್ಲ • ಅಂತರ್ಜಾತಿ ವಿವಾಹಿತರ ಸಭೆ; ಅಂತರ್ಜಾತಿ ದಂಪತಿ ನೋಂದಣಿ ವೆಬ್‌ಸೈಟ್‌ಗೆ ಚಾಲನೆ

ಮೈಸೂರು, ಮೇ 23(ಎಸ್‌ಬಿಡಿ)– ಸಮ ಸಮಾಜ ನಿರ್ಮಾಣಕ್ಕೆ ಪೂರಕವಾದ ಅಂತರ್ಜಾತಿ ವಿವಾಹಕ್ಕೆ ಅಗತ್ಯ ಸಹಕಾರ ನೀಡಲು ಸರ್ಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ಜನಸ್ಪಂದನ ಟ್ರಸ್ಟ್ ಹಾಗೂ ಮಾನವ ಮಂಟಪ ಸಂಘಟನೆ ಸಹಯೋಗದಲ್ಲಿ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದ ಆವರಣದಲ್ಲಿ ಗುರುವಾರ ಆಯೋಜಿಸಿದ್ದ ಅಂತರ್ಜಾತಿ ವಿವಾಹಿತರ ಸಭೆ ಹಾಗೂ ಅಂತರ್ಜಾತಿ ದಂಪತಿಗಳ ನೋಂದಣಿ ವೆಬ್‌ಸೈಟ್ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದ ಅವರು, ಅಂತರ್ಜಾತಿ ವಿವಾಹಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಜೊತೆಗೆ ನಮ್ಮ ಸರ್ಕಾರ ಅಂತರ್ಜಾತಿ ವಿವಾಹವಾಗುವವರಿಗೆ ಎಲ್ಲಾ ರೀತಿಯ ಸಹಕಾರ ಹಾಗೂ ಸಹಾಯ ನೀಡಲಿದೆ ಎಂದರು.

ಸಾಮಾಜಿಕ ಹಾಗೂ ಆರ್ಥಿಕ ಚಟುವಟಿಕೆಗಳಿಲ್ಲದ ಸಮಾಜದಲ್ಲಿ ಚಲನೆ ಇರುವುದಿಲ್ಲ. ಹಾಗೆಯೇ ಸಮಾಜದಲ್ಲಿ ಜಾತಿ ವ್ಯವಸ್ಥೆ ಚಲನರಹಿತವಾಗಿದ್ದು ಬಹಳ ಗಟ್ಟಿಯಾಗಿ ಬೇರೂರಿದೆ. ಆದ್ದರಿಂದ ಅನೇಕ ಸಮಾಜ ಸುಧಾರಕರು ಸಮ ಸಮಾಜ ನಿರ್ಮಾಣಕ್ಕೆ ಎಷ್ಟೇ ಪ್ರಯತ್ನಿಸಿದರೂ ಅದು ಸಂಪೂರ್ಣ ಯಶಸ್ವಿಯಾಗಲಿಲ್ಲ. ಬಸವಣ್ಣ, ಬುದ್ಧನ ಕಾಲದಿಂದಲೂ ಜಾತಿ ವ್ಯವಸ್ಥೆ ತೊಲಗಿ, ಸಮಾಜದಲ್ಲಿ ಸಮಾನತೆ ಸ್ಥಾಪನೆಯಾಗಬೇಕೆಂದರೂ ಅದು ಸಾಧ್ಯವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅಂತರ್ಜಾತಿ ವಿವಾಹಗಳು ಹೆಚ್ಚಾಗಬೇಕು. ಜೊತೆಗೆ ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಸಾಧಿಸದ ಹೊರತು ಸಮ ಸಮಾಜ ನಿರ್ಮಾಣವನ್ನು ನಿರೀಕ್ಷಿಸುವುದು ಕಷ್ಟ, ಡಾ.ಬಿ.ಆರ್.ಅಂಬೇಡ್ಕರ್ ಅವರು ಹೇಳಿದಂತೆ ಎಲ್ಲರಿಗೂ ಆರ್ಥಿಕ ಮತ್ತು ಸಾಮಾಜಿಕ ಶಕ್ತಿ ಬಂದಾಗ ಮಾತ್ರ ರಾಜಕೀಯ ಸ್ವಾತಂತ್ರ್ಯ ಯಶಸ್ವಿಯಾಗುತ್ತದೆ. ಆಗ ಮಾತ್ರ ಸಮ ಸಮಾಜದ ಕಡೆಗೆ ನಡೆಯಬಹುದು. ಬಸವಣ್ಣನವರು 12ನೇ ಶತಮಾನದಲ್ಲೇ 'ಇವನಾರವ ಇವನಾರವ ಎನ್ನಬೇಡ, ಇವ ನಮ್ಮವ ಇವ ನಮ್ಮವನೆನ್ನು' ಎಂದು ಹೇಳಿದ್ದಾರೆ. ಆದರೆ ಬಸವಣ್ಣನವರನ್ನು ಪೂಜಿಸುತ್ತಾರೆಯೇ ಹೊರತು ಕೆಲವರು ಇನ್ನೂ ಜಾತಿ ಆಚರಣೆ ಮಾಡುತ್ತಾರೆ. ಮನುಷ್ಯನಾದವನು ಮನುಷ್ಯರನ್ನು ಪ್ರೀತಿಸಬೇಕೇ ಹೊರತು ದ್ವೇಷಿಸಬಾರದು. ರಾಷ್ಟ್ರಕವಿ ಕುವೆಂಪು ಅವರು ಹುಟ್ಟುತ್ತಾ ಎಲ್ಲರೂ ವಿಶ್ವಮಾನವರು ಆದರೆ ಬೆಳೆಯುತ್ತಾ ಅಲ್ಪ ಮಾನವರಾಗುತ್ತಾರೆ ಎಂದಿದ್ದಾರೆ. ಎಲ್ಲರೂ ವಿಶ್ವ ಮಾನವರಾಗಿ ಪರಸ್ಪರ ಪ್ರೀತಿಯಿಂದ ನಡೆದುಕೊಳ್ಳಬೇಕು ಎಂದು ಆಶಿಸಿದರು.



ಮೈಸೂರಿನ ಜನಸ್ಪಂದನ ಟ್ರಸ್ಟ್ ಹಾಗೂ ಮಾನವ ಮಂಟಪ ಸಂಘಟನೆ ಸಹಯೋಗದಲ್ಲಿ ನಡೆದ ಅಂತರ್ಜಾತಿ ವಿವಾಹಿತರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅಂತರ್ಜಾತಿ ದಂಪತಿಗಳ ನೋಂದಣಿ ವೆಬ್‌ಸೈಟ್‌ಗೆ ಚಾಲನೆ ನೀಡಿದರು. ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮತ್ತಿತರರಿದ್ದರು.

ಉದಾಹರಿಸಿ ವಿವರಣೆ: ಅಂತರ್ಜಾತಿ ವಿವಾಹದ ಬಗ್ಗೆ ವೇದಿಕೆಯಲ್ಲಿದ್ದವರನ್ನೇ ಉದಾಹರಿಸಿ ನೆರೆದಿದ್ದವರಿಗೆ ಸಿಎಂ ಸಿದ್ದರಾಮಯ್ಯ ಅರ್ಥೈಸಿದರು. ಪುಷ್ಪಾ ಎಂಎ, ಪಿಹೆಚ್.ಡಿ ಮಾಡಿದ್ದಾರೆ. ವಿದ್ಯಾವಂತರಾದ ಇವರಿಗೆ ಸಾಮಾಜಿಕ ಶಕ್ತಿ ಬಂದಿರುವುದರಿಂದ ಅಂತರ್ಜಾತಿ ವಿವಾಹವಾಗಿದ್ದಾರೆ. ಡಾ.ಡಿ.ತಿಮ್ಮಯ್ಯ (ಎಂಎಲ್‌ಸಿ) ಅವರು ವೈದ್ಯರಾಗಿದ್ದರಿಂದ ಅಂತರ್ಜಾತಿ ವಿವಾಹ ಸಾಧ್ಯವಾಗಿದೆ. ಹೀಗೆ ಆರ್ಥಿಕ ಹಾಗೂ ಸಾಮಾಜಿಕ ಸಬಲತೆ ಇದ್ದರೆ ಯಾರು ಬೇಕಾದರು ಅಂತರ್ಜಾತಿ ವಿವಾಹ ಆಗಬಹುದು. ಮುಖ್ಯವಾಗಿ ಮಹಿಳೆಯರಿಗೆ ಆರ್ಥಿಕ ಮತ್ತು ಸಾಮಾಜಿಕ ಶಕ್ತಿ ಇಲ್ಲದಿದ್ದರೆ ಕಷ್ಟ ಹಾಗಾಗಿ ಮಹಿಳೆಯರು ಮೊದಲು ವಿದ್ಯಾವಂತರಾಗಿ, ಆರ್ಥಿಕ ಸ್ವಾವಲಂಬಿಗಳಾಗಬೇಕು ಎಂದು ಸಲಹೆ ನೀಡಿದರು.

ಮುಂದಿನ ತಿಂಗಳು ಸಮಾವೇಶ: ಜನಸ್ಪಂದನ ಟ್ರಸ್ಟ್ ಅಧ್ಯಕ್ಷ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಮದುವೆ ಜಾತಿಗಳ ನಡುವೆ ಅಲ್ಲ ವ್ಯಕ್ತಿಗಳ ನಡುವಿನ ಬಂಧನ. ಸಮಾನತೆ ಬಂದಾಗ ಜಾತಿ ತಾನಾಗೆ ತೊಲಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಲವು ಬಾರಿ ಹೇಳಿದ್ದಾರೆ. ಈ ನಿಟ್ಟಿನಲ್ಲಿ ಐದು ಗ್ಯಾರಂಟಿಗಳ ಮೂಲಕ ಎಲ್ಲರಲ್ಲೂ ಸಮಾನತೆ, ಸ್ವಾಭಿಮಾನ ಮೂಡಿಸುವ ಕೆಲಸ ಮಾಡಿದ್ದಾರೆ. ಅಂಬೇಡ್ಕರ್ ಅವರು ಹೇಳಿದಂತೆ ಅಂತರ್ಜಾತಿ ವಿವಾಹದಿಂದ ಜಾತಿ ತೊಲಗುತ್ತದೆ. ಮುಂದಿನ ತಿಂಗಳು ಅಂತರ್ಜಾತಿ ವಿವಾಹಿತರ ಸಮಾವೇಶ. ಈಗಲೂ ಅಂತರ್ಜಾತಿ ವಿವಾಹವಾದವರು ಇಬ್ಬರಲ್ಲಿ ಯಾರದು ಪ್ರಾಬಲ್ಯ ಜಾತಿಯೋ ಅದನ್ನು ಹೇಳಿಕೊಳ್ಳುತ್ತಿದ್ದಾರೆ. ಅಂತಹವರಲ್ಲಿ ಮನೋಸ್ಥೈರ್ಯ ತುಂಬುವ ಅಗತ್ಯವಿದೆ. ಮುಂದಿನ ತಿಂಗಳು ಸಮಾವೇಶ ಮಾಡಿ, ಅಂತರ್ಜಾತಿ ವಿವಾಹವಾದವರ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡಬೇಕೆಂಬ ಬೇಡಿಕೆಯನ್ನು ಸರ್ಕಾರದ ಮುಂದಿಡೋಣ. ಈ ನಿಟ್ಟಿನಲ್ಲಿ ಎಲ್ಲರೂ ಸಂಘಟಿತರಾಗಬೇಕು ಎಂದು ಮನವಿ ಮಾಡಿದರು.

ಸಮಾರಂಭದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಸಾಹಿತಿ ಪ್ರೊ.ಕಾಳೇಗೌಡ ನಾಗವಾರ, ಚಿಂತಕರಾದ ಜಿ.ಪಿ.ಬಸವರಾಜು, ಉಗ್ರನರಸಿಂಹೇಗೌಡ, ರಂಗಕರ್ಮಿಗಳಾದ ಜನಾರ್ದನ್(ಜನ್ನಿ), ಸಿ.ಬಸವಲಿಂಗಯ್ಯ, ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರ್‌ನಾಥ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಸಮ ಸಮಾಜದ ನಿರ್ಮಾಣದ ವಿಚಾರ ಮಂಡನೆಯಲ್ಲಿ ಹಲವು ಚಿಂತಕರು ಮಾತನಾಡಿದರು.

ಗೆಳತಿ ವರಿಸಲು ಬಯಸಿದ್ದೆ; ಕಾಲೇಜು ದಿನಗಳ ನೆನೆದ ಸಿಎಂ

ಮೈಸೂರು: ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಗೆಳತಿಯನ್ನು ಮದುವೆಯಾಗಲು ಬಯಸಿದ್ದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲ ಬಾರಿಗೆ ಮುಕ್ತವಾಗಿ ಹೇಳಿಕೊಂಡರು.

ಅಂತರ್ಜಾತಿ ವಿವಾಹಿತರ ಸಭೆಯಲ್ಲಿ ವೆಬ್‌ಸೈಟ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಅಂತರ್ಜಾತಿ ವಿವಾಹಗಳಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕು. ನಾನು ಕೂಡ ಅಂತರ್ಜಾತಿ ವಿವಾಹ ಮಾಡಿಕೊಳ್ಳಬೇಕು ಎಂದುಕೊಂಡಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲ. ಹುಡುಗಿಯೇ ಒಪ್ಪಲಿಲ್ಲ ಅಂದ ಮೇಲೆ ಹೇಗೆ ಮದುವೆ ಆಗೋದು. ನಾನು ಕಾನೂನು ಪದವಿ ವ್ಯಾಸಂಗ ಮಾಡುವಾಗ ಓರ್ವ ಹುಡುಗಿಯೊಂದಿಗೆ ಸ್ನೇಹವಿತ್ತು. ಆಕೆಯನ್ನು ಮದುವೆಯಾಗಬೇಕು ಎಂದುಕೊಂಡಿದ್ದೆ. ಆದರೆ ಆ ಹುಡುಗಿ ಹಾಗೂ ಆಕೆ ಮನೆಯವರೂ ಒಪ್ಪಲಿಲ್ಲ. ಹಾಗಾಗಿ ನಮ್ಮ ಜಾತಿಯವರನ್ನೇ ಮದುವೆಯಾಗಬೇಕಾದ ಪರಿಸ್ಥಿತಿ ನಿರ್ಮಾಣವಾಯ್ತು. ಈ ಸಭೆಯಲ್ಲಿ ಮಾತನಾಡಲು ಎಷ್ಟರಮಟ್ಟಿಗೆ ನೈತಿಕತೆ ಇದೆಯೋ ಇಲ್ಲವೋ ಗೊತ್ತಿಲ್ಲ ಎಂದರು. ಸಿದ್ದರಾಮಯ್ಯನವರಿಗೆ ಗೆಳತಿ ಬಗ್ಗೆ ಪ್ರೀತಿ ಇದ್ದ ವಿಚಾರವನ್ನು ಮೊದಲ ಬಾರಿ ಕೇಳಿ, ನೆರೆದಿದ್ದವರು ಶಿಳ್ಳೆ, ಚಪ್ಪಾಳೆ ಹೊಡೆದರು.

ಡಾ.ಉಷಾ ಹೆಗ್ಡೆ: ಮೌಂಟ್ ಎವರೆಸ್ಟ್ ಏರಿದ ಮೊದಲ ಮೈಸೂರಿಗರು



ಯಶಸ್ವಿ ಪರ್ವತಾರೋಹಣ ನಂತರ ಡಾ. ಉಷಾ ಹೆಗ್ಡೆ ಅವರನ್ನು ಸ್ವಾಗತಿಸಲು ಕಠ್ಮಂಡುವಿಗೆ ತೆರಳಿದ್ದ ಪತಿ ಡಾ.ಅಜಯ್ ಹೆಗ್ಡೆ

ಮೈಸೂರು, ಮೇ 23(ವಿಎನ್‌ಎಸ್)– ಸಮುದ್ರ ಮಟ್ಟದಿಂದ ಅತೀ ಎತ್ತರದ ಶಿಖರವಾದ ಮೌಂಟ್ ಎವರೆಸ್ಟ್ 8,848.86 ಮೀಟರ್ (29,031 ಅಡಿ) ಎತ್ತರದಲ್ಲಿದೆ. ದಾಖಲೆಗಳ ಪ್ರಕಾರ ವಿವಿಧ ರಾಷ್ಟ್ರಗಳ 6,664 ಪರ್ವತಾರೋಹಿಗಳು ಈಗಾಗಲೇ ಈ ಶಿಖರವನ್ನು ಯಶಸ್ವಿಯಾಗಿ ಏರಿದ್ದಾರೆ. ಅವರಲ್ಲಿ 544 ಮಂದಿ ಭಾರತೀಯರು.

ದೇಶ ಮತ್ತು ವಿಶ್ವದ ಸಾಹಸಿ ಪರ್ವತಾರೋಹಿಗಳ ಪಟ್ಟಿಗೆ ಈಗ ಮೈಸೂರು ಜೆಎಸ್‌ಎಸ್ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಓರಲ್ ಪೆಥಾಲಜಿ ಮತ್ತು ಮೈಕ್ರೋಬಯಾಲಜಿ ವಿಭಾಗದ ಪ್ರಾಧ್ಯಾಪಕಿ ಡಾ.ಉಷಾ ಹೆಗಡೆ ಸೇರ್ಪಡೆಯಾಗಿದ್ದಾರೆ. ತಮ್ಮ ಸಾಧನೆಯೊಂದಿಗೆ ಡಾ.ಉಷಾ ಮೌಂಟ್ ಎವರೆಸ್ಟ್ ಶಿಖರವನ್ನು ಏರಿದ ಮೊದಲ ಮೈಸೂರಿಗರು ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಡಾ. ಉಷಾ ಹೆಗ್ಡೆ, ಏಪ್ರಿಲ್ 4ರಂದು ಖುಂಬು ಪಸಾಂಗ್ಲಹಮು (ನೇಪಾಳ)ದಲ್ಲಿ 5,364 ಮೀಟರ್‌ಗಳ (17,598 ಅಡಿ) ಎತ್ತರದ ಸೌತ್ ಬೇಸ್ ಕ್ಯಾಂಪಿನಿಂದ ತಮ್ಮ ಪ್ರಯಾಣವನ್ನು ಆರಂಭಿಸಿ, ಮೇ 19ರಂದು ಶಿಖರದ ತುತ್ತತುದಿಯನ್ನು ತಲುಪುವ ಮೂಲಕ ದಾಖಲೆ ಬರೆದಿದ್ದಾರೆ.

ಶಿಖರಾರೋಹಣಕ್ಕೆ ಮುನ್ನ ಉಷಾ ಶಿಖರವನ್ನು ಏರುವುದು, ಮಂಜಿನಲ್ಲಿ ನಡೆಯುವುದು ಒಳಗೊಂಡಂತೆ ವಿವಿಧ ಹಂತಗಳಲ್ಲಿ ಅತ್ಯಂತ ಪರಿಶ್ರಮದ ತರಬೇತಿಯನ್ನು ಪಡೆಯಬೇಕಾಯಿತು.

ಬುಧವಾರ ಬೆಳಗ್ಗೆ ನೇಪಾಳದ ಕಠ್ಮಂಡುವಿನಿಂದ 'ಮೈಸೂರು ಮಿತ್ರ'ನೊಂದಿಗೆ ದೂರವಾಣಿಯಲ್ಲಿ ತಮ್ಮ ಅನುಭವವನ್ನು ಹಂಚಿಕೊಂಡ ಡಾ. ಉಷಾ ಹೆಗ್ಡೆ, 'ಇದು ಅತ್ಯಂತ ತೃಪ್ತಿಕರ ಸಾಧನೆ. ಆದರೆ ತುಂಬಾ ಕಠಿಣ ಅನುಭವ. ನಾನು ಬಹಳ ದಿನಗಳಿಂದ ತಯಾರಿ ನಡೆಸುತ್ತಿದ್ದೆ. ಕಳೆದ ಕೆಲವು ವರ್ಷಗಳಿಂದ, ಲೇಹ್ ಮತ್ತು ಲಡಾಖ್‌ನಲ್ಲಿ ಪರ್ವತಾರೋಹಣ ಸೇರಿದಂತೆ ವಿವಿಧ ಸಾಹಸ ಕ್ರಿಯೆಗಳಲ್ಲಿ ಭಾಗವಹಿಸಿದ್ದೇನೆ. ಜೆಮ್‌ಷಡ್ಪುರದ ಟಾಟಾ ಸ್ಟೀಲ್ ಅಡ್ವೆಂಚರ್ ಫೌಂಡೇಶನ್‌ನಲ್ಲಿ ತರಬೇತಿ ಕೂಡ ಪಡೆದಿದ್ದೇನೆ. ಇದು ಈ ವೇಳೆ ಸಹಾಯಕ್ಕೆ ಬಂತು' ಎಂದು ಹೇಳಿದರು.



ಎವರೆಸ್ಟ್ ಶಿಖರದ ಜೆಎಸ್‌ಎಸ್ ಸಂಸ್ಥೆಯ ಧ್ವಜ ಪ್ರದರ್ಶಿಸುತ್ತಿರುವ ಡಾ.ಉಷಾ ಹೆಗ್ಡೆ.

ಪರ್ವತಾರೋಹಣ ಸಮಯದಲ್ಲಿ ಮೊಬೈಲ್ ಸಂಪರ್ಕವಿಲ್ಲದ ಕಾರಣ ತಮ್ಮ ಕುಟುಂಬ ಸ್ವಲ್ಪ ಆತಂಕದಲ್ಲಿತ್ತು. ಆದರೆ ಯಶಸ್ವಿಯಾಗಿ ಶಿಖರವನ್ನು ಏರಿ, ಪರ್ವತದಿಂದ ಕೆಳಗಿಳಿದ ನಂತರ ನಮ್ಮ ಕುಟುಂಬ ಮತ್ತು ಸ್ನೇಹಿತರು ಬಹಳ ಸಂತೋಷಪಟ್ಟರು ಎಂದು ಡಾ. ಉಷಾ ಹೇಳಿದರು.

ಒಮ್ಮೆ ಎವರೆಸ್ಟ್ ಆರೋಹಣ ಆರಂಭಿಸಿದ ನಂತರ, ಶಿಖರದ ತುತ್ತತುದಿ ತಲುಪಲು ನಮಗೆ ಐದು ದಿನಗಳು ಬೇಕಾಯಿತು. ನಂತರ ಇಳಿಯಲು ನಾವು ಮೂರು ದಿನಗಳನ್ನು ತೆಗೆದುಕೊಂಡೆವು. ಈ ಸಾಹಸ ಯಾತ್ರೆ ವೇಳೆ ಉತ್ತಮ ಹವಾಮಾನಕ್ಕಾಗಿ ಕಾಯಬೇಕಾಗಿತ್ತು ಎಂದು ಉಷಾ ಹೇಳಿದರು.



ಎವರೆಸ್ಟ್ ಶಿಖರದ ತುತ್ತ ತುದಿಯಲ್ಲಿ ಡಾ. ಉಷಾ ಹೆಗ್ಡೆ

ಬೇಸ್ ಕ್ಯಾಂಪ್‌ನಲ್ಲಿ ನಾವೆಲ್ಲ ಸಣ್ಣ ಟೆಂಟ್‌ನಲ್ಲಿ ಉಳಿದುಕೊಂಡಿದ್ದರಿಂದ ಪ್ರಯಾಣವು ಅಷ್ಟೇನು ಸರಾಗವಾಗಿರಲಿಲ್ಲ. ಅಲ್ಲಿನ ಹವಾಮಾನಕ್ಕೆ ಒಗ್ಗಿಕೊಳ್ಳಬೇಕಾಗಿತ್ತು. ಬೇಸ್ ಕ್ಯಾಂಪ್‌ನಲ್ಲಿ –5 ಡಿಗ್ರಿ ಸೆಲ್ಸಿಯಸ್‌ನಿಂದ –10 ಡಿಗ್ರಿ ಸೆಲ್ಸಿಯಸ್‌ವರೆಗೆ ತಾಪಮಾನವಿದ್ದರೆ ಮೇಲಿನ ಶಿಬಿರಗಳಲ್ಲಿ –40 ಡಿಗ್ರಿ ಸೆಲ್ಸಿಯಸ್ ಇತ್ತು ಎಂದು ಡಾ.ಉಷಾ ಹೇಳಿದರು. ಮೌಂಟ್ ಎವರೆಸ್ಟ್ ಏರುವಾಗ ಅವರೊಂದಿಗೆ ಶೆರ್ಪಾ ಫುರ್ಬಾ ಇದ್ದರು. ಅವರು ಶಿಖರವನ್ನು ಏರಲು ಉತ್ಸಾಹದ ಜೊತೆಗೆ ಧೈರ್ಯ ತುಂಬಿದರು ಎಂದು ಉಷಾ ಹೇಳಿದರು.


ಉತ್ತಮ ಫಿಟ್ನೆಸ್‌ವುಳ್ಳ ಡಾ. ಉಷಾ ಅವರು, ಮ್ಯಾರಥಾನ್, ಐರನ್‌ಮ್ಯಾನ್, ಟ್ರಯಥ್ಲಾನ್ ಮತ್ತು ಇನ್ನೂ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರ ಜೊತೆಗೆ ಚಾಮುಂಡಿಬೆಟ್ಟ ಹತ್ತುವುದು ಡಾ.ಉಷಾ ಅವರ ನಿತ್ಯದ ಕೆಲಸ. ಡಾ. ಉಷಾ ಹೆಗ್ಡೆ ನಗರದ ಹೆಸರಾಂತ ಮೂಳೆ ಶಸ್ತ್ರಚಿಕಿತ್ಸಕ ಮತ್ತು ಸಾಹಸ ಉತ್ಸಾಹಿ ಡಾ.ಅಜಯ್ ಹೆಗ್ಡೆ ಅವರ ಪತ್ನಿ. ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ – ಡಾ.ಆಕರ್ಷ್, ಹೌಸ್ ಸರ್ಜನ್ ಮತ್ತು ಆರ್ಯವ್, ಮಂಗಳೂರಿನ ಎ.ಜೆ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಮತ್ತು ರಿಸರ್ಚ್ ಸೆಂಟರ್‌ನಲ್ಲಿ 2ನೇ ವರ್ಷದ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದಾರೆ.

ಯಶಸ್ವಿ ಪರ್ವತಾರೋಹಣದ ನಂತರ ತಮ್ಮ ಪತ್ನಿಯನ್ನು ಕಠ್ಮಂಡುವಿನಲ್ಲಿ ಬರಮಾಡಿಕೊಂಡ ಡಾ. ಅಜಯ್ ಹೆಗ್ಡೆ, 'ಮೈಸೂರು ಮಿತ್ರ'ನೊಂದಿಗೆ ಸಂತೋಷವನ್ನು ಹಂಚಿಕೊಂಡರು. 'ನಾನು ಜಗತ್ತಿನ ತುದಿಗೆ ಹೋಗದೇ ಇದ್ದಿರಬಹುದು. ಆದರೆ ನಾನು ಕೂಡ ಪ್ರಪಂಚದ ಮೇಲೆಯೇ ಇದ್ದೇನೆ. ನನಗೆ ಉಷಾ ಬಗ್ಗೆ ಹೆಮ್ಮೆ ಇದೆ. ಮೌಂಟ್ ಎವರೆಸ್ಟ್ ಶಿಖರವನ್ನು ಏರುವ ಗುರಿಯನ್ನು ಸಾಧಿಸಲು ಅವಳು ಕಠಿಣ ತರಬೇತಿ ಪಡೆದಿದ್ದಾಳೆ. ಮುಂದೆ ಏನು ಮಾಡುತ್ತಾಳೆ ಎಂಬ ನಿರೀಕ್ಷೆಯಲ್ಲಿದ್ದೇನೆ' ಎಂದರು. ಮನೆಯಲ್ಲಿ ಎಲ್ಲರ ಬೆಂಬಲದಿಂದ ಇಂತಹ ಸಾಹಸಗಳನ್ನು ಮಾಡುವುದು ಸಾಧ್ಯವೆಂದು ಉಷಾ ಹೇಳುತ್ತಾರೆ. ನಿಮ್ಮ ಮುಂದಿನ ಸಾಹಸವೇನು ಎಂದು ಕೇಳಿದರೆ, 'ಸದ್ಯ , ನಾನು ಈ ಒಂದು ಸಾಧನೆಯನ್ನು ಆನಂದಿಸುತ್ತೇನೆ. ಮೈಸೂರಿಗೆ ಹಿಂತಿರುಗಿ, ನನ್ನ ಕುಟುಂಬದೊಂದಿಗೆ ವಿಶ್ರಾಂತಿ ಪಡೆಯಲು ಬಯಸುತ್ತೇನೆ' ಎಂದರು.

ಅಡುಗೆ ಅನಿಲ ಸೋರಿಕೆ ದುರಂತ

ಇಡೀ ಕುಟುಂಬ ಸಾವಿಗೀಡಾದ ಸ್ಥಳಕ್ಕೆ ಮುಖ್ಯಮಂತ್ರಿ ಭೇಟಿ; ಸಂಬಂಧಿಗಳಿಗೆ ಸಾಂತ್ವನ

- ಒಟ್ಟು 12 ಲಕ್ಷ ಪರಿಹಾರ ಘೋಷಣೆ
- ಮಾಹಿತಿ ಪಡೆದು ಮಮ್ಮಲ ಮರುಗಿದ ಸಿಎಂ



ಮೈಸೂರು, ಮೇ 23(ಎಂಕೆ)– ಮೈಸೂರಿನ ಯರಗನಹಳ್ಳಿಯಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಒಂದೇ ಕುಟುಂಬದ ನಾಲ್ವರು ಸಾವನ್ನಪ್ಪಿದ ಘಟನಾ ಸ್ಥಳಕ್ಕೆ ಗುರುವಾರ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರಲ್ಲದೆ 12 ಲಕ್ಷ ರೂ.ಪರಿಹಾರ ನೀಡುವುದಾಗಿ ಘೋಷಣೆ ಮಾಡಿದರು.

ಸಂಜೆ ವೇಳೆ ಜಿಲ್ಲಾ ಉಸ್ತುವಾರಿ ಡಾ.ಹೆಚ್.ಸಿ.ಮಹದೇವಪ್ಪ, ರೇಷ್ಮೆ ಸಚಿವ ಕೆ.ವೆಂಕಟೇಶ್, ಶಾಸಕ ತನ್ವೀರ್ ಸೇಠ್, ಸೇರಿದಂತೆ ಸ್ಥಳೀಯ ಮುಖಂಡರೊಂದಿಗೆ ಭೇಟಿ ನೀಡಿದ ಅವರು, ಮೃತ ಕುಮಾರ್ ತಂದೆ ತಿಮ್ಮಯ್ಯ, ತಾಯಿ ಶಾರದಮ್ಮ, ಮೃತ ಕುಮಾರ್ ಪತ್ನಿಯ ತಾಯಿ ರತ್ನಮ್ಮ, ತಂದೆ ಭದ್ರಪ್ಪ ಹಾಗೂ ಅವರ ಅಣ್ಣ–ತಂಗಿಯರಿಗೆ ಸಾಂತ್ವನ ಹೇಳಿದ ಸಿಎಂ, ಘಟನೆ ನಡೆದ ಕುರಿತು ಮಾಹಿತಿ ಪಡೆದರು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಕುಮಾರ್ ಮತ್ತು ಅವರ ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳು ಸೇರಿ ಅವರ ಇಡೀ ಕುಟುಂಬ ಅನಿಲ ಸೋರಿಕೆಯಿಂದ ಸಾವನ್ನಪ್ಪಿದ್ದಾರೆ. ಹೆಣ್ಣು ಮಕ್ಕಳು ಓದುತ್ತಿದ್ದರು. ಮೂಲತಃ ಕಡೂರಿನವರಾಗಿದ್ದು, ಮೈಸೂರಿಗೆ ಬಂದು 20 ವರ್ಷವಾಗಿದೆ. ಚಿಕ್ಕ ಮನೆಯಲ್ಲಿ ವಾಸವಾಗಿದ್ದರು. ಮಡಿವಾಳ ಸಮುದಾಯದವರಾಗಿದ್ದು, ಲ್ಯಾಂಡ್ರಿ ನಡೆಸಿಕೊಂಡಿದ್ದರು. ಈಗ ಅವರ ಇಡೀ ಕುಟುಂಬ ನಾಶವಾಗಿದೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ. ಅವರ ಕುಟುಂಬಸ್ಥರಿಗೆ ದುಃಖ ಭರಿಸುವ ಶಕ್ತಿಯನ್ನ ದೇವರು ನೀಡಲಿ ಎಂದರು. ಕುಮಾರ್ ತಂದೆ ತಿಮ್ಮಯ್ಯ ಸೇರಿದಂತೆ ಅವರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ್ದೇವೆ. ಮೃತಪಟ್ಟ ನಾಲ್ವರಿಗೆ ತಲಾ 3 ಲಕ್ಷದಂತೆ ಒಟ್ಟು 12 ಲಕ್ಷ ಪರಿಹಾರವನ್ನು ಈಗಾಗಲೇ ಸಚಿವ ಮಹದೇವಪ್ಪ ಘೋಷಿಸಿದ್ದರು. ಅದಕ್ಕೆ ನಾನು ಅನುಮೋದನೆ ನೀಡಿದ್ದೇನೆ ಎಂದರು.

ಡಿಫೆನ್ಸಿವ್ ಡ್ರೈವಿಂಗ್, ನ್ಯಾಷನಲ್ ಸೇಫ್ಟಿ ಕೌನ್ಸಿಲ್ ತರಬೇತಿ

ಮೈಸೂರು,ಮೇ 23–ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್ ಸಮೀಪವಿರುವ ಸ್ಕ್ಯಾನರೇ ಹೆಲ್ತ್‌ಕೇರ್ ಡಿವಿಜನ್ ಸಂಸ್ಥೆಯು ತನ್ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಭಾಗವಾಗಿ ರಕ್ಷಣಾತ್ಮಕ ಚಾಲನೆ ಕುರಿತು ಮೇ 25ರಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಉಚಿತ ತರಬೇತಿ ಕಾರ್ಯಕ್ರಮ ಆಯೋಜಿಸಿದೆ. ಈ ಕಾರ್ಯಕ್ರಮವನ್ನು ರಾಷ್ಟ್ರೀಯ ಸುರಕ್ಷತಾ ಮಂಡಳಿ ನಡೆಸಿಕೊಡಲಿದ್ದು, ಸುರಕ್ಷತಾ ಜಾಗೃತಿ, ರಕ್ಷಣಾತ್ಮಕ ಚಾಲನಾ ಸಲಹೆಗಳು, ರಸ್ತೆ ಜಾಗೃತಿ ಕುರಿತು ತಜ್ಞರು ತರಬೇತಿ ನೀಡಲಿದ್ದಾರೆ.

ಬಿಎಸ್‌ಎಸ್ ವಿದ್ಯೋದಯ ಶಾಲೆ ಉದ್ಘಾಟನೆ

ಇಡೀ ದೇಶದಲ್ಲೇ ಹೆಮ್ಮೆಯ ಸಂಸ್ಥೆಯಾಗಲಿ ; ಶ್ರೀ ಪಲಿಮಾರು ಮಠಾಧೀಶ ಶ್ರೀ ವಿದ್ಯಾಧೀಶತೀರ್ಥರ ಆಶೀರ್ವಚನ

ಮೈಸೂರು, ಮೇ 23(ಪಿಎಂ)– ವೈಕೆ ಅಮೃತಾ ಬಾಯಿ ಎಸ್‌ಕೆ ಸುರಮ ಬಾಯಿ ಭಗಿನಿ ಸೇವಾ ಸಮಾಜ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ ಮತ್ತು ಶ್ರೀ ವಿಜಯವಿಠ್ಠಲ ವಿದ್ಯಾ ಪ್ರತಿಷ್ಠಾನದ ಆಶ್ರಯದಲ್ಲಿ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿ ನೂತನವಾಗಿ ನಿರ್ಮಾಣವಾಗಿರುವ ಬಿಎಸ್‌ಎಸ್ ವಿದ್ಯೋದಯ ಶಾಲೆ (ಭಗಿನಿ ಸೇವಾ ಸಮಾಜ) ಗುರುವಾರ ಉದ್ಘಾಟನೆಗೊಂಡಿತು.

ಈ ಶಾಲೆಯ ಸುಸಜ್ಜಿತ ನೂತನ ಕಟ್ಟಡವನ್ನು ಸುಮಾರು 30 ಕೋಟಿ ರೂ. ವೆಚ್ಚದಲ್ಲಿ ಲಕ್ಷದ 16 ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಾಣಗೊಂಡಿದೆ (ನೆಲ ಅಂತಸ್ತು ಸೇರಿದಂತೆ ನಾಲ್ಕು ಅಂತಸ್ತುಗಳನ್ನು ಒಳಗೊಂಡಿದೆ). ಕೇವಲ 1 ವರ್ಷ 9 ತಿಂಗಳಲ್ಲಿ ನಿರ್ಮಾಣಗೊಂಡಿರುವ ಈ ಕಟ್ಟಡವನ್ನು ಉಡುಪಿಯ ಶ್ರೀ ಪಲಿಮಾರು ಮಠಾಧೀಶ ಶ್ರೀ ವಿದ್ಯಾಧೀಶತೀರ್ಥ ಸ್ವಾಮೀಜಿ, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಯವರು ಸಾನ್ನಿಧ್ಯ ವಹಿಸಿ ಉದ್ಘಾಟನೆ ನೆರವೇರಿಸಿದರು.

ಶಾಲೆಯ ಶ್ರೀ ವಿಶ್ವೇಶತೀರ್ಥ ಮಂಟಪದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಮೂವರು ಸ್ವಾಮೀಜಿಯವರು ಉದ್ಘಾಟಿಸಿ ಆಶೀರ್ವಚನ ನೀಡಿದರು. ಶ್ರೀ ವಿದ್ಯಾಧೀಶತೀರ್ಥ ಸ್ವಾಮೀಜಿ ಮಾತನಾಡಿ, ಇಂದು ವ್ಯಾಸ ಪೂರ್ಣಿಮೆಯಾಗಿದ್ದು, ನಮ್ಮ ಸಮಾಜಕ್ಕೆ ಮಹಾಭಾರತದಂತಹ ಜ್ಞಾನರತ್ನ ಕೊಟ್ಟ ವ್ಯಾಸರ ಪೂರ್ಣಿಮೆಯ ದಿನ ಈ ಶಾಲೆ ಉದ್ಘಾಟನೆಯಾಗಿರುವುದು ಸಂತಸದ ಸಂಗತಿ. ಈ ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿಗಳೆಲ್ಲಾ ವ್ಯಾಸರಂತೆಯೇ ಜ್ಞಾನಿಗಳಾಗಲಿ ಎಂದು ಆಶೀರ್ವದಿಸಿದರು.

> 1951ರಿಂದ 67ರವರೆಗೆ ಹಿಂದಿ ಶಿಕ್ಷಕಿಯಾಗಿ ಭಗಿನಿ ಸೇವಾ ಸಮಾಜ ಶಾಲೆಯಲ್ಲಿ ದುಡಿದ 96 ವರ್ಷದ ಜಿ.ಪದ್ಮಾವತಿ ಅವರು ಕೂಡಿಟ್ಟ ಹಣವನ್ನು ಶಾಲೆ ಕಟ್ಟಡ ನಿರ್ಮಾಣಕ್ಕೆ ದಾನವಾಗಿ ನೀಡಿದ ಹಿನ್ನೆಲೆಯಲ್ಲಿ ಅವರಿಗೆ ಸ್ಮರಣಿಕೆ ನೀಡಿ ಸ್ವಾಮೀಜಿಗಳು ಆಶೀರ್ವದಿಸಿದರು. ಅಂತೆಯೇ ಎಲ್ಲಾ ದಾನಿಗಳಿಗೂ ಸ್ಮರಣಿಕೆ ನೀಡಲಾಯಿತು.

ಶೈಕ್ಷಣಿಕ ಬಾಲರಾಮರು: ಈ ಶಾಲೆಯು ಕೇವಲ ಕಟ್ಟಡದ ಆಲಯವಲ್ಲ, ಇದೊಂದು ಮಟಾಣಿಗಳ ಅಧ್ಯಯನ ಕೇಂದ್ರ. ಅಂದರೆ ದೈವ ಸ್ವರೂಪರಾದ ಮಕ್ಕಳ ದೇವಸ್ಥಾನ. ನಮ್ಮ ಶ್ರೀ ವಿಶ್ವಪ್ರಸನ್ನತೀರ್ಥರು ಅಯೋಧ್ಯೆಯಲ್ಲಿ ಬಾಲರಾಮನ ಪ್ರತಿಷ್ಠಾಪನೆಯಲ್ಲಿ ಪಾಲ್ಗೊಂಡಿದ್ದರು. ಆ ಮೂಲಕ ಇಡೀ ದೇಶಕ್ಕೆ ಒಳ್ಳೆಯದನ್ನು ಮಾಡಿದ ದೊಡ್ಡ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಹರ್ಷ ವ್ಯಕ್ತಪಡಿದರು.

ಅಯೋಧ್ಯೆಯಲ್ಲಿ ಒಬ್ಬ ಬಾಲರಾಮನ ಪ್ರತಿಷ್ಠಾಪನೆ ಮಾಡಿದ್ದರೆ, ಮೈಸೂರಿನ ಶೈಕ್ಷಣಿಕ ವಲಯದಲ್ಲಿ ಸಾವಿರಾರು ಬಾಲರಾಮರನ್ನು ಪ್ರತಿಷ್ಠಾಪನೆ ಮಾಡುತ್ತಿದ್ದಾರೆ. ಅಯೋಧ್ಯೆಯಲ್ಲಿರುವುದು ಸ್ಥಾವರ ಬಾಲರಾಮನಾದರೆ, ಇಲ್ಲಿ ಜಂಗಮ ಬಾಲರಾಮರು ಬರಲಿದ್ದಾರೆ. ಭಗಿನಿ ಸೇವಾ ಸಮಾಜ ಇಂದು ಬಿಎಸ್‌ಎಸ್ ವಿದ್ಯೋದಯವಾಗಿ ಪರಿವರ್ತನೆಯಾಗಿದೆ. ಈ ವಿದ್ಯಾಸಂಸ್ಥೆ ಇಡೀ ದೇಶದಲ್ಲೇ ದೊಡ್ಡ ಹೆಮ್ಮೆಯ ಸಂಸ್ಥೆಯಾಗಲಿ ಎಂದು ಆಶಿಸಿದರು.

ಸಂಸ್ಕೃತಿ ವಾರಸುದಾರರು: ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಮೈಸೂರು ನಗರದ ಜ್ಞಾನ ವಲಯದ ವಿಸ್ತರಣೆಗೆ ಪೂರಕವಾಗಿ ಬಿಎಸ್‌ಎಸ್ ವಿದ್ಯೋದಯ ಶಾಲೆ ಪ್ರಾರಂಭಗೊಂಡಿದೆ. ಇಲ್ಲಿ ಬೆಳೆಯುವ ಮಕ್ಕಳು ನಮ್ಮ ಸಂಸ್ಕೃತಿಯ ವಾರಸುದಾರರಾಗಲಿ. ಮೈಸೂರಿನಲ್ಲಿ ಈಗಾಗಲೇ ವಿಜಯವಿಠಲ ಶಿಕ್ಷಣ ಸಂಸ್ಥೆ ಅತ್ಯಂತ ಬೇಡಿಕೆ ಹೊಂದಿರುವ ಸಂಸ್ಥೆಯಾಗಿದೆ. ಅದರ ಮತ್ತೊಂದು ಶಾಖೆಯಾಗಿ ಈ ವಿದ್ಯಾಸಂಸ್ಥೆ ಈಗ ಪ್ರಾರಂಭಗೊಂಡಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಮನುಷ್ಯನಿಗೆ ಜ್ಞಾನ ಮತ್ತು ಸಂಸ್ಕಾರ ಎರಡು ಅತ್ಯಂತ ಮುಖ್ಯ. ವಿದ್ಯೆ ಮತ್ತು ಸಂಸ್ಕಾರ ಎರಡೂ ಕೂಡಿದರೆ ಮನುಷ್ಯ ಅತ್ಯುತ್ತಮವಾಗಿ ಬೆಳೆಯಲು ಸಾಧ್ಯವಾಗಲಿದೆ. ಜೊತೆಗೆ ದೇಶ ಮತ್ತು ಪ್ರಪಂಚಕ್ಕೆ ಸಭ್ಯ ವ್ಯಕ್ತಿತ್ವವೊಂದು ದೊರೆಯುವಂತಾಗಲಿದೆ. ಅತ್ಯಂತ ಬುದ್ಧಿವಂತರು ಸನ್ಮಾರ್ಗದಲ್ಲಿ ಸಾಗದೇ ಇದ್ದಾಗ ಸಮಾಜದಲ್ಲಿ ಅನೇಕ ದುಷ್ಕೃತ್ಯಗಳು ಅವರಿಂದ ನಡೆಯುವಂತಾಗಲಿದೆ. ಹಾಗಾಗಿ ಮಕ್ಕಳಿಗೆ ವಿದ್ಯೆ–ಬುದ್ಧಿಯೊಂದಿಗೆ ಉತ್ತಮ ಸಂಸ್ಕಾರ ನೀಡಬೇಕು. ನಾಳೆ ಸರಿಯಾಗುತ್ತಾರೆಂಬ ಭಾವನೆ ಬಿಟ್ಟು ಮಕ್ಕಳಲ್ಲಿ ಸದ್ಗುಣ ಬೆಳೆಸಲು ಹೆಚ್ಚಿನ ಒತ್ತು ನೀಡಬೇಕು. ಜ್ಞಾನಕ್ಕಿಂತ ಮಿಗಿಲಾದ ಸಂಪತ್ತು ಮತ್ತೊಂದಿಲ್ಲ. ಹಾಗಾಗಿ ಜ್ಞಾನ ನೀಡುವ ಶಿಕ್ಷಣ ಸಂಸ್ಥೆಗಳು ಉತ್ತಮವಾಗಿ ಬೆಳವಣಿಗೆ ಕಾಣಬೇಕು ಎಂದರು.



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿ ನಿರ್ಮಿಸಿರುವ ಬಿಎಸ್‌ಎಸ್ ವಿದ್ಯೋದಯ ಶಾಲೆಯನ್ನು ಗುರುವಾರ ಶ್ರೀ ವಿದ್ಯಾಧೀಶತೀರ್ಥ ಸ್ವಾಮೀಜಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಯವರು ಉದ್ಘಾಟಿಸಿದರು.

ದೇಶದ ಭವಿಷ್ಯ ಉಜ್ವಲ: ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಮಾತನಾಡಿ, ಅಮೃತಾ ಬಾಯಿ ಅವರು ಮಾಡಿರುವ ಪುಣ್ಯ ತುಂಬ ದೊಡ್ಡದು. ಅವರ ಕನಸು ಹೆಮ್ಮರವಾಗಿ ಇಂದು ಬೆಳೆಯುತ್ತಿದೆ. ಅವರ ಮೊಮ್ಮಕ್ಕಳು ನಮ್ಮ ಗುರುಗಳ ಪಾದಕ್ಕೆ ಭಗಿನಿ ಸೇವಾ ಸಮಾಜವನ್ನು ಸಮರ್ಪಿಸಿದರು. ಶಿಕ್ಷಣಕ್ಕೆ ಸಂಬಂಧಿಸಿದಂತೆ ಗುರುಗಳ ಮಾತು ಸ್ಮರಣೀಯ. ಒಬ್ಬ ವ್ಯಕ್ತಿಯ ಭವಿಷ್ಯವನ್ನು ಗ್ರಹ–ನಕ್ಷತ್ರಗಳು ತೀರ್ಮಾನ ಮಾಡುತ್ತವೆ. ಆದರೆ ದೇಶ ಭವಿಷ್ಯವನ್ನು ಉಜ್ವಲಗೊಳಿಸುವವರು ನಕ್ಷತ್ರದಂತೆ ಬೆಳಗುವ ನಮ್ಮ ಮಕ್ಕಳು. ಹಾಗಾಗಿ ನಮ್ಮ ಮಕ್ಕಳಲ್ಲಿ ನಕ್ಷತ್ರದಂತಹ ಪ್ರಕಾಶವಿದ್ದರೆ ಆ ದೇಶದ ಭವಿಷ್ಯ ಉಜ್ವಲವಾಗಲಿದೆ ಎಂದು ಗುರುಗಳು ಹೇಳಿದ್ದಾರೆ. ವಿದ್ಯೆಯೊಂದಿಗೆ ಮಕ್ಕಳಿಗೆ ಸಂಸ್ಕಾರ ನೀಡಬೇಕು. ಅದೇ ಧ್ಯೇಯದೊಂದಿಗೆ ಈ ಸಂಸ್ಥೆ ಪ್ರಾರಂಭ ಮಾಡಿದ್ದೇವೆ ಎಂದು ತಿಳಿಸಿದರು.

ಬಿಎಸ್‌ಎಸ್ ವಿದ್ಯೋದಯ ಶಾಲೆ ಗೌರವ ಕಾರ್ಯದರ್ಶಿ ಆರ್.ವಾಸುದೇವ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿ, ಈ ಶಾಲೆ ಹಾಗೂ ಅದರ ಕಟ್ಟಡ ಎರಡೂ ನೂತನವಾದವು. ಈ ಜಾಗದಲ್ಲಿ ಭಗಿನಿ ಸೇವಾ ಸಮಾಜ ಹುಟ್ಟು ಹಾಕಿದವರು ವೈಕೆ ಅಮೃತಾ ಬಾಯಿ. ಈ ಸಂಸ್ಥೆಗೆ ಈಗ 101 ವರ್ಷ. ಅಮೃತಾ ಬಾಯಿ ಅವರ ನಂತರದಲ್ಲಿ ಅವರ ಪುತ್ರಿ ಸುರಮ ಬಾಯಿ ಸಂಸ್ಥೆ ಮುನ್ನಡೆಸಿದರು. 2012ರಲ್ಲಿ ಅಮೃತ ಬಾಯಿ ಕುಟುಂಬದವರು ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಯವರಿಗೆ ಸಂಸ್ಥೆ ವಹಿಸಿದರು. 2024–25ನೇ ಸಾಲಿನಿಂದಲೇ ಶೈಕ್ಷಣಿಕ ಚಟುವಟಿಕೆ ಶಾಲೆಯಲ್ಲಿ ಆರಂಭಗೊಳ್ಳಲಿದೆ. 150 ಮಕ್ಕಳು ಈಗಾಗಲೇ ಪ್ರವೇಶಾತಿ ಪಡೆದಿದ್ದಾರೆ ಎಂದು ವಿವರಿಸಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಹಂಸಿಣಿ ಕುಮಾರ್ ತಂಡ ಭಕ್ತಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟಿತು. ವಿಜಯವಿಠ್ಠಲ ವಿದ್ಯಾಸಂಸ್ಥೆ ಅಧ್ಯಕ್ಷರೂ ಆದ ಉದ್ಯಮಿ ಆರ್.ಗುರು, ಬಿಎಸ್‌ಎಸ್ ವಿದ್ಯೋದಯ ಶಾಲೆಯ ಗೌರವ ಕಾರ್ಯದರ್ಶಿ ಆರ್.ವಾಸುದೇವ ಭಟ್, ಕಾರ್ಯಾಧ್ಯಕ್ಷರೂ ಆದ ಅಮೃತಾ ಬಾಯಿ ಮೊಮ್ಮಗ ಬಿ.ಶ್ರೀನಿವಾಸ್, ಬಿಎಸ್‌ಎಸ್ ವಿದ್ಯೋದಯ ಶಾಲೆಯ ಖಜಾಂಚಿ ಹೆಚ್.ಟಿ.ಸ್ವರ್ಣ ಕುಮಾರ್, ಟ್ರಸ್ಟಿಗಳಾದ ಪದ್ಮಜಾ ಶ್ರೀನಿವಾಸ್, ಕೆ.ಎಸ್.ಗುರುರಾಜ್ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಪತಿ : "ನನ್ನ ಮೇಲೆ ಎಷ್ಟೊಂದು ಪ್ರೀತಿ ನಿನಗೆ, ನನಗೋಸ್ಕರ ಎರಡು ಬನಿಯನ್ ತಂದಿದ್ದೀಯಾ?"

ಪತ್ನಿ : "ಐದು ಸಾವಿರ ಕೊಟ್ಟು ರೇಷ್ಮೆ ಸೀರೆ ತಗೊಂಡೆ. ಅದಕ್ಕೆ ಫ್ರೀಯಾಗಿ ಕೊಟ್ಟರು ಅಷ್ಟೇ".

ಮೈಸೂರು ಮಿತ್ರ

ಶುಕ್ರವಾರ, 24 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಅಪವಾದಗಳಿಗೆ ಅತ್ಯುತ್ತಮ ಉತ್ತರವೆಂದರೆ ಮೌನ –ಬೆನ್‌ಜಾನ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತೋಟ ಮಾಡಿದವನಿಗೆ ಕೋಟಲೆಯಿಲ್ಲ

ನಿಮ್ಮ ಪತ್ರಗಳು

■ ಕುಡಿಯುವ ನೀರಿಗಾಗಿ ದುಸ್ಸಾಹಸ

ಮಾನ್ಯರೇ



ಮಂಡ್ಯ ಜಿಲ್ಲೆಯ ಕೆಆರ್.ಪೇಟೆ ತಾಲೂಕಿನ ಅಂಚನಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೇಳತೀರದಾಗಿದೆ. ಗ್ರಾಮದ ಜನರು ನೀರಿಲ್ಲದ ಕಾರಣ ಕೆಲ ಜಮೀನುಗಳ ಕೊಳವೆ ಬಾವಿಯನ್ನೇ ಅವಲಂಬಿಸಿದ್ದಾರೆ. ಮಹಿಳೆಯರಂತು ದಿನನಿತ್ಯ ಹಳ್ಳ ಕೊಳ್ಳಗಳೆನ್ನದೆ ಬಿಂದಿಗೆ ಹಿಡಿದು ಮರದ ಸೇತುವೆಗಳನ್ನು ದಾಟುತ್ತ ದುಸ್ಸಾಹಸದಿಂದಲೇ ನೀರನ್ನು ತರುತ್ತಿದ್ದಾರೆ. ಹಿಂದಿನಿಂದಲೂ ಗ್ರಾಮದಲ್ಲಿ ನೀರಿನ ಸಮಸ್ಯೆ ಇರುವ ಕಾರಣ ಕೆ.ಆರ್. ಪೇಟೆ ಮಾಜಿ ಶಾಸಕರಾದ ನಾರಾಯಣ ಗೌಡ ಅವರ ಬಳಿ ಗ್ರಾಮಸ್ಥರು ಹೋಗಿ ಸಮಸ್ಯೆಯನ್ನು ಬಗೆಹರಿಸುವಂತೆ ಮನವಿ ಮಾಡಿದ್ದರು. ಮನವಿಗೆ ಸ್ಪಂದಿಸಿದ ಮಾಜಿ ಶಾಸಕರು ಗ್ರಾಮದಲ್ಲಿ ಎಲ್ಲರಿಗೂ ಅನುಕೂಲವಾಗುವಂತೆ ಬೋರ್‌ವೆಲ್ ಕೊರೆಸಿದ್ದರು. ಆದರೆ ಅದು ಕೂಡ ಬತ್ತಿ ಹೋಗಿರುವುದರಿಂದ ಕುಡಿಯಲು ಮತ್ತು ದಿನಬಳಕೆಗೆ ನೀರಿಲ್ಲದೆ ಜನರು ಪ್ರತಿಕ್ಷಣ ಪರಿತಪಿಸುತ್ತಿದ್ದಾರೆ. ದನ–ಕರುಗಳ ಸ್ಥಿತಿಯಂತೂ ಮನ ಕಲಕುವಂತಿದೆ. ನೀರಿನ ಸಮಸ್ಯೆ ಇರುವ ಗ್ರಾಮೀಣ ಪ್ರದೇಶಗಳನ್ನು ಗುರುತಿಸಿ ಜಿಲ್ಲಾಡಳಿತದ ವತಿಯಿಂದ ಬೋರ್‌ವೆಲ್ ಕೊರೆಸಿ ಅಥವಾ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆದು ಗ್ರಾಮಗಳಿಗೆ ಸಮರ್ಪಕವಾಗಿ ಕುಡಿಯುವ ನೀರನ್ನು ಪೂರೈಸಬೇಕೆಂದು ಇತ್ತೀಚೆಗೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಪರ ಕಾರ್ಯದರ್ಶಿ ಅಂಜುಂ ಪರ್ವೇಜ್ ಹೇಳಿದ್ದು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಅವರ ನಿರ್ದೇಶನದಂತೆ ಸ್ಥಳೀಯ ಆಡಳಿತ ಜರೂರಾಗಿ ಗ್ರಾಮಗಳಿಗೆ ನೀರು ಒದಗಿಸುವ ಕಾರ್ಯಕಲ್ಪ ಮಾಡಲಿ.

–ಎ.ಕೆ. ದೇವಿಕ, ಡಿ ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜು ಮೈಸೂರು.

■ ಗೊಬ್ಬಳಿ ಮರ ತಂಗುದಾಣ ದುರಸ್ತಿಗೊಳಿಸಿ

ಮಾನ್ಯರೆ,



ನಾನು ಒಬ್ಬ ಹಿರಿಯ ನಾಗರಿಕನಾಗಿದ್ದು, ಮೈಸೂರಿನ ಜೆ.ಪಿ.ನಗರದ ನಿವಾಸಿ. ಜೆ.ಪಿ.ನಗರದ ಪ್ರಮುಖ ತಂಗುದಾಣವಾದ ಗೊಬ್ಬಳಿ ಮರ ತಂಗುದಾಣವು ಶಿಥಿಲಾವಸ್ಥೆಯಲ್ಲಿದೆ.

ತಂಗುದಾಣದ ಒಳಭಾಗದ ಮೇಲ್ಛಾವಣಿಯ ಗಾರೆ ಕಿತ್ತು ಬಂದಿದ್ದು, ಕಬ್ಬಿಣದ ಸರಳುಗಳು ಕಾಣುತ್ತಿವೆ. ಪ್ರಸ್ತುತ ಮಳೆಗಾಲವಾದ್ದರಿಂದ ಪ್ರಯಾಣಿಕರು ಭಯದಿಂದಲೇ ಇಲ್ಲಿ ಬಸ್ಸಿಗಾಗಿ ಕಾಯುವಂತಾಗಿದೆ. ಅನಾಹುತಗಳು ಸಂಭವಿಸುವ ಮುನ್ನ ಸಂಬಂಧಪಟ್ಟವರು ತುರ್ತಾಗಿ ಇತ್ತ ಗಮನ ಹರಿಸಿ ಸದರಿ ತಂಗುದಾಣವನ್ನು ದುರಸ್ತಿಗೊಳಿಸಿ, ಬೆಳಕಿನ ಸೌಲಭ್ಯ ಕಲ್ಪಿಸಬೇಕಾಗಿ ಮನವಿ.

–ಕೆ.ಎನ್.ಅಶ್ವತ್ಥನಾರಾಯಣ, ಮೈಸೂರು.

■ ಕತ್ತರಿ

ಮಾನ್ಯರೆ,

ಪ್ರಜ್ವಲ್‌ನನ್ನು ಕತ್ತರಿಸಬೇಕೆಂದು ನೇಹಾ ತಂದೆಯ ಆಗ್ರಹ. ವಾಸ್ತವವಾಗಿ ಕತ್ತರಿಸಬೇಕಾದ್ದು ನೂರಾರು ಭಗಿನಿಯರನ್ನು ನಿರ್ಲಜ್ಜವಾಗಿ ಭಂಗಿಸಿದ ಆ 'ಮಹ(ಗ)ರಾಯ'ನ ಮರ್ಮಾಂಗವನ್ನು! (ಮಾಡಿದ್ದುಣ್ಣೋ...) ಸ್ವಾರಸ್ಯವೆಂದರೆ, ಮಗನಂತೆ ಅಪ್ಪ!

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

■ ಟೆರೇಷಿಯನ್ ಕಾಲೇಜು ಬಳಿ ಫುಟ್‌ಪಾತ್ ಅತಿಕ್ರಮಣ



ಮಾನ್ಯರೆ,

ಮೈಸೂರಿನ ಟೆರೇಷಿಯನ್ ಕಾಲೇಜು ಬಳಿ ಬನ್ನೂರು ವೃತ್ತದಿಂದ ತಿ.ನರಸೀಪುರ ಕಡೆಗೆ ಕೇವಲ ಮೂವತ್ತು ಮೀಟರುಗಳ ದೂರದಲ್ಲಿ ಬಹಳ ವರ್ಷಗಳ ಹಿಂದೆಯೇ ಮೈಸೂರು ಮಹಾನಗರ ಪಾಲಿಕೆಯವರು ಜನರು ಓಡಾಡಲು ಕನಿಷ್ಠ ಅಗಲದ ಪಾದಚಾರಿ ಮಾರ್ಗವನ್ನು ಬಿಡದೆ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಅವೈಜ್ಞಾನಿಕವಾಗಿ ಸ್ಥಳ ಗುರುತಿಸಿ ಒಂದು ಸಾರ್ವಜನಿಕ ಶೌಚಾಲಯವನ್ನು ಕಟ್ಟಿದ್ದಾರೆ. ಸಾರ್ವಜನಿಕರಿಗೆ ಉಪಯೋಗವಂತು ಆಗುತ್ತಿದೆ. ಇದರ ಹೊರತಾಗಿ ಸಾವಿರಾರು ಜನರು ಅದರಲ್ಲೂ ಹಿರಿಯ ನಾಗರಿಕರು ಈ ಮಾರ್ಗದಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೂ ಓಡಾಡುತ್ತಾರೆ. ಸಮಸ್ಯೆ ಎಂದರೆ ಬನ್ನೂರು ವೃತ್ತದಿಂದ ಸಂಗೀತಾ ಕಾರ್ನರ್‌ವರೆಗೆ ಪಾದಚಾರಿ ಮಾರ್ಗದ ಮೇಲೆ ಅಡ್ಡಲಾಗಿ ಮೀನಿನ ಅಂಗಡಿ ಮತ್ತು ಸಾರ್ವಜನಿಕ ಶೌಚಾಲಯ ನಂತರ ಉದ್ದಕ್ಕೂ ಹೂವಿನ ಅಂಗಡಿಗಳು, ಈರುಳ್ಳಿ, ತರಕಾರಿ ಹಾಗೂ ಹಣ್ಣಿನ ಅಂಗಡಿಗಳು ಪೂರ್ಣ ಪ್ರಮಾಣದಲ್ಲಿ ಆಕ್ರಮಿಸಿಕೊಂಡಿವೆ. ಈ ಭಾಗದಲ್ಲಿ ಪಾದಚಾರಿ ಮಾರ್ಗದ ಬದಲು ರಸ್ತೆಯ ಮೇಲೆ ಜನರು ಓಡಾಡುತ್ತಿದ್ದಾರೆ. ವಾಹನಗಳ ದಟ್ಟಣೆ ಬಹಳವೇ ಇರುವುದರಿಂದ ಆಗಾಗ್ಗೆ ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತಲೇ ಇವೆ. ತಮಾಷೆಯೆಂದರೆ ವೃತ್ತವನ್ನೇ ಆಕ್ರಮಿಸಿಕೊಂಡು ಎರಡು ಹೂವಿನ ಅಂಗಡಿಗಳು ಇವೆ. ಇದರಿಂದ ಜನರು ವಾಹನಗಳು ಸಂಚರಿಸುವಾಗಲೂ ವೃತ್ತದೊಳಗೇ ನಡೆಯಬೇಕಾಗಿದೆ.

ಇದಲ್ಲದೆ ಶೌಚಾಲಯದ ಪಕ್ಕದಲ್ಲಿನ ಮ್ಯಾನ್‌ಹೋಲ್‌ನಿಂದ ಗಲೀಜು ನೀರು ಹರಿಯುತ್ತಿದ್ದರೂ ಇಲ್ಲಿಯವರೆಗೆ ದುರಸ್ತಿಪಡಿಸದೆ ಬ್ಯಾರಿಕೇಡ್ ಒಂದನ್ನು ರಕ್ಷಣೆಗಾಗಿ ಹಾಕಿರುತ್ತಾರೆ. ಒಟ್ಟಿನಲ್ಲಿ ಯಾರೂ ಗಮನ ಹರಿಸದಿರುವುದ ರಿಂದ ರಾಜಕುಮಾರ್ ರಸ್ತೆಯೂ ಸೇರಿದಂತೆ ಈ ಭಾಗ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬರುವುದೇ ಎಂಬ ಸಂಶಯ ಇಲ್ಲಿನ ಜನತೆಯಲ್ಲಿ ಮೂಡಿದೆ! ದಯಮಾಡಿ ಸಂಬಂಧಿಸಿದವರು ಇತ್ತ ಗಮನಿಸಿ ಸಮಸ್ಯೆ ಬಗೆಹರಿಸಿ.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಮಂಥನ



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಕ್ಕಳು ಬರೀ ಶಿಕ್ಷಿತರಾದರೆ ಸಾಲದು...!?



ಪ್ರತಿ ವರ್ಷದಂತೆಯೇ ಮತ್ತೆ ಜೂನ್ ಬಂದಿದೆ. ಇಂಗ್ಲಿಷ್ ಶಿಕ್ಷಣ ಪದ್ಧತಿಗೆ ಒಗ್ಗಿಕೊಂಡಾಗಿನಿಂದ ಜೂನ್ ಎಂದರೆ, ಮಳೆಗಾಲ ಎಂಬುದಕ್ಕಿಂತ ಹೆಚ್ಚಾಗಿ; ಮಕ್ಕಳಿಗೆ ಶಾಲೆ ಆರಂಭ! ಕೆಲವರಿಗೆ ಶಾಲೆ ಪುನರಾರಂಭವಾದರೆ, ಹಲವು ಮುದ್ದು ಮಕ್ಕಳಿಗೆ ಶಾಲಾ ಶಿಕ್ಷಣದ ಶುಭಾರಂಭ!

ಮನೆಯೆ ಮೊದಲ ಪಾಠಶಾಲೆ ಎಂಬ ನಾಣ್ಣುಡಿ ಇಂದಿಗೂ ಪ್ರಚಲಿತದಲ್ಲಿರುವುದು ಮಾತ್ರವಲ್ಲ, ಎಲ್ಲರೂ ಒಪ್ಪಿಕೊಂಡು ಪಾಲಿಸುತ್ತಾ ಬರುತ್ತಿರುವ ಶೈಲಿ. ಮಗು ಹುಟ್ಟಿದಾಗಿನಿಂದ ಸಾಕಷ್ಟು ವಿಷಯಗಳನ್ನು ಅನಾಯಾಸವಾಗಿ, ನಿರಾಯಾಸವಾಗಿ, ಒತ್ತಾಯದಿಂದ, ಕುತೂಹಲಕ್ಕಾಗಿ, ಅನಿವಾರ್ಯವಾಗಿ ಕಲಿಯಲು ತೊಡಗುತ್ತದೆ. ಸುಮಾರು 3 ವರ್ಷವಾಗುವವರೆಗೂ ಕಲಿಯುವ ಈ ಕೆಲವು ಪ್ರಾಥಮಿಕ ಪಾಠಗಳು ಮಗುವಿನ ಜೀವನದುದ್ದಕ್ಕೂ ಉಪಯೋಗಕ್ಕೆ ಬರುವಂತಹ Life Skills. ಕಲಿಕೆ ಎಂದಿಗೂ ನಿಲ್ಲುವುದಿಲ್ಲವಾದರೂ, ಬಾಲ್ಯದ ಈ ಪ್ರಥಮ ಕಲಿಕೆಗಳು ಮಗುವಿಗೆ ತನ್ನ ಕಲಿಕೆಯ ಸಾಮರ್ಥ್ಯದ ಮೇಲೆ ನಂಬಿಕೆ ಮೂಡಿಸುವಂತಹವು, ಭರವಸೆ ಕೊಡುವಂಥವು.

ಮೊದಲೆಲ್ಲಾ ಗುರುಕುಲ ಪದ್ಧತಿಯಿದ್ದಾಗ ಮಗು ಸರಿಸುಮಾರು ತನಗೆ 10–12 ವರ್ಷವಾಗುವವರೆಗೂ ಮನೆಯಲ್ಲಿಯೇ ಇದ್ದು ಸಾಕಷ್ಟು ಜೀವನ ಪಾಠವನ್ನು ಕಲಿತು, ನಂತರ ತನ್ನ ಆಸಕ್ತಿಯ ವಿಷಯವನ್ನು ಕಂಡುಕೊಂಡು ಗುರುಕುಲಕ್ಕೆ ತೆರಳಿ ವಿಷಯ ತಜ್ಞತೆಯನ್ನು ಪಡೆಯತ್ತಿತ್ತು. ಆದರೆ ಬದಲಾದ ಈ ಕಾಲದಲ್ಲಿ ಮಗುವಿನ ಜನನದ ಸುದ್ದಿ ತಿಳಿಯುತ್ತಲೇ, ಶಾಲೆ, ಶುಲ್ಕ, ಮಾಧ್ಯಮ, ಪದ್ಧತಿಗಳೆಲ್ಲ ನಿರ್ಧಾರವಾಗಿ ಬಿಡುತ್ತವೆ. ಸ್ಪರ್ಧಾತ್ಮಕ ಯುಗದಲ್ಲಿ ಮಗುವನ್ನು ಯಾರಿಗೂ ಕಡಿಮೆಯಿಲ್ಲದಂತೆ ಬೆಳೆಸಲು ಪೋಷಕರು ಇನ್ನಿಲ್ಲದಂತೆ ಬವಣೆ ಪಡುವುದು ಈಗಿನ ಫ್ಯಾಷನ್ ಆಗಿ ಬಿಟ್ಟಿದೆ.

ವಿದ್ಯಾಭ್ಯಾಸದ ಪ್ರಾಮುಖ್ಯತೆಯನ್ನು ಅರಿತಿರುವ ಸರಕಾರ ಕೂಡ, ಪ್ರತಿಯೊಂದು ಮಗುವಿಗೂ ಶಿಕ್ಷಣ ದೊರೆಯಬೇಕೆಂಬ ಧ್ಯೇಯವನ್ನು ಇಟ್ಟುಕೊಂಡು ಸಮರೋಪಾದಿಯಲ್ಲಿ ಪ್ರಯತ್ನ ಪಡುತ್ತಿದೆ.

ಹಿಂದೆಲ್ಲ ಶಾಲಾ ಶಿಕ್ಷಣ ಎಂದರೆ ಶಿಕ್ಷೆಯೊಟ್ಟಿಗೆ ಕಲಿಕೆ ಎಂಬಂತಾಗಿತ್ತು. ನಮ್ಮ ಅಪ್ಪ ಅಮ್ಮ ಅಜ್ಜಿ ತಾತಂದಿರನ್ನು ಅವರ ಶಾಲಾ ದಿನಗಳ ಬಗ್ಗೆ ಕೇಳಿದರೆ, ತಮ್ಮ ಎಲ್ಲಾ ಮೇಷ್ಟ್ರುಗಳು ಹೊಂದಿರುತ್ತಿದ್ದ ಬೆತ್ತಗಳ ವಿಶೇಷತೆಯನ್ನು ಮೊದಲು ನೆನಪಿಸಿಕೊಳ್ಳುತ್ತಾರೆ. ಅವರು ಕೊಡುತ್ತಿದ್ದ ಏಟುಗಳ ಪರಿಯನ್ನು ವಿಧವಿಧವಾಗಿ ವಿವರಿಸುತ್ತಾರೆ. ಅಂಗೈಗೆ, ಮಣಿಕಟ್ಟಿಗೆ, ಬೆನ್ನಿಗೆ, ಕಾಲುಗಳಿಗೆ ಹೊಡೆದದ್ದನ್ನು ನೆನೆಯುವಾಗ ಈಗಲೂ ಒಂದು ಕ್ಷಣ ಕಂಪಿಸುತ್ತಾರೆ. ಹೊಡೆತಗಳಲ್ಲದೆ, ಕುಕ್ಕರಗಾಲಿನಲ್ಲಿ ಕೂರಿಸಿದ್ದು, ಕೈ ಮೇಲೆತ್ತಿ ಮಂಡಿ ಮೇಲೆ ಕೂರಿಸಿದ್ದು, ಬಸ್ಕಿ ಹೊಡೆಸಿದ್ದು, ತಲೆ ಮೊಟಕಿದ್ದು, ಕಿವಿ ಹಿಂಡಿದ್ದು? ಇವುಗಳನ್ನೂ ನೆನಪಿಸಿಕೊಳ್ಳುತ್ತಾರೆ. ಶಿಕ್ಷೆಗಳ ಭಯಾನಕತೆಯನ್ನು ನೆನೆದು ನಾವು ಭಯದಿಂದ ನೋಡುತ್ತಿರುವಾಗಲೇ, ಶಿಕ್ಷಕರು ತೋರುತ್ತಿದ್ದ ನಿರ್ವ್ಯಾಜ ಪ್ರೀತಿ, ಅಕ್ಕರೆ, ಮನೆಯ ಮಕ್ಕಳೆಂಬಂತೆ ಪ್ರೀತಿ ಸಹನೆ ತುಂಬು ಜವಾಬ್ದಾರಿಯಿಂದ ಪುಸ್ತಕದ ಪಾಠ ಮಾತ್ರವಲ್ಲದೆ ಬದುಕಿನ ಪಾಠವನ್ನೂ ನಿರ್ವಂಚನೆಯಿಂದ ಕಲಿಸಿದ ಗುರುಗಳನ್ನು ಭಕ್ತಿ ಭಾವದಿಂದ, ತುಂಬು ಪ್ರೀತಿಯಿಂದ ಸ್ಮರಿಸುವಾಗ, ಆಶ್ಚರ್ಯಪಡುವ ಸರದಿ ನಮ್ಮದಾಗುತ್ತದೆ.

ಅಂದಿನ ದಿನಗಳಲ್ಲಿ ಸರ್ಕಾರಿ ಶಾಲೆಗಳೇ ಹೆಚ್ಚು. ಕೇವಲ ಇದ್ದ ಒಂದೆರಡು ಖಾಸಗಿ ಶಾಲೆಗಳಲ್ಲೂ ಹೇಳಿಕೊಳ್ಳುವ ಸೌಲಭ್ಯಗಳೇನಿರಲಿಲ್ಲ. ಆವರಣ ದೊಡ್ಡದಿದ್ದರೂ ಮೂಲಸೌಲಭ್ಯಗಳಿಲ್ಲದ ಕಟ್ಟಡಗಳಲ್ಲಿ ಶಾಲೆಗಳು ನಡೆಯುತ್ತಿದ್ದವು, ಎಷ್ಟೋ ಶಾಲೆಗಳು ಮರಗಳ ಕೆಳಗೆ ನಡೆಯುತ್ತಿದ್ದುದೂ ಉಂಟು.

ಇನ್ನು ಈಗಿನ ಕಾಲಕ್ಕೆ ಬರೋಣ. ಮೇಲೆ ಹೇಳಿದಕ್ಕೆ ತದ್ವಿರುದ್ಧವಾದ ಚಿತ್ರಣ ಈಗ ದೊರೆಯುತ್ತದೆ. ಸರ್ಕಾರಿ ಶಾಲೆಗಳೂ ಕೂಡ ಎಲ್ಲ ರೀತಿಯ ಮೂಲ ಸೌಕರ್ಯಗಳೊಂದಿಗೆ ಉನ್ನತೀಕರಿಸಲ್ಪಟ್ಟಿವೆ. ಉತ್ತಮ ಕಟ್ಟಡ, ಶೌಚಾಲಯ, ಕುಡಿಯುವ ನೀರು, ವಿದ್ಯುಚ್ಛಕ್ತಿ, ಕಂಪ್ಯೂಟರ್ ಎಲ್ಲವೂ! ಇನ್ನು ಖಾಸಗಿ ಶಾಲೆಗಳು ಒದಗಿಸುವ ಸೌಲಭ್ಯಗಳಂತೂ ಸ್ವಲ್ಪ ಹೆಚ್ಚೇ ಎನ್ನುವಷ್ಟು, ರೆಸಾರ್ಟ್‌ಗಳನ್ನು ಹೋಲುವ ಮಾದರಿಯಲ್ಲಿ ಅತ್ಯಾಧುನಿಕವಾಗಿ, ಆಡಂಬರವಾಗಿ ಇಂದು ಖಾಸಗಿ ಶಾಲೆಗಳು ರೂಪುಗೊಳ್ಳುತ್ತಿರುವುದು ಆಕ್ಷೇಪಣೀಯ ಬೆಳವಣಿಗೆಯೇ ಹೊರತು, ಅಪೇಕ್ಷಣೀಯವಂತೂ ಖಂಡಿತಾ ಅಲ್ಲ.

ಇನ್ನು ಮಕ್ಕಳನ್ನು ಇಂದು ಶಾಲೆಗಳಲ್ಲಿ ದಂಡಿಸುವುದಂತೂ ದೂರದ ಮಾತು. ದಂಡಂ ದಶಗುಣಂ ಭವೇತ್ ಎಂಬ ತತ್ವ ಮಕ್ಕಳಿಗೆ ಅನ್ವಯಿಸುವಂಥದಲ್ಲ ಎಂದು ಕಂಡುಕೊಂಡಿರುವ ತಜ್ಞರು ಇದರ ನಿಷೇಧಕ್ಕೆ ನಾಂದಿ ಹಾಡಿದರು. ಶಾಲೆಗಳ ಅವಿಭಾಜ್ಯ ಅಂಗವಾಗಿದ್ದ ಬೆತ್ತಗಳು ಅಥವಾ ಕೋಲುಗಳು ಇಂದು ದುರ್ಲಭವಾಗಿವೆ. ಕೆಲವು ಹಿರಿಯ ಶಿಕ್ಷಕರು ಇನ್ನೂ ಬೆತ್ತಗಳನ್ನು ತರಗತಿಗೆ ಕೊಂಡೊಯ್ಯುವ ಅಭ್ಯಾಸ ಇಟ್ಟುಕೊಂಡಿದ್ದರಾದರೂ, ಅದರ ಪ್ರಖರತೆ ಕಡಿಮೆಯಾಗಿದೆ ಎಂದೇ ಹೇಳಬೇಕು.

> ❝ ಈಗಿನ ಮಕ್ಕಳನ್ನು ನೋಡುತ್ತಿದ್ದರೆ ಅವರಲ್ಲಿ ತಾಳ್ಮೆ ಕಡಿಮೆಯಾಗಿದೆ. ಗುರು ಹಿರಿಯರಲ್ಲಿ ಭಕ್ತಿ ತೋರಿಸುವ ಪರಿಪಾಠ ಕಡಿಮೆಯಾಗುತ್ತಿದೆ. ತಮ್ಮ ಶಿಕ್ಷಕರನ್ನು ಅವಳು–ಇವಳು ಎನ್ನುತ್ತಾ ಏಕವಚನದಲ್ಲಿ ಸಂಬೋಧಿಸುವುದು ಶಾಲೆಗಳಲ್ಲಿ ಸಾಮಾನ್ಯವೆನಿಸಿದೆ. ಅಪ್ಪ ಅಮ್ಮನ ಮಾತುಗಳನ್ನು ಕಿವಿಗೂ ಹಾಕಿಕೊಳ್ಳದೆ ಉಡಾಫೆ ಮಾಡುತ್ತಾರೆ. ಮನಸ್ಸಿಗೆ ಬಂದದ್ದನ್ನೆಲ್ಲಾ ಕೊಳ್ಳುವ ಅಭ್ಯಾಸ, ಕಂಡಿದ್ದನ್ನೆಲ್ಲಾ ತಿನ್ನುವ ಚಟ. ಶಿಸ್ತು ಅವರ ಜೀವನದಲ್ಲಿ ಇಲ್ಲವಾಗಿದೆ. ತಮ್ಮ ವಸ್ತುಗಳನ್ನು ಚೊಕ್ಕಟವಾಗಿ ಜೋಡಿಸಿ ಇಟ್ಟುಕೊಳ್ಳುವ ಶಿಸ್ತು ಮಾಯವಾಗಿದೆ. ಸಾಮಾಜಿಕ ಜವಾಬ್ದಾರಿ ಶೂನ್ಯವಾಗಿದೆ. ನೀವು ಹಲವು ಶಾಲಾ ಕಾಲೇಜುಗಳ ಆವರಣ, ಶಾಲಾ ಕೊಠಡಿಗಳು, ಶೌಚಾಲಯಗಳನ್ನು ನೋಡಿರಬೇಕು. ನಲ್ಲಿಯಲ್ಲಿ ನೀರು ವ್ಯರ್ಥವಾಗಿ ಸುರಿಯುತ್ತಿದ್ದರೂ ನಿಲ್ಲಿಸುವ ಗೋಜಿಗೂ ಹೋಗುವುದಿಲ್ಲ. ಅಲ್ಲಿನ ಶೌಚಾಲಯಗಳು ಗಬ್ಬೆದ್ದು ನಾರುತ್ತಿರುತ್ತವೆ. ಕೊಠಡಿಗಳಲ್ಲಿ ಕಸ ಎಲ್ಲೆಂದರಲ್ಲಿ ಹರಡಿರುತ್ತದೆ. ಫ್ಯಾನ್‌ಗಳ ರೆಕ್ಕೆಗಳು ಸೊಟ್ಟಗಾಗಿದ್ದರೆ, ಸ್ವಿಚ್ಚುಗಳು ಒಡೆದ ಸ್ಥಿತಿಯಲ್ಲಿರುತ್ತವೆ. ಲೈಟುಗಳೂ ಒಡೆದು ಹೋಗಿರುತ್ತವೆ. ನಾನೇ ನೋಡಿರುವ ಹಾಗೆ ಕೆಲವೆಡೆ ನೆಲದ ಟೈಲ್ಸ್ ಸಹ ಒಡೆದು ಹೋಗಿರುತ್ತವೆ. ಇನ್ನು ಡೆಸ್ಕ್ ಮತ್ತು ಗೋಡೆಗಳಂತೂ ನಾನಾ ರೀತಿಯ ಬರಹಗಳಿಂದ ತುಂಬಿ ಹೋಗಿರುತ್ತವೆ. ಇವುಗಳನ್ನೆಲ್ಲಾ ಮಾಡುವುದು ಅಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳೇ ಎನ್ನುವುದು ದುರಂತ. ❞

ಪ್ರತೀ ವರ್ಷ ಶಾಲೆ ಆರಂಭವಾಗುವ ಹೊತ್ತಿನಲ್ಲಿ ಮಕ್ಕಳನ್ನು ಸೆಳೆಯಲು ಸರ್ಕಾರಿ ಮತ್ತು ಖಾಸಗಿ ಶಾಲೆಗಳೆರಡೂ ಇನ್ನಿಲ್ಲದಂತೆ ಕಸರತ್ತನ್ನು ಮಾಡುತ್ತವೆ. ಸಂವಿಧಾನವೇ ನೀಡಿರುವ ಶಿಕ್ಷಣದ ಹಕ್ಕನ್ನು ಪ್ರತಿ ಮಗುವೂ ಪಡೆಯಬೇಕೆನ್ನುವುದು ಇದರ ಮೂಲ ಉದ್ದೇಶ.

ಶಾಲೆಗಳಲ್ಲಿ ಶಿಕ್ಷಣದ ರೀತಿ ನೀತಿಗಳಲ್ಲೂ ಇಂದು ಸಾಕಷ್ಟು ಬದಲಾವಣೆಗಳಾಗಿವೆ. ಮಕ್ಕಳಿಗೆ ಶಿಕ್ಷಣ ಶಿಕ್ಷೆಯಾಗದೆ ನಲಿವಿನ ಅನುಭವವನ್ನು ನೀಡಬೇಕೆಂಬ ಉದ್ದೇಶದಿಂದ ನಲಿ–ಕಲಿ ಯೋಜನೆಯು ಜಾರಿಯಾಯಿತು. ಮಕ್ಕಳು ಬಳಪ, ಪೆನ್ನು, ಪುಸ್ತಕಗಳನ್ನು ಹಿಡಿದು ಕಲಿಯುವ ಹಳೆಯ ಯಾಂತ್ರಿಕ ವಿಧಾನಕ್ಕೆ ವಿದಾಯ ಹೇಳಿದ್ದಾಗಿದೆ. ಚಟುವಟಿಕೆಗಳ ಮೂಲಕ ಕಲಿಸುವ ಹೊಸ ವಿಧಾನ ಮಕ್ಕಳಲ್ಲಿ ಮಾತ್ರವಲ್ಲದೆ ಶಿಕ್ಷಕರಿಗೂ ಹೊಸ ಹುರುಪು ಮೂಡಿಸಿದೆ. ಶಾಲೆಗಳು ಮಕ್ಕಳ ಚಟುವಟಿಕೆಗಳಿಂದ ಮಾಡಿದ ವಸ್ತುಗಳಿಂದಲೇ ಅಲಂಕೃತವಾಗಿ ಆಕರ್ಷಕ ತಾಣವಾಗಿವೆ.

ಸರ್ಕಾರಿ ಶಾಲೆಗಳಂತೂ ಮಕ್ಕಳಿಗೆ ಸಮವಸ್ತ್ರ, ಶೂ ಸಾಕ್ಸ್‌ಗಳಿಂದ ಹಿಡಿದು, ಪಠ್ಯ ಪುಸ್ತಕ ಬರೆಯುವ ಪುಸ್ತಕ ಮಾತ್ರವಲ್ಲದೆ, ಶಾಲೆ ತಲುಪಲು ಸೈಕಲ್ಲುಗಳನ್ನೂ ನೀಡಿ ಉಚಿತ ಶಿಕ್ಷಣವನ್ನು ನೀಡುತ್ತಿವೆ. ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಸಮರ್ಥ ಶಿಕ್ಷಕರ ನೇಮಕವಾಗಿರುವ ಸರ್ಕಾರೀ ಶಾಲೆಗಳೆಡೆಗೆ ಪೋಷಕರ ನಿರ್ಲಕ್ಷ್ಯ ಹೆಚ್ಚುತ್ತಲೇ ಇರುವುದು ನಿಜಕ್ಕೂ ಆತಂಕಕಾರಿ. ಇಂಗ್ಲಿಷ್ ವ್ಯಾಮೋಹ ಇಂದು ಕಡೆಗಣಿಸಲಾಗದಂತೆ ಬೃಹದಾಕಾರವಾಗಿ ಬೆಳೆದು ನಿಂತಿರುವುದರಿಂದ ಸರ್ಕಾರ ಇಂಗ್ಲಿಷ್ ಮಾಧ್ಯಮದಲ್ಲಿಯೂ ಶಾಲೆಗಳನ್ನು ಪ್ರಾರಂಭ ಮಾಡಿದೆ. ಆ ದಿಸೆಯಲ್ಲಿ ಸರ್ಕಾರದ್ದು ಇನ್ನೂ ಅಂಬೆಗಾಲಿಡುವುದರಿಂದ, ಫಲಿತಾಂಶವನ್ನು ಕಾದು ನೋಡಬೇಕಿದೆ. ಕನ್ನಡದಲ್ಲಿಯೇ ಪ್ರಾಥಮಿಕ ಶಿಕ್ಷಣ ಕೊಡಬೇಕೆನ್ನುವುದು ಕೂಗು ದೀರ್ಘವಾದ ಚರ್ಚೆ ಬೇಡುವ ವಿಷಯವಾದ್ದರಿಂದ ಅದನ್ನು ಇಲ್ಲಿ ಚರ್ಚೆಗೆ ತರುವುದು ಬೇಡ.

ಇರಲ್ಲಿ, ಶಾಲೆಗಳ, ಅವುಗಳ ರೂಪುರೇಷೆಗಳ ಬಗ್ಗೆ, ಅವುಗಳ ಕಾರ್ಯವೈಖರಿಯ ಬಗ್ಗೆ ಒಂದಷ್ಟು ಮಾತುಗಳು. ಆದರೆ ನಮ್ಮೆಲ್ಲರ ಮಕ್ಕಳೂ ಕಲಿಯುತ್ತಿರುವ ಶಿಕ್ಷಣ ನಿಜಕ್ಕೂ ಮಕ್ಕಳನ್ನು ಸಮಾಜಕ್ಕೆ ಕೊಡುಗೆಯಾಗಿ ಕೊಡುತ್ತಿದೆಯೇ? ಶಿಕ್ಷಣ ಇಂದು ಮಕ್ಕಳನ್ನು ಬುದ್ಧಿವಂತರನ್ನಾಗಿ ಮಾಡುತ್ತಿದೆ, ಸಮರ್ಥರನ್ನಾಗಿ ಮಾಡುತ್ತಿದೆ, ಸಬಲರನ್ನಾಗಿ ಮಾಡುತ್ತಿದೆ. ಸರ್ಕಾರಿ ಆಗಿರಬಹುದು ಖಾಸಗಿಯಾಗಿರಬಹುದು, ಎಲ್ಲ ಶಾಲೆಗಳೂ ಮಕ್ಕಳನ್ನು ಉದ್ಯೋಗಿಗಳನ್ನಾಗಿ, ಉದ್ಯಮಿಗಳನ್ನಾಗಿ, ಕಲಾಕಾರರನ್ನಾಗಿ, ಕ್ರೀಡಾಪಟುಗಳನ್ನಾಗಿ, ಕಾರ್ಮಿಕರನ್ನಾಗಿ, ಸೈನಿಕರನ್ನಾಗಿ, ವಕೀಲರನ್ನಾಗಿ, ಮಂತ್ರಿಗಳನ್ನಾಗಿ ಮಾಡುತ್ತಿವೆ. ಹಾಗಾದರೆ ಶಿಕ್ಷಣವೆಂದರೆ ಇಷ್ಟೇನೇ?

ಆರ್ಥಿಕವಾಗಿ ಸಬಲರಾದರೆ, ಮನೆ ಕಟ್ಟಿದರೆ, ಹಣ ಗಳಿಸಿದರೆ, ಶ್ರೀಮಂತ ಜೀವನ ನಡೆಸಿದರೆ ಸಾಕೇ? ನಮ್ಮ ಮಕ್ಕಳು ಇಷ್ಟನ್ನೇ ಕಲಿತರೆ ಸಾಕೇ? ಹಾಗಾದರೆ ಶಾಲೆಗಳು ಏನನ್ನು ಕಲಿಸಲು ಮರೆಯುತ್ತಿವೆ? ಯಾವುದರಲ್ಲಿ ಸೋಲುತ್ತಿವೆ? ಅಥವಾ ಯಾವುದನ್ನು ಅವಗಣನೆ ಮಾಡುತ್ತಿವೆ ಎಂದು ತಿಳಿಯಲು ನಾವು ವಾಸಿಸುತ್ತಿರುವ ನಮ್ಮ ಸಮಾಜವನ್ನೊಮ್ಮೆ ನೋಡಬೇಕು.

ಸಾಮಾಜಿಕ ಬದ್ಧತೆ–ಜವಾಬ್ದಾರಿ, ನೈತಿಕತೆ, ದಯಾಗುಣ, ಸಹಾಯಹಸ್ತ ನೀಡಿಕೆ, ನಿಸ್ವಾರ್ಥತೆ, ಸ್ನೇಹಪರತೆ, ಸೌಜನ್ಯಪೂರ್ಣ ನಡವಳಿಕೆ..... ಇಂತಹ ಮಾನವ ಸಹಜ ಗುಣಗಳನ್ನು ನಮ್ಮ ಮಕ್ಕಳು ಇಂದು ರೂಢಿಸಿಕೊಳ್ಳುವಲ್ಲಿ ಹಿಂದುಳಿಯುತ್ತಿವೆ. ಮನೆಯಲ್ಲಿ ಹೇಳಿಕೊಡುವ ಸಂಸ್ಕಾರ, ಬುದ್ಧಿಯನ್ನು ಮಕ್ಕಳು ರೂಢಿ ಮಾಡಿಕೊಳ್ಳುತ್ತವಾದರೂ ಒಮ್ಮೆ ಶಾಲೆಗೆ ಸೇರಿದ ಮೇಲೆ ಅವುಗಳಿಗೆ ಟೀಚರ್ ಹೇಳುವ ಮಾತೇ ವೇದವಾಕ್ಯವಾಗುತ್ತದೆ. ಇದು ಎಲ್ಲರ ಅನುಭವಕ್ಕೆ ಬಂದೇ ಬಂದಿರುತ್ತದೆ. ಒಮ್ಮೆ ಶಾಲೆ ಸೇರಿದ ತಕ್ಷಣ ಮಕ್ಕಳು ಕಲಿಕೆಯಲ್ಲಿಯೇ ವ್ಯಸ್ತರಾಗಿಬಿಡುತ್ತಾರೆ. ನಾಗಾಲೋಟದಲ್ಲಿ ಸಾಗುತ್ತಿರುವ ಈ ಸ್ಪರ್ಧಾಯುಗದಲ್ಲಿ ಗೆಲ್ಲುವುದೇ ಮುಖ್ಯವಾಗಿರುವಾಗ, ಶಾಲೆ ಕೂಡಾ ಮಕ್ಕಳನ್ನು ರೇಸ್ ಗೆ ತಯಾರು ಮಾಡಲು ನಿಂತು ಬಿಡುತ್ತದೆ. ಅಲ್ಲಿಗೆ ಮಕ್ಕಳ ಪ್ರಗತಿ ಯಾಗುತ್ತದೆಯೇ ಹೊರತು, ಸರ್ವತೋಮುಖವಾದ 'ವಿಕಾಸ'ವಾಗುವುದಿಲ್ಲ.

ಈಗಿನ ಮಕ್ಕಳನ್ನು ನೋಡುತ್ತಿದ್ದರೆ ಅವರಲ್ಲಿ ತಾಳ್ಮೆ ಕಡಿಮೆಯಾಗಿದೆ. ಗುರು ಹಿರಿಯರಲ್ಲಿ ಭಕ್ತಿ ತೋರಿಸುವ ಪರಿಪಾಠ ಕಡಿಮೆಯಾಗುತ್ತಿದೆ. ತಮ್ಮ ಶಿಕ್ಷಕರನ್ನು ಅವಳು–ಇವಳು ಎನ್ನುತ್ತಾ ಏಕವಚನದಲ್ಲಿ ಸಂಬೋಧಿಸುವುದು ಶಾಲೆಗಳಲ್ಲಿ ಸಾಮಾನ್ಯವೆನಿಸಿದೆ. ಅಪ್ಪ ಅಮ್ಮನ ಮಾತುಗಳನ್ನು ಕಿವಿಗೂ ಹಾಕಿಕೊಳ್ಳದೆ ಉಡಾಫೆ ಮಾಡುತ್ತಾರೆ. ಮನಸ್ಸಿಗೆ ಬಂದದ್ದನ್ನೆಲ್ಲಾ ಕೊಳ್ಳುವ ಅಭ್ಯಾಸ, ಕಂಡಿದ್ದನ್ನೆಲ್ಲಾ ತಿನ್ನುವ ಚಟ. ಶಿಸ್ತು ಅವರ ಜೀವನದಲ್ಲಿ ಇಲ್ಲವಾಗಿದೆ. ತಮ್ಮ ವಸ್ತುಗಳನ್ನು ಚೊಕ್ಕಟವಾಗಿ ಜೋಡಿಸಿ ಇಟ್ಟುಕೊಳ್ಳುವ ಶಿಸ್ತು ಮಾಯವಾಗಿದೆ. ಸಾಮಾಜಿಕ ಜವಾಬ್ದಾರಿ ಶೂನ್ಯವಾಗಿದೆ. ನೀವು ಹಲವು ಶಾಲಾ ಕಾಲೇಜುಗಳ ಆವರಣ, ಶಾಲಾ ಕೊಠಡಿಗಳು, ಶೌಚಾಲಯಗಳನ್ನು ನೋಡಿರಬೇಕು. ನಲ್ಲಿಯಲ್ಲಿ ನೀರು ವ್ಯರ್ಥವಾಗಿ ಸುರಿಯುತ್ತಿದ್ದರೂ ನಿಲ್ಲಿಸುವ ಗೋಜಿಗೂ ಹೋಗುವುದಿಲ್ಲ. ಅಲ್ಲಿನ ಶೌಚಾಲಯಗಳು ಗಬ್ಬೆದ್ದು ನಾರುತ್ತಿರುತ್ತವೆ. ಕೊಠಡಿಗಳಲ್ಲಿ ಕಸ ಎಲ್ಲೆಂದರಲ್ಲಿ ಹರಡಿರುತ್ತದೆ. ಫ್ಯಾನ್‌ಗಳ ರೆಕ್ಕೆಗಳು ಸೊಟ್ಟಗಾಗಿದ್ದರೆ, ಸ್ವಿಚ್ಚುಗಳು ಒಡೆದ ಸ್ಥಿತಿಯಲ್ಲಿರುತ್ತವೆ. ಲೈಟುಗಳೂ ಒಡೆದು ಹೋಗಿರುತ್ತವೆ. ನಾನೇ ನೋಡಿರುವ ಹಾಗೆ ಕೆಲವೆಡೆ ನೆಲದ ಟೈಲ್ಸ್ ಸಹ ಒಡೆದು ಹೋಗಿರುತ್ತವೆ. ಇನ್ನು ಡೆಸ್ಕ್ ಮತ್ತು ಗೋಡೆಗಳಂತೂ ನಾನಾ ರೀತಿಯ ಬರಹಗಳಿಂದ ತುಂಬಿ ಹೋಗಿರುತ್ತವೆ. ಇವುಗಳನ್ನೆಲ್ಲಾ ಮಾಡುವುದು ಅಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳೇ ಎನ್ನುವುದು ದುರಂತ.

ಇವುಗಳ ಮುಂದುವರೆದ ಭಾಗವನ್ನೇ ನಾವು ಆಚೆ ಸಮಾಜದಲ್ಲಿ ನೋಡುವುದು. ಸಾರ್ವಜನಿಕ ಶೌಚಾಲಯಗಳು, ವಿರೂಪಗೊಂಡ ಬಸ್ಸು ರೈಲುಗಳ ಸೀಟುಗಳು, ಫ್ಯಾನ್‌ಗಳು, ಲೈಟುಗಳು, ಎಲ್ಲೆಂದರಲ್ಲಿ ಕಸ ಬಿಸಾಡುವ ಪ್ರವೃತ್ತಿ, ನೀರಿನ ಮೂಲಗಳನ್ನು ಮಲಿನ ಮಾಡುವುದು, ಕಷ್ಟದಲ್ಲಿರುವವರಿಗೆ ಸಹಾಯ ಹಸ್ತ ಚಾಚದಿರುವುದು (ಈಗಂತೂ ಮೊಬೈಲ್‌ನಲ್ಲಿ ಚಿತ್ರಿಸಿಕೊಳ್ಳುವ ಚಟ ಪ್ರಾರಂಭವಾಗಿ ಜೀವಹಾನಿಯನ್ನು ತಡೆಯಲು ಸಾಧ್ಯವಿದ್ದರೂ ಯಾರೂ ಅದರ ಗೋಜಿಗೇ ಹೋಗುವುದಿಲ್ಲ) ಸಾರ್ವಜನಿಕ ಆಸ್ತಿಗಳಿಗೆ ಹಾನಿ ಮಾಡುವುದು, ಜೋರಾಗಿ ಕಿರುಚಾಡುತ್ತಾ ಫೋನಿನಲ್ಲಿ ಮಾತನಾಡುವುದು ಸಂಗೀತ ಕೇಳುವುದು, ಅಸಹಾಯಕರಿಗೆ ವೃದ್ಧರಿಗೆ ಬಸ್ಸು–ರೈಲುಗಳಲ್ಲಿ ಸೀಟು ಬಿಟ್ಟುಕೊಡದಿರುವುದು; ಹೇಳುತ್ತಾ ಹೋದರೆ ಪಟ್ಟಿ ಬೆಳೆಯುತ್ತದೆ.

ಎಲ್ಲವನ್ನೂ ಶಾಲೆಯೇ ಕಲಿಸಬೇಕೇ ಎಂದು ನೀವು ಕೇಳಿದಿರಾದರೆ, ನನ್ನ ಉತ್ತರ ಹೌದು ಎಂದೇ. ಏಕೆಂದರೆ ಮಕ್ಕಳು ತಮ್ಮ ಜೀವಿತಾವಧಿಯ ಅರ್ಧ ಭಾಗದಷ್ಟು ಸಮಯವನ್ನು ಶಾಲೆಯಲ್ಲಿ ಕಳೆಯುತ್ತವೆ ಮತ್ತು ಮುಖ್ಯವಾಗಿ ತನ್ನ ಗುರುವನ್ನು ಆದರ್ಶಪ್ರಾಯ ಎಂದು ಪರಿಗಣಿಸುತ್ತವೆ. ಆತ/ಆಕೆಯ ಬುದ್ಧಿವಾದವನ್ನು ಶಿರಸಾ ವಹಿಸಿ ಪಾಲಿಸುತ್ತದೆ. ಮನೆಯಲ್ಲಿ ಯಾರೂ ಮಕ್ಕಳಿಗೆ ಕೇಡುಬುದ್ಧಿಯನ್ನು ಪ್ರಜ್ಞಾಪೂರ್ವಕವಾಗಿ ಹೇಳಿಕೊಡುವುದಿಲ್ಲ. ತಮ್ಮ ಮಕ್ಕಳು ಸರ್ವಗುಣ ಸಂಪನ್ನರಾಗಲಿ ಎಂದೇ ಬಯಸಿ ಬೆಳೆಸುತ್ತಾರೆ, ತಿದ್ದುತ್ತಾರೆ. ಮನೆಯ ನಂತರ ಶಾಲೆಯಲ್ಲಿ ಮಾತ್ರ ಮಗು ಆ ಸುರಕ್ಷಿತ ಆಪ್ತ ಭಾವವನ್ನು ಅನುಭವಿಸುವುದು. ತನ್ನ ಗುರುವನ್ನು ತಾಯಿ ತಂದೆಯ ನಂತರದ ಸ್ಥಾನದಲ್ಲಿ ಇಟ್ಟು ಪ್ರೀತಿಸುವುದು ಗೌರವಿಸುವುದು. ಅಂತಹ ಗುರುಗಳ ಬಾಯಿಂದ ಬಂದಿದ್ದೆಲ್ಲವೂ ಅದಕ್ಕೆ ವೇದವಾಕ್ಯವೇ. ಶಂಖದಿಂದ ಬಂದರೆ ಮಾತ್ರ ತೀರ್ಥವಲ್ಲವೇ?

ಆದರೆ ಇಂದು ಎಷ್ಟು ಶಾಲೆಗಳು ಮಕ್ಕಳ ಬೆಳವಣಿಗೆಯಲ್ಲಿ ಈ ಅಂಶಗಳೂ ಅತ್ಯವಶ್ಯಕ ಎಂದು ಅರಿತು ಅದರಂತೆ ಮಕ್ಕಳನ್ನು ತಯಾರು ಮಾಡುತ್ತಿವೆ? ಹಿಂದೆ ನೈತಿಕ ಶಿಕ್ಷಣ ಎಂಬ ಒಂದು ಅವಧಿ ಇರುತ್ತಿತ್ತು. ಆ ಅವಧಿಯಲ್ಲಿ ಮಕ್ಕಳಿಗೆ ಇಂತಹ ಉತ್ತಮ ಅಂಶಗಳಿರುವ ಕತೆಗಳನ್ನು ದೃಷ್ಟಾಂತಗಳನ್ನು ಹೇಳಿ ಮಕ್ಕಳಿಗೆ ಅರಿವು ಮೂಡಿಸಲಾಗುತ್ತಿತ್ತು. ಕ್ರಮೇಣ ನೈತಿಕ ಶಿಕ್ಷಣದ ಅವಧಿಯನ್ನು ಪೂರ್ತಿಯಾಗದ ಸಿಲಬಸ್‌ನ ಟೀಚರ್‌ಗೆ ಕೊಡಲಾಯಿತು, ಈಗಂತೂ ಶಾಲೆಯ ವೇಳಾಪಟ್ಟಿಯಲ್ಲಿ ಆ ಅವಧಿಯೇ ಇಲ್ಲ! ಬರೀ ಸ್ಪೆಶಲ್ ಕ್ಲಾಸುಗಳು, ಎಕ್ಸ್‌ಟ್ರಾ ಕ್ಲಾಸುಗಳು. ಅಹಿತಕರ ಸ್ಪರ್ಧೆ. ಮಕ್ಕಳಿಗೆ ಸಮಾಜವೂ ತಮ್ಮ ಮನೆಯೇ, ಅದನ್ನೂ ಸ್ವಚ್ಛವಾಗಿ ಇಟ್ಟುಕೊಳ್ಳಬೇಕು, ಅಲ್ಲಿ ವಾಸಿಸುವವರೂ ತಮ್ಮಂತೆಯೇ ಮಾನವರು...... ನಾವು ಅವರ ಸುಖ ದುಃಖಗಳಿಗೂ ಸ್ಪಂದಿಸಬೇಕು ಎಂಬ ಭಾವ ಬೆಳೆಯುವಂತಹ ವಾತಾವರಣವನ್ನು ನಾವು ಮನೆಯಲ್ಲೂ ಸೃಷ್ಟಿಸುತ್ತಿಲ್ಲ, ಶಾಲೆಯಲ್ಲಿ ಸಮಯವಿಲ್ಲ!

ಶಿಕ್ಷಣ ಎಂದಾಕ್ಷಣ ನಮಗೆ ಜಪಾನಿನ ಶಾಲೆಗಳ ಉದಾಹರಣೆ ಬಹಳ ಇಷ್ಟವಾಗುತ್ತದೆ. ನಾವೆಲ್ಲ ಬಹಳಷ್ಟು ಕೇಳಿದ್ದೇವೆ, ಓದಿದ್ದೇವೆ. ಈಗಂತೂ ಸಾಮಾಜಿಕ ಜಾಲತಾಣದಲ್ಲಿ ಆ ಕುರಿತ ವಿಡಿಯೋಗಳನ್ನು ಸಾಕಷ್ಟು ನೋಡಿರುತ್ತೇವೆ. ಅಲ್ಲಿ ಶಿಕ್ಷಣ ಮಾತ್ರವಲ್ಲದೆ, ಮಕ್ಕಳು ಸಾಮಾಜಿಕ ಜೀವನದಲ್ಲಿ ಹೇಗೆ ವರ್ತಿಸಬೇಕೆಂಬ ತಿಳುವಳಿಕೆಯನ್ನೂ ಶಾಲಾ ಪಠ್ಯಕ್ರಮದಲ್ಲಿ ಅಳವಡಿಸಿ ಕಡ್ಡಾಯ ಮಾಡಿರುತ್ತಾರೆ. ಅಲ್ಲಿ ವಿಡಿಯೋ ಒಂದರಲ್ಲಿ ಮಕ್ಕಳನ್ನು ಕೇಳಿ, "ಛೇ! ಇಲ್ಲಿ ಹಾಗೆಲ್ಲ ಇಲ್ಲವೇ ಇಲ್ಲ ಸುಯಿಲ್ಲ... ಸುಯಿಲ್ಲ!" ಎಂದು ಹಳಹಳಿಸುತ್ತೇವೆಯೇ ಹೊರತು, ಟೀಚರ್ ಮಕ್ಕಳಿಗೆ ಹೋಂ ವರ್ಕ್ ಅಥವಾ ಪ್ರಾಜೆಕ್ಟ್ ವರ್ಕ್ ಕೊಡುತ್ತಿಲ್ಲ ಎನ್ನುವುದಕ್ಕೆ ಹೋಗಿ ಜಗಳವಾಡುವ ಹಾಗೆ, ಶಾಲೆಗೆ ಹೋಗಿ ಇಂತಹ ಯಾವುದನ್ನೂ ಡಿಮ್ಯಾಂಡ್ ಮಾಡುವುದಿಲ್ಲ.

ನಮ್ಮ ಮಕ್ಕಳು ಬರೀ ಹಣ ಗಳಿಸುವ ಯಂತ್ರಗಳಾಗದೆ, ಮಾನವರಾಗಿ ಹುಟ್ಟಿದ್ದಕ್ಕೆ ಮಾನವರಂತೆಯೇ ಬದುಕುವ ಅವಕಾಶವನ್ನು ಕಲ್ಪಿಸಿಕೊಡುವ ವಾತಾವರಣವನ್ನು ಸೃಷ್ಟಿಸುವ ಹೊಣೆಗಾರಿಕೆ ನಮ್ಮದು. ಶಾಲೆಗಳು ಅಂತಹ ತಾಣಗಳಾಗಲಿ ಎಂಬುದು ನಮ್ಮ ಬೇಡಿಕೆಯಾಗಬೇಕು.

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ಗೆ ಶ್ರೀಶಂಕರ ಭಾರತೀ ಸ್ವಾಮೀಜಿ ಭೇಟಿ...



ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ದಟ್ಟಗಳ್ಳಿ ನೂತನ ಕ್ಯಾಂಪಸ್‌ಗೆ ಕೆ.ಆರ್. ನಗರ ತಾಲೂಕಿನ ಎಡತೊರೆ ಮಠದ ಶ್ರೀ ಶಂಕರ ಭಾರತೀ ಸ್ವಾಮೀಜಿ ಗುರುವಾರ ಭೇಟಿ ನೀಡಿ ದೀಪ ಬೆಳಗಿಸಿ, ಆಶೀರ್ವಚನ ನೀಡಿದರು. 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ. ಗಣಪತಿ, ನೈಪುಣ್ಯ ಶಾಲೆ ಸಂಸ್ಥಾಪಕ ರಘು ಆರ್ ಕೌಟಿಲ್ಯ ಅವರ ಪುತ್ರ ಕೌಟಿಲ್ಯ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು ಯೋಗನರಸಿಂಹಸ್ವಾಮಿ ದೇವಸ್ಥಾನದಲ್ಲಿ ಕುಂಭಾಭಿಷೇಕ

ಮೈಸೂರು, ಮೇ 23(ಎಂಕೆ)– ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದಲ್ಲಿ ಮೇ 25 ರಿಂದ 27ರವರೆಗೆ ಕುಂಭಾಭಿಷೇಕ ಮಹೋತ್ಸವ ನಡೆಯಲಿದೆ. ಡಾ.ಭಾಷ್ಯಂ ಸ್ವಾಮೀಜಿ ನೇತೃತ್ವದಲ್ಲಿ ಮೇ 25ರಂದು ಬೆಳಗ್ಗೆ 9ಕ್ಕೆ ಅಭಿಷೇಕ ಮತ್ತು ಲಕ್ಷಾರ್ಚನೆ, ಮಹಿಳಾ ಸಂಘದವರಿಂದ ಲಲಿತಾ ಸಹಸ್ರನಾಮ ಪಾರಾಯಣ, ಮೇ 26 ರಂದು ಬೆಳಗ್ಗೆ 9ಕ್ಕೆ ಸಹಸ್ರ ಕಲಶಾಭಿಷೇಕ ಮತ್ತು ಮಹಿಳಾ ಸಂಘದವರಿಂದ ಸೌಂದರ್ಯಲಹರಿ ಪಾರಾಯಣ, ಮೇ 27ರಂದು ಕುಂಭಾಭಿಷೇಕ, ಅಖಂಡ ಮಹಾ ಸುದರ್ಶನ ಹೋಮ ಮತ್ತು ಮಹಿಳಾ ಸಂಘದವರಿಂದ ವಿಷ್ಣು ಸಹಸ್ರನಾಮ ಪಾರಾಯಣ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ, ನಂತರ ಅನ್ನಸಂತರ್ಪಣೆ ನಡೆಯಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ತ.ನಾಡಿಗೆ ಮತ್ತೆ 2.5 ಟಿಎಂಸಿ ನೀರು ಬಿಡುಗಡೆ ಆದೇಶ

ಕಾವೇರಿ ಕ್ರಿಯಾ ಸಮಿತಿ ಹೋರಾಟ ಇನ್ನಷ್ಟು ತೀವ್ರ



ಮಂಜೇಗೌಡ

ಮೈಸೂರು, ಮೇ 23(ಜಿಎ)–ಜಲಾಶಯದಲ್ಲಿ ಸಾಕಷ್ಟು ನೀರು ಇಲ್ಲದಿದ್ದರೂ ಕಾವೇರಿ ನ್ಯಾಯ ಮಂಡಳಿ ತಮಿಳುನಾಡಿಗೆ 2.5 ಟಿಎಂಸಿ ನೀರು ಬಿಡುವಂತೆ ಮತ್ತೆ ಆದೇಶಿಸಿದ್ದು, ಕಾವೇರಿ ಕುರಿತಂತೆ ರಾಜ್ಯದ ಹಿತಾಸಕ್ತಿ ರಕ್ಷಿಸಲೆಂದು ಕಾವೇರಿ ಕ್ರಿಯಾ ಸಮಿತಿ ನಡೆಸುತ್ತಿರುವ ಹೋರಾಟ ಇನ್ನಷ್ಟು ತೀವ್ರಗೊಳ್ಳಲಿದೆ ಎಂದು ಸಮಿತಿ ಗೌರವಾಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿಗಾಗಿ ಕಳೆದ ನೂರು ದಿನಗಳಿಂದ ಹೋರಾಟ ನಡೆಸುತ್ತಿದ್ದರೂ ಚುನಾವಣೆ ಕಾರಣ ಈ ಭಾಗದ ಸಚಿವರು, ಶಾಸಕರು ಗಮನ ನೀಡುತ್ತಿಲ್ಲ. ಇನ್ನು, ಈ ಭಾಗದಿಂದ ಆಯ್ಕೆಯಾಗಿರುವ ಸಂಸದರು ಕಾವೇರಿ ವಿಷಯ ಕುರಿತಂತೆ ಕೇಂದ್ರದ ಮೇಲೆ ಒತ್ತಡ ಹೇರಲಿಲ್ಲ. ಆದ್ದರಿಂದ ಹೊಸದಾಗಿ ಆಯ್ಕೆಯಾಗುವವರು ಗಮನ ನೀಡಬೇಕೆಂದು ಆಗ್ರಹಿಸಿದರು.

ಈ ವೇಳೆ ಸಮಿತಿ ಅಧ್ಯಕ್ಷ ಜಯಪ್ರಕಾಶ್(ಜೆಪಿ) ಮಾತನಾಡಿ, ಲೋಕಸಭಾ ಚುನಾವಣೆ ಫಲಿತಾಂಶದ ನಂತರ ಕಾವೇರಿ ನ್ಯಾಯಮಂಡಳಿ ವಿರುದ್ಧ ಉಗ್ರ ಹೋರಾಟ ನಡೆಸಲು ತೀರ್ಮಾನಿಸಲಾಗುವುದು ಮುಂದಿನ ಕಾವೇರಿ ಹೋರಾಟವನ್ನು ಜನಾಂದೋಲ ಹೋರಾಟವನ್ನಾಗಿಸಿ ಸರ್ವರೂ ಪಾಲ್ಗೊಳ್ಳುವಂತೆ ಮಾಡುವ ಉದ್ದೇಶ ಹೊಂದಿದೆ ಎಂದು ಹೇಳಿದರು.

ರಾಜ್ಯದ ರಾಜಕಾರಣಿಗಳಲ್ಲಿ ಕಾವೇರಿ ನೀರಿನ ವಿಚಾರದಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆಯನ್ನು ತಮಿಳುನಾಡು ಚೆನ್ನಾಗಿ ಬಳಸಿಕೊಳ್ಳುತ್ತಿದೆ. ಕಾವೇರಿ ವಿಚಾರದಲ್ಲಿ ತಾರ್ಕಿಕ ಅಂತ್ಯ ಕಾಣುವವರೆಗೂ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಪ್ರತಿಭಟನೆ ಮುಂದುವರೆಯಲ್ಲಿದ್ದು, ಮೇ 25ರಂದು ಕಾವೇರಿ ತೀರ್ಪಿನ ವಿರುದ್ಧ ದೊಡ್ಡ ಗಡಿಯಾರದ ಬಳಿ ಎಂದಿನಂತೆ ಪ್ರತಿಭಟನೆ ಮತ್ತು ಸಹಿ ಸಂಗ್ರಹ ನಡೆಸಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಮೂಗೂರು ನಂಜುಂಡಸ್ವಾಮಿ, ಮೆಲ್ಲಹಳ್ಳಿ ಮಹದೇವಸ್ವಾಮಿ, ಎಂ.ಜೆ.ಸುರೇಶ್‌ಗೌಡ ಇದ್ದರು.

ವಿದ್ಯೆ ವ್ಯಕ್ತಿತ್ವದ ಜೊತೆಗೆ ಬದುಕನ್ನು ಸುಂದರಗೊಳಿಸುತ್ತೆ

ಪ್ರತಿಭಾ ಪುರಸ್ಕಾರದಲ್ಲಿ ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಭಿಮತ

ಮೈಸೂರು, ಮೇ 23(ಜಿಎ)– ವಿದ್ಯೆ ಎಂಬುದು ವ್ಯಕ್ತಿತ್ವದ ಜೊತೆಗೆ ಭವಿಷ್ಯದಲ್ಲಿ ಗೌರವಯುತವಾದ ಸುಂದರ ಬದುಕನ್ನು ರೂಪಿಸಿ ಕೊಡುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಸಂಪೂರ್ಣ ವಾಗಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಕಿವಿಮಾತು ಹೇಳಿದರು.

ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಶ್ರೀ ಶಿರಡಿ ಸಾಯಿ ಬಾಬ ಮಂದಿರದಲ್ಲಿ ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗದ ವತಿಯಿಂದ ಪ್ರಸ್ತುತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿರುವ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಲಿಕೆಯಲ್ಲಿ ಆಸಕ್ತಿ ಇದ್ದಲ್ಲಿ ಇದಾವುದೂ ಕಷ್ಟವಲ್ಲ ಎಂದರು.

ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರಾಥಮಿಕ ಶಿಕ್ಷಣದಿಂದ ಪ್ರಾರಂಭಿಸಿ ಉನ್ನತ ಶಿಕ್ಷಣದ ತನಕವೂ ಪ್ರತಿ ಹಂತದಲ್ಲೂ ಕಲಿಕೆಯಲ್ಲಿ ಹೆಚ್ಚೆಚ್ಚು ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಾ ಹೋಗಬೇಕು. ಅದನ್ನು ಹಾಗೆಯೇ ಉಳಿಸಿಕೊಂಡಲ್ಲಿ ಆಗ ಸಾಧನೆ ಎ ಸಾಧಕರ ಕೈವಶವಾಗುತ್ತದೆ ಎಂದರು.

ವಿದ್ಯಾರ್ಥಿ ದಿಸೆಯಲ್ಲಿ ಕಲಿಕೆಯಲ್ಲಿ ಆಸಕ್ತಿ ಕಳೆದು ಕೊಳ್ಳುತ್ತಾರೋ ಅವರು ಜೀವನದಲ್ಲಿ ಏನನ್ನೂ ಸಾಧಿಸಲಾಗದು. ಹಾಗೆಯೇ ಭವಿಷ್ಯದಲ್ಲಿ ಎಲ್ಲದರಲ್ಲೂ ವಿಫಲರಾಗುತ್ತಾರೆ. ಇದಾಗಬಾರದೆಂದರೆ ವಿದ್ಯಾರ್ಥಿಗಳು ಕಲಿಯುವಿಕೆಯಲ್ಲಿ ಎಂದಿಗೂ ಆಸಕ್ತಿ ಕಳೆದು ಕೊಳ್ಳಬಾರದು. ಸ್ಟೂಡೆಂಟ್ ಲೈಫ್ ಈಸ್ ಗೋಲ್ಡನ್ ಲೈಫ್ ಎನ್ನುತ್ತಾರೆ. ಈ ಮಾತು ಅಕ್ಷರಶಃ ಸತ್ಯ. ಇದು ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನದಲ್ಲೂ ಸಾರ್ಥಕವಾಗಿ ಅವರ ಜೀವನ ಚಿನ್ನದಂತಾಗಬೇಕಾದರೆ ಶೈಕ್ಷಣಿಕ ಸಾಧನೆಯೇ ಮಾನದಂಡವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿರುವ ನಗರದ ವಿವಿಧ ಶಾಲೆಗಳ ಆಯ್ದ ವಿದ್ಯಾರ್ಥಿಗಳಾದ ರಶ್ಮಿ, ನಾಗಮ್ಮ, ಎಚ್.ಎಸ್.ದೀಪಶ್ರೀ, ಹೇಮಾ, ಡಿ.ಲೋಹಿತ್, ನಮ್ರತಾ, ಪಲ್ಲವಿ, ಜಿ.ಅಕ್ಷಯ, ಬಿ.ಎಸ್.ಹರ್ಷಿತಾ, ವಿ.ವರುಣ, ಎಂ.ಜಯಂತಿ, ಎಂ.ಸೂರ್ಯ, ವಿ.ಸುರೇಶ, ಎಂ.ವಿಜಯ, ಕೆ.ಸಂಧ್ಯಾ, ಪಿ.ವಿ.ಮಹದೇವ, ಟಿ.ದೀಪಿಕಾ, ಎಂ.ರಾಧಿಕಾ, ಎಂ.ಪದ್ಮಾವತಿ, ಯಶಸ್ವಿನಿ ಅರಸ್ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ, ಗೌರವಿಸಿದರು. ಕಾರ್ಯಕ್ರಮದಲ್ಲಿ ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ, ಯುವ ಉದ್ಯಮಿ ಮೇಘನಾ ವೆಂಕಟೇಶ್, ವಿಶ್ರಾಂತ ಶಿಕ್ಷಕ ಗೋಪಾಲ ಸ್ವಾಮಿ, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ, ಮೈಸೂರು ಕನ್ನಡ ವೇದಿಕೆಯ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಕ್ತಕ ಕವಿ ಎಂ.ಮುತ್ತು ಸ್ವಾಮಿ, ಚಿತ್ರಕಲಾ ಶಿಕ್ಷಕ ಮನೋಹರ್, ಲೇಖಕ ವಿ.ನಾರಾಯಣರಾವ್, ಸಿರಿಗನ್ನಡ ವೇದಿಕೆಯ ಕವಯತ್ರಿ ನಾಗರತ್ನ, ಜಾದು ಕಲಾವಿದ ಗುರುಸ್ವಾಮಿ, ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾಧ್ಯಕ್ಷ ಹೆಚ್.ವಿ.ಮುರಳೀಧರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ರಾಮಾನುಜಾ ರಸ್ತೆಯಲ್ಲಿರುವ ಶ್ರೀ ಶಿರಡಿ ಸಾಯಿ ಬಾಬ ಮಂದಿರದಲ್ಲಿ ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗದ ವತಿಯಿಂದ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿರುವ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

> ಕಾಲಕ್ಕೆ ತುಂಬಾ ಮಹತ್ವವಿದೆ. ಕಣ್ಣಿಗೆ ಕಾಣದಂತೆ ತನ್ನ ಪಾಡಿಗೆ ತಾನು ನಿಲ್ಲದೆ ಓಡುವ ಕಾಲಕ್ಕೆ ಬೆಲೆ ಕಟ್ಟಲಾಗದು. ಕಳೆದು ಹೋದ ಕಾಲ ಎಂದೂ ಮರಳದು. ಆದ್ದರಿಂದ ವಿದ್ಯಾರ್ಥಿಗಳು ಕಾಲದ ಮಹತ್ವವನ್ನೂ ಅರ್ಥ ಮಾಡಿಕೊಂಡು ಸಿಗುವ ಕಾಲವನ್ನು ಅದು ಕಳೆದು ಹೋಗುವ ಮುನ್ನ ಕಿಂಚಿತ್ತೂ ವ್ಯರ್ಥ ಮಾಡದೆ ಕಲಿಕೆಗಾಗಿಯೇ ಅದನ್ನು ಮೀಸಲಿಟ್ಟು ಸದ್ಬಳಕೆ ಮಾಡಿಕೊಂಡು ಭವಿಷ್ಯದಲ್ಲಿ ದೇಶದ ಸತ್ಪ್ರಜೆಗಳಾಗಬೇಕು. ಅಷ್ಟೇ ಅಲ್ಲ, ತನ್ಮೂಲಕ ಹುಟ್ಟಿದ ಊರಿಗೆ, ಜನ್ಮ ಕೊಟ್ಟ ತಂದೆ–ತಾಯಿಗಳಿಗೆ, ಕಲಿತ ಶಾಲೆಗೆ, ಕಲಿಸಿದ ಗುರುವರ್ಯರಿಗೆ ಕೀರ್ತಿ ತರುವಂತಾಗಿ ಪ್ರತಿಯೊಬ್ಬರಿಗೂ ಮಾದರಿಯಾಗಬೇಕು. –ಬನ್ನೂರು ರಾಜು

ಜೈ ಭೀಮ್ ಜನಸ್ಪಂದನ ವೇದಿಕೆ ವತಿಯಿಂದ ಬುದ್ಧ ಜಯಂತಿ ಆಚರಣೆ



ಮೈಸೂರು, ಮೇ 23– ಮೈಸೂರಿನ ಗಾಂಧಿನಗರದಲ್ಲಿರುವ ಉರಿಲಿಂಗಿ ಪೆದ್ದೇಶ್ವರ ಮಠದಲ್ಲಿ ಜೈ ಭೀಮ್ ಜನಸ್ಪಂದನ ವೇದಿಕೆ ವತಿಯಿಂದ ಬುದ್ಧ ಜಯಂತಿಯನ್ನು ಆಚರಿಸಲಾಯಿತು.

ಬುದ್ಧನ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಸಿಂಡಿಕೇಟ್ ಸದಸ್ಯ ಶರತ್ ಮಾತನಾಡಿ, ಭಗವಾನ್ ಗೌತಮ ಬುದ್ಧರು ಜಗತ್ತಿನ ಜನರಲ್ಲಿ ಆಳವಾಗಿ ಬೇರೂರಿದ್ದ ವೇದಗಳೇ ಪ್ರಮಾಣವೆಂಬ ನಂಬಿಕೆಯನ್ನು, ಅವುಗಳ ಪ್ರಾಬಲ್ಯವನ್ನು ತರ್ಕಬದ್ಧ ವಿಚಾರದಿಂದ ಸತ್ಯಾನ್ವೇಷಣೆ ಸಾಧ್ಯವೆಂಬುದನ್ನು ಸಾಧಿಸಿ ತೋರಿದ ಮಹಾನ್ ಚೇತನ ತನ್ನ ತತ್ವ–ಸಿದ್ಧಾಂತಗಳ ಮೂಲಕ ಇಡೀ ಏಷ್ಯಾಖಂಡಕ್ಕೆ ಜ್ಞಾನದ ಬೆಳಕು ಹೊತ್ತಿಸಿದ ಮಹಾನ್ ಜ್ಯೋತಿ ಎಂದರು.

ಜೈ ಭೀಮ್ ಜನಸ್ಪಂದನ ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜ್ ಮಾತನಾಡಿ, ಬುದ್ಧನ ವಿಚಾರವು ಭಾವನಾತ್ಮಕ, ವೈಚಾರಿಕ, ಆಧ್ಯಾತ್ಮಿಕ, ವೈಜ್ಞಾನಿಕ ವಿಚಾರಗಳಾಗಿದ್ದು, ಸಮಾಜಮುಖಿ ಚಿಂತನೆ ಅವರ ಮೂಲ ಉದ್ದೇಶವಾಗಿತ್ತು. 'ಬಹುಜನ ಹಿತಾಯ ಬಹುಜನ ಸುಖಾಯ ಲೋಕಾನು ಕಂಪಾಯ' ಎಂಬುದು ಬುದ್ಧ ಅವರ ಹಿತನುಡಿ ಎಂದರು.

ಇದೇ ಸಂದರ್ಭದಲ್ಲಿ ಪಾಲಿಕೆ ಮಾಜಿ ಸದಸ್ಯ ಸಿ.ಜಿ.ಶಿವಕುಮಾರ್ ಮಾತನಾಡಿ, ಬುದ್ಧನ ಅಹಿಂಸಾ ಮಾರ್ಗವು ವಿಶ್ವ ಪ್ರಸಿದ್ಧಿಯಾಗಿದ್ದು, ಅದನ್ನು ಈಗ ಹೆಚ್ಚು ಹೆಚ್ಚು ಪಾಲಿಸುವುದು ಅವಶ್ಯವೆಂದರು.

ಚಿಂತಕರಾದ ಸಿದ್ದರಾಜು ಮಾತನಾಡಿ, ಮಹಾರಾಜರಾದವರು ಸಾಮಾನ್ಯ ಮನುಷ್ಯನ ಗುಣಮಟ್ಟಕ್ಕಿಳಿಯವುದು ಸುಲಭವಲ್ಲ. ಆದರೆ ಬುದ್ಧನು ಅದನ್ನು ಸಾಧಿಸಿದರು. ಈಗ ಅವರು ಲೋಕಮಾನ್ಯರು ಎಂದರು.

ಮೈಸೂರು ಮಹಾನಗರಪಾಲಿಕೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಉದಯ್‌ಕುಮಾರ್, ಚಿಂತಕ ಸಿದ್ದರಾಜು, ಕರ್ನಾಟಕ ಭೀಮ ಸೇನೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ.ಮಂಜುನಾಥ್, ಮುಖಂಡ ಕಿರಣ್‌ಕುಮಾರ್, ದಲಿತ ಸಂಘರ್ಷ ಸಮಿತಿಯ ರಮೇಶ್, ನಾಗಣ್ಣ, ಸ್ವಾಮಿ, ರಮೇಶ್, ಕುಮಾರ್ ಮತ್ತಿತರರಿದ್ದರು.

ಒಂದೇ ಕುಟುಂಬದ ನಾಲ್ವರ ಸಾವು ಪ್ರಕರಣ; ಉನ್ನತ ಮಟ್ಟದ ತನಿಖೆಗೆ ಮಾಜಿ ಮೇಯರ್ ಸಂದೇಶಸ್ವಾಮಿ ಆಗ್ರಹ

ಮೈಸೂರು, ಮೇ 23(ಜಿಎ)–ಮೈಸೂರಿನ ಯರಗನಹಳ್ಳಿಯಲ್ಲಿ ಅನಿಲ ಸೋರಿಕೆಯಿಂದ ಒಂದೇ ಕುಟುಂಬದ ನಾಲ್ವರ ಸಂಶಯಾಸ್ಪದ ಸಾವಿನ ದುರಂತ ಕುರಿತು ಉನ್ನತ ತನಿಖೆ ಆಗಬೇಕು ಎಂದು ಬಿಜೆಪಿ ಮುಖಂಡರೂ ಆದ ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಗ್ರಹಿಸಿದ್ದಾರೆ.

ನಗರದ ಯರಗನಹಳ್ಳಿಯ ಡಾ.ರಾಜ್‌ಕುಮಾರ್ ರಸ್ತೆಯಲ್ಲಿರುವ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಅಲ್ಲಿನ ನೆರೆಹೊರೆಯವರಿಂದ ಮಾಹಿತಿ ಪಡೆದು ಮಾತನಾಡಿದ ಅವರು, ಮೃತ ಕುಮಾರಸ್ವಾಮಿ ತಮ್ಮ ಪತ್ನಿ ಮಂಜುಳ, ಪುತ್ರಿಯರಾದ ಅರ್ಚನಾ ಹಾಗೂ ಸ್ವಾತಿ ಅವರೊಂದಿಗೆ ವಾರದ ಹಿಂದೆ ಚಿಕ್ಕಮಗಳೂರಿಗೆ ಮದುವೆಗೆ ತೆರಳಿ ಭಾನುವಾರವಷ್ಟೆ ಮೈಸೂರಿಗೆ ಆಗಮಿಸಿದ್ದರು. ಆದರೆ ಮಾರನೇ ದಿನವೇ ದುರಂತ ಸಂಭವಿಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಇದು ಆಕಸ್ಮಿಕ ಘಟನೆಯೇ ಕುಟುಂಬದವರೇ ಮಾಡಿಕೊಂಡಿರುವ ಆತ್ಮಹತ್ಯೆಯೇ ಅಥವಾ ಪೂರ್ವ ನಿಯೋಜಿತ ಹತ್ಯೆಯೇ ಎಂಬುದಾಗಿ ಅನುಮಾನಗಳು ಸಾರ್ವಜನಿಕ ವಲಯದಲ್ಲಿ ಚರ್ಚಿತವಾಗುತ್ತಿದೆ. ಅಲ್ಲದೆ ಇಲ್ಲಿನ ನಿವಾಸಿಗಳು ಇಂತಹ ಘಟನೆಯಿಂದ ಆತಂಕಕ್ಕೆ ಒಳಗಾಗಿದ್ದಾರೆ. ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿ ನಡೆದಿರುವ ಈ ಘಟನೆ ಕುರಿತು ಉನ್ನತ ಮಟ್ಟದ ತನಿಖೆ ಮಾಡಿ ಸತ್ಯ ಸಂಗತಿಯನ್ನು ಬಯಲಿಗೆ ತರಬೇಕೆಂದು ಒತ್ತಾಯಿಸಿದ್ದಾರೆ.

ಅಡುಗೆ ಅನಿಲ ಸೋರಿಕೆಯಿಂದ ಇಂತಹ ದುರ್ಘಟನೆ ಸಂಭವಿಸಿದೆ ಎಂದು ಹೇಳಲಾಗುತ್ತಿದೆ. ಮತ್ತೊಂದೆಡೆ ಮೃತರು ಬಳಸುತ್ತಿದ್ದ ಇಸ್ತ್ರಿ ಪೆಟ್ಟಿಗೆಗೆ ಅಳವಡಿಸಿದ್ದ ಅನಿಲ ಸೋರಿ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ ಎನ್ನಲಾಗುತ್ತಿದೆ. ಯಾವುದೇ ಅನಿಲವಾಗಲಿ ಅದರ ವಾಸನೆಯು ಘಾಟು ಮೂಗಿಗೆ ಬಡಿದು ನಿದ್ರಿಸುವವರನ್ನು ಎಚ್ಚರಿಸಬಲ್ಲದು. ಮಲಗಿದ್ದ ನಾಲ್ವರಲ್ಲಿ ಯಾರಿಗೂ ಜೋರಾದ ಕೆಮ್ಮು ಬಾರದೆ, ಯಾರೊಬ್ಬರು ಅಲ್ಲಿಂದ ಹೊರ ಬರಲು ಪ್ರಯತ್ನಿಸದೆ, ಮಲಗಿದ್ದಲ್ಲೇ ನಾಲ್ವರು ಸತ್ತಿರುವುದು ಶೋಚನೀಯ ಸಂಗತಿ.

ಒತ್ತು ಗೋಡೆಯ ಮನೆಗಳಿರುವ ಈ ಪ್ರದೇಶದಲ್ಲಿ ಮಾರನೇ ದಿನ ಅಕ್ಕಪಕ್ಕದವರಿಗೆ ಅನಿಲ ಸೋರಿಕೆ ವಾಸನೆ ಬಾರದಿರುವುದು ಅನುಮಾನಕ್ಕೂ ಕಾರಣವಾಗಿದೆ. ಮೂರು ದಿನದ ನಂತರ ಕುಮಾರಸ್ವಾಮಿ ಅವರ ಸ್ನೇಹಿತರೊಬ್ಬರು ಮೊಬೈಲ್ ಕರೆ ಮಾಡಿದರೂ ಸ್ವೀಕರಿಸದ ಕಾರಣ ಮನೆಗೆ ಬಂದು ನೋಡಿದಾಗ ಘಟನೆ ಬೆಳಕಿಗೆ ಬಂದಿದೆ. ಅದ್ದರಿಂದ ಈ ಘಟನೆಯು ಹಲವು ಶಂಕೆಗಳನ್ನು ಮೂಡಿಸಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಹಿಂದುಳಿದ ಹಾಗೂ ಬಡತನದ ಕುಟುಂಬಗಳಲ್ಲಿ ಇಡೀ ಕುಟುಂಬವೇ ಸಾವಿಗೆ ಗುರಿಯಾಗುತ್ತಿರುವುದು ಮತ್ತು ಪ್ರಾಯದ ಹೆಣ್ಣು ಮಕ್ಕಳ ಹತ್ಯೆಯಾಗುತ್ತಿರುವುದು ಆತಂಕ ಮೂಡಿಸಿದೆ. ಸರ್ಕಾರ ಇಂತಹ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಿ ಆರೋಪಿಗಳ ಪತ್ತೆಗೆ ಕ್ರಮ ವಹಿಸಿ, ಜನರು ನೆಮ್ಮದಿಯಾಗಿ ಜೀವನ ಮಾಡುವಂತಹ ವಾತಾವರಣ ನಿರ್ಮಾಣ ಮಾಡ ಬೇಕೆಂದು ಒತ್ತಾಯಿಸಿದ್ದಾರೆ. ಈ ವೇಳೆ ಎನ್. ಆರ್ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಸ್ಮಾರ್ಟ್ ಮಂಜು, ಪ್ರಧಾನ ಕಾರ್ಯದರ್ಶಿ ಮಂಜುಶ್ರೀ ಗೌಡ, ಮಾಜಿ ಅಧ್ಯಕ್ಷ ಸು.ಮುರಳಿ, ಮುಖಂಡ ರಮೇಶ್ ಮತ್ತಿತರರಿದ್ದರು.



ಯರಗನಹಳ್ಳಿಯ ಡಾ.ರಾಜಕುಮಾರ್ ರಸ್ತೆಯಲ್ಲಿರುವ ಘಟನಾ ಸ್ಥಳಕ್ಕೆ ಸಂದೇಶಸ್ವಾಮಿ ಭೇಟಿ ನೀಡಿ, ನೆರೆಹೊರೆಯವರಿಂದ ಮಾಹಿತಿ ಪಡೆದುಕೊಂಡರು.

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು: 2024ನೇ ಸಾಲಿಗೆ ಮೈಸೂರಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾದ ಅಭ್ಯರ್ಥಿಗಳ ಸಿಟಿಎಸ್ ವಿಭಾಗದಲ್ಲಿ ಮೆರಿಟ್ ಕಮ್ ರಿಸರ್ವೇಶನ್ ಆಧಾರಿತ ಪ್ರವೇಶಗಳಿಗಾಗಿ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಫಿಟ್ಟರ್ ವೃತ್ತಿಗೆ 20 ಸ್ಥಾನಗಳಿದ್ದು, ಟರ್ನರ್ ವೃತ್ತಿಗೆ 20, ಕೋಪ (COPA) ವೃತ್ತಿಗೆ 24 ಹಾಗೂ ಸ್ಟೆನೋಗ್ರಫಿ ವೃತ್ತಿಗೆ 24 ಸ್ಥಾನಗಳಿದ್ದು, ಎನ್‌ಸಿವಿಟಿ ಸಂಯೋಜನೆಯನ್ನು ಹೊಂದಿದೆ. ಸಾಮಾನ್ಯ ಅಭ್ಯರ್ಥಿಗಳಿಗೆ ಕನಿಷ್ಠ ವಯೋಮಿತಿ 14 ವರ್ಷ. ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ ಮೂಲಕ www.cite.Karnataka.gov.in ವೆಬ್‌ಸೈಟ್‌ನಲ್ಲಿ ಜೂ.3ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಪ್ರಾಚಾರ್ಯರನ್ನು ಭೇಟಿ ಮಾಡಬಹುದು ಅಥವಾ ದೂ. ಸಂ: 0821– 2950951 ಅಥವಾ 9980289219 ಅನ್ನು ಸಂಪರ್ಕಿಸಬಹುದು

ಬೇಸಿಗೆ ರಜೆಯಲ್ಲೂ ಮಕ್ಕಳಿಗೆ ಆಟ–ಪಾಠ, ಬಿಸಿಯೂಟ

ಸಬ್ಬನಕುಪ್ಪೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕ ಪುರುಷೋತ್ತಮ



ಮೈಸೂರು, ಮೇ 23– ಶ್ರೀರಂಗಪಟ್ಟಣ ಸಮೀಪದ ಸಬ್ಬನಕುಪ್ಪೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಪುರುಷೋತ್ತಮ ಅವರು ಬೇಸಿಗೆ ರಜೆಯಲ್ಲೂ ಶಾಲೆಗೆ ಬಂದು ಪ್ರತಿನಿತ್ಯವೂ ಮಕ್ಕಳಿಗೆ ಆಟ–ಪಾಠ ಹಾಗೂ ಬಿಸಿಯೂಟದೊಂದಿಗೆ ಓದಿನ ಜೊತೆಗೆ ಮನೋವಿಕಾಸದಲ್ಲಿ ರಜಾ ದಿನಗಳಲ್ಲಿ ತೊಡಗಿರುವುದು ಇತರರಿಗೆ ಮಾದರಿಯಾಗಿದೆ.

ಸರ್ಕಾರಿ ಶಾಲೆ ಎಂದರೆ ಶಿಕ್ಷಕರ ಕೊರತೆ, ಮೂಲ ಸೌಕರ್ಯಗಳ ಕೊರತೆ, ದೂರಿನ ಸುರಿಮಳೆ, ಸಮಯ ಪರಿಪಾಲನೆ ಇಲ್ಲದೇ ಮನಸ್ಸೋಇಚ್ಛೆ ನಡೆಯುವ ಈ ಕಾಲದಲ್ಲಿ ಇವರೊಬ್ಬ ಮಾದರಿ ಮುಖ್ಯಶಿಕ್ಷಕ. ಬೇಸಿಗೆ ರಜೆಯಲ್ಲೂ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಾ, ಆಟದಲ್ಲಿ ಪಾಲ್ಗೊಳ್ಳುತ್ತಾ ಬಿಸಿಯೂಟದೊಂದಿಗೆ ಮಕ್ಕಳೊಂದಿಗೆ ಬೆರೆತಿದ್ದಾರೆ.

ಶಿಕ್ಷಕನೇ ರಕ್ಷಕ, ಶಿಕ್ಷಕನೇ ಸಾಧಕ, ಶಿಕ್ಷಕನೇ ಸಮಾಜ ಸುಧಾರಕ ನಾಣ್ನುಡಿಯಂತೆ ರಜೆ ಇದ್ದರೂ ಮನೆಯಲ್ಲಿ ಕೂರದೇ ಪ್ರತಿದಿನ ಶಾಲೆಗೆ ಬಂದು ಬೆಳಿಗ್ಗೆ 9ರಿಂದ 1 ಗಂಟೆವರೆಗೆ ಪಾಠ ಮಾಡುತ್ತಾ, ಆಟ ಆಡಿಸುವುದು ಜೊತೆಗೆ ಹಾಡು, ಕಥೆ ಹೇಳುವುದು, ಧ್ಯಾನ, ಪ್ರಾಣಾಯಾಮ ಕಲಿಸಿಕೊಡುವುದು, ಚಿತ್ರ ಬಿಡಿಸುವುದು, ಮಕ್ಕಳಿಗೆ ಮನರಂಜನೆ ನೀಡುವುದು ಮಾಡುತ್ತಾ ಮಾದರಿ ಎನಿಸಿದ್ದಾರೆ.

40 ಮಕ್ಕಳಿರುವ ಈ ಶಾಲೆಯಲ್ಲಿ 32 ಮಕ್ಕಳು ಬರಪೀಡಿತ ಪ್ರದೇಶ ಎಂದು ಘೋಷಿಸಿರುವ ತಾಲ್ಲೂಕಿನಲ್ಲಿ ಮಧ್ಯಾಹ್ನದ ಬಿಸಿಯೂಟದೊಂದಿಗೆ ಪಾಠವನ್ನು ಕಲಿಯುತ್ತಿರುವುದು ಸಂತಸದ ಸಂಗತಿಯಾಗಿದೆ. ಶಾಲೆಯಲ್ಲಿ ಪಾಠ ಹೇಳುವ ಜೊತೆಗೆ ಕವನ, ಹಾಡು, ಸಂಗೀತ, ನಾಟಕದ ಬಗ್ಗೆ ಅಭಿನಯ ಹಾಗೂ ಪರಿಚಯದೊಂದಿಗೆ ಮಕ್ಕಳಿಗೆ ಅರಿವು ಮೂಡುವ ಕೆಲಸವನ್ನು ದಿನನಿತ್ಯವೂ ನಡೆಸುತ್ತಿದ್ದಾರೆ. ಜೊತೆ ಜೊತೆಗೆ ಭಕ್ತಿಭಂಡಾರಿ ಜಗಜ್ಯೋತಿ ಬಸವೇಶ್ವರ ಜಯಂತಿ, ಶಂಕರ ರಾಮಾನುಜಾಚಾರ್ಯ ಜಯಂತಿ, ಶ್ರೀರಾಮಜಯಂತಿ, ಬುದ್ಧಪೂರ್ಣಿಮೆ, ಡಾ.ಅಂಬೇಡ್ಕರ್ ಜಯಂತಿ, ವಾಲ್ಮೀಕಿ ಜಯಂತಿ, ಸಂತ ಸೇವಾಲಾಲ್ ಜಯಂತಿ, ಸ್ವಾಮಿ ವಿವೇಕಾನಂದ ಜಯಂತಿ, ಡಾ.ರಾಜ್ ಕುಮಾರ್ ಜಯಂತಿ ಹಾಗೂ ಸಮಾಜ ಸುಧಾರಕರ ಬಗ್ಗೆ ಪಾಠವನ್ನು ಹೇಳುತ್ತಾ ಆಟ, ಪಾಠಗಳೊಂದಿಗೆ ಬೇಸಿಗೆ ರಜೆ ಯಲ್ಲೂ 40 ದಿನಗಳ ಕಾಲ ಶಾಲೆಗೆ ಬರುತ್ತಿರುವುದು ಹರ್ಷದಾಯಕ ಸಂಗತಿಯಾದರೂ ಬೇರೆ ಶಿಕ್ಷಕರು ರಜೆ ದಿನಗಳಲ್ಲಿ ಬಿಡುವಿನ ವೇಳೆಯಲ್ಲಿ ಮಕ್ಕಳಿಗೆ ಆಟ, ಪಾಠಗಳಲ್ಲಿ ತೊಡಗಿಸಿಕೊಂಡು ಉತ್ತೇಜನ ನೀಡುವುದು ಶಿಕ್ಷಕರ ಕರ್ತವ್ಯವಲ್ಲವೇ?

ಶ್ರೀ ಲಕ್ಷ್ಮೀನರಸಿಂಹ ಜಯಂತಿ; ವಿಶೇಷ ಸ್ವಾತಿ ಪೂಜೆ



ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ಶ್ರೀ ಲಕ್ಷ್ಮೀನರಸಿಂಹ ಜಯಂತ್ಯುತ್ಸವ ಹಾಗೂ ವಿಶೇಷ ಸ್ವಾತಿ ನಕ್ಷತ್ರದ ಪೂಜೆಯನ್ನು ದೇವಸ್ಥಾನದ ಮುಖ್ಯಸ್ಥರಾದ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ನೇತೃತ್ವದಲ್ಲಿ ಆಯೋಜಿಸಲಾಗಿತ್ತು. ನೂರಾರು ಭಕ್ತರು ದೇವರ ದರ್ಶನ ಪಡೆದು ಪುನೀತರಾದರು. ಮಳೆಯ ಸಿಂಚನದ ನಡುವೆಯೂ ತೀರುವೀದಿ ಉತ್ಸವ ವಿಜೃಂಭಣೆಯಿಂದ ನೆರವೇರಿತು.

ಪರಿಷತ್‌ಗೆ ಪುಷ್ಪಾ ಅಮರನಾಥ್ ಆಯ್ಕೆ ಮಾಡುವಂತೆ ಆಗ್ರಹ

ಮೈಸೂರು, ಮೇ 23(ಜಿಎ)–ವಿಧಾನ ಪರಿಷತ್‌ಗೆ ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆಯೂ ಆಗಿರುವ ಡಾ.ಪುಷ್ಪಾ ಅಮರನಾಥ್ ಆಯ್ಕೆ ಮಾಡುವಂತೆ ಹುಣಸೂರು ನಗರ ಕಾಂಗ್ರೆಸ್ ಸಮಿತಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪರಿಗೆ ಮನವಿ ಸಲ್ಲಿಸಿದೆ.

ಮೈಸೂರಿನ ವಿಜಯನಗರದಲ್ಲಿರುವ ಡಾ.ಮಹದೇವಪ್ಪ ನಿವಾಸಕ್ಕೆ ಆಗಮಿಸಿದ ನೂರಾರು ಕಾರ್ಯಕರ್ತರು ಕಳೆದ ಬಾರಿ ಪುಷ್ಪಾ ಅವರಿಗೆ ಎಂಎಲ್‌ಎ, ಎಂಪಿ ಟಿಕೆಟ್ ಕೈ ತಪ್ಪಿದೆ. ಈ ಬಾರಿ ಎಂಎಲ್‌ಸಿ ಮಾಡಿದ್ರೆ ಹಳೆ ಮೈಸೂರು ಭಾಗದಲ್ಲಿ ಮಹಿಳೆಯರಿಗೆ ಶಕ್ತಿ ಬರಲಿದೆ ಎಂದು ವಿವಿಧ ಘೋಷಣೆಗಳನ್ನು ಕೂಗಿ ಆಗ್ರಹಿಸಿದರು.

ಪುಷ್ಪಾ ಅಮರನಾಥ್ ಅವರು ಪಕ್ಷ ಸಂಘಟನೆಯಲ್ಲಿ ಸಾಕಷ್ಟು ಶ್ರಮಿಸಿದ್ದು, ಒಮ್ಮೆ ಜಿಲ್ಲಾ ಪಂಚಾಯಿತ್ ಅಧ್ಯಕ್ಷರಾಗಿ ಜನಪ್ರಿಯ ಕೆಲಸಗಳನ್ನು ಮಾಡಿದ್ದಾರೆ. ಹಾಗೇ ರಾಜ್ಯ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆಯಾಗಿ ಮಹಿಳೆಯರ ಹಕ್ಕು, ದುಃಖ–ದುಮ್ಮಾನಗಳಿಗೆ ಸ್ಪಂದಿಸಿದ್ದಾರೆ. ಪಕ್ಷದ ನಿಷ್ಠಾವಂತ ಕಾರ್ಯಕರ್ತೆಯಾಗಿ ಸೇವೆ ಸಲ್ಲಿಸಿರುವ ಇಂತಹವರಿಗೆ ಪಕ್ಷ ಅವಕಾಶ ಕಲ್ಪಿಸಿ ಕೊಟ್ಟರೆ ಸಾಮಾಜಿಕ ನ್ಯಾಯ ದೊರೆದಂತಾಗುತ್ತದೆ ಎಂದು ಮನವಿ ಮಾಡಿದರು.




ಪರಿಷತ್‌ಗೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಆಯ್ಕೆ ಮಾಡುವಂತೆ ಆಗ್ರಹಿಸಿ ಹುಣಸೂರು ನಗರ ಕಾಂಗ್ರೆಸ್ ಸಮಿತಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪರಿಗೆ ಮನವಿ ಸಲ್ಲಿಸಿದರು.

ಪರಿಷತ್‌ಗೆ ಮೈ.ವಿ.ರವಿಶಂಕರ್ ಆಯ್ಕೆಗೆ ಮನವಿ



ಮೈಸೂರು, ಮೇ 23–ವಿಧಾನ ಸಭೆಯಿಂದ ವಿಧಾನ ಪರಿಷತ್ತಿಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿ ವತಿಯಿಂದ ಮೈಸೂರು ಭಾಗದ ಹಿರಿಯ ವಿಭಾಗೀಯ ಪ್ರಭಾರಿ ಮೈ.ವಿ. ರವಿಶಂಕರ್ ಅವರಿಗೆ ಅವಕಾಶ ನೀಡಬೇಕೆಂದು ಬಿಜೆಪಿ ನಾಯಕರನ್ನು ಪಕ್ಷದ ಕಾರ್ಯಕರ್ತರು ಮನವಿ ಮಾಡಿದ್ದಾರೆ.

ರವಿಶಂಕರ್, ಬಿಜೆಪಿ ಕಟ್ಟಾಳು. ಪ್ರಾಮಾಣಿಕವಾಗಿ ಪಕ್ಷದ ಕೆಲಸವನ್ನು ಮಾಡಿದ್ದು, ಎರಡು ಬಾರಿ ದಕ್ಷಿಣ ಪದವೀಧರ ಚುನಾವಣೆಯಲ್ಲಿ ಸ್ಪರ್ಧಿಸಿ ಕೆಲವೇ ಮತದಿಂದ ಸೋತಿದ್ದರು. ಅಲ್ಲದೆ ವಿಧಾನಸಭಾ, ಲೋಕಸಭಾ, ನಗರಪಾಲಿಕೆ ಚುನಾವಣೆಯಲ್ಲಿ ಪಕ್ಷದ ಪರವಾಗಿ ದುಡಿದಿದ್ದಾರೆ. ನೂರಾರು ಕಾರ್ಯಕರ್ತರ ಬೆಳವಣಿಗೆಗೆ ಕಾರಣರಾಗಿದ್ದಾರೆ. ಇವರ ಸೇವೆ ಗುರುತಿಸಿ ಸಂಘಟನೆಯ ದೃಷ್ಟಿಯಿಂದ ವಿಧಾನ ಪರಿಷತ್ತಿಗೆ ಇವರನ್ನು ಪರಿಗಣಿಸಬೇಕೆಂದು ನಗರ ಬಿಜೆಪಿ ಉಪಾಧ್ಯಕ್ಷ ಕೆ.ಸೋಮಶೇಖರ ರಾಜು, ಪಾಲಿಕೆ ಮಾಜಿ ಸದಸ್ಯರಾದ ಎಂ.ಚಿಕ್ಕವೆಂಕಟು, ಎಲ್.ಜಗದೀಶ್, ನಗರ ಯುವ ಮೋರ್ಚಾ ಮಾಜಿ ಅಧ್ಯಕ್ಷ ಎಂ.ಜೆ.ಕಿರಣ್ ಗೌಡ, ರಾಜ್ಯ ಪರಿಷತ್ತಿನ ಮಾಜಿ ಸದಸ್ಯ ನಂಜಪ್ಪ, ಚಾಮರಾಜ ಆಶ್ರಯ ಸಮಿತಿಯ ಮಾಜಿ ಸದಸ್ಯ ಎಂ. ಮಹೇಶ್ ಮನವಿ ಮಾಡಿದ್ದಾರೆ.



ಮೈಸೂರಿನ ಶಾರದಾ ವಿಲಾಸ ಪದವಿಪೂರ್ವ ಕಾಲೇಜಿನಲ್ಲಿ ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧಿಸಿರುವ ಪಕ್ಷೇತರ ಅಭ್ಯರ್ಥಿ ಪದವಿ ಪೂರ್ವ ಶಿಕ್ಷಣ ಇಲಾಖೆ ನಿವೃತ್ತ ಉಪನಿರ್ದೇಶಕ ನಾಗಮಲ್ಲೇಶ್ ಮತ ಯಾಚಿಸಿದರು. ನಿವೃತ್ತ ಪ್ರಾಂಶುಪಾಲ ಮಂಜುನಾಥ್, ಮಲ್ಲಿಕಾರ್ಜುನ, ಜೈಪಾಲ, ಕಾಲೇಜಿನ ಪ್ರಾಂಶುಪಾಲ ಸಿ.ಕೆ.ಅಶೋಕ ಕುಮಾರ್, ಡಾ.ಡಿ.ಸಿ.ಉಮೇಶ್, ಸಯ್ಯದ್ ಮುಷೀರ್ ಅಹಮ್ಮದ್ ಉಪಸ್ಥಿತರಿದ್ದರು.

ವೈದ್ಯರಿಗಿಂತ ಶುಶ್ರೂಷಕರ ಸೇವೆ ಶ್ಲಾಘನೀಯ

ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಪ್ರಶಂಸೆ

ಮೈಸೂರು, ಮೇ 23(ಎಂಕೆ)– ಶುಶ್ರೂಷಕರ ಸೇವೆಯು ವೈದ್ಯರ ಸೇವೆಗಿಂತ ಅವಶ್ಯವಾದುದು. ವೈದ್ಯರು ರೋಗಿಗಳನ್ನು ಪರೀಕ್ಷಿಸಿ ಚಿಕಿತ್ಸೆಗೆ ಸಲಹೆ ನೀಡಿದರೆ, ಶುಶ್ರೂಷಕಿಯರು ರೋಗಿಯ ಮನಗೆದ್ದು, ಗುಣಪಡಿಸುವ ಜವಾಬ್ದಾರಿ ಹೊಂದಿರುತ್ತಾರೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಹೇಳಿದರು.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಪಂಚದಲ್ಲಿಯೇ ಶುಶ್ರೂಷಕರ ಕೊರತೆ ಹೆಚ್ಚಾಗುತ್ತಿದ್ದು, ವಿದ್ಯಾರ್ಥಿಗಳು ಶುಶ್ರೂಷಕ ಶಿಕ್ಷಣವನ್ನು ಪಡೆದುಕೊಳ್ಳಬೇಕೆಂದು. ಭಾರತೀಯ ವೈದ್ಯರು ಮತ್ತು ಶುಶ್ರೂಷಕರಲ್ಲಿರುವ ಮಾನವೀಯತೆ ಗುಣದಿಂದಾಗಿಯೇ ಪ್ರಪಂಚದಲ್ಲಿ ಭಾರತೀಯ ಶುಶ್ರೂಷಕರಿಗೆ ಬೇಡಿಕೆ ಇದೆ ಎಂದರು.

ವಿಶ್ರಾಂತ ಕುಲಪತಿ ಡಾ.ಎನ್.ಎಸ್. ರಾಮೇಗೌಡ ಮಾತನಾಡಿ, ಸುಯೋಗ್ ನರ್ಸಿಂಗ್ ಕಾಲೇಜಿನಲ್ಲಿ ಪಠ್ಯ–ಪುಸ್ತಕಗಳ ಜೊತೆಗೆ ಶುಶ್ರೂಷಕರಿಗೆ ಅಗತ್ಯವಿರುವ ಮೌಲ್ಯಗಳ ಬಗ್ಗೆಯೂ ತರಬೇತಿ ನೀಡಲಾಗುತ್ತಿದೆ. ಆದ್ದರಿಂದ ಇಲ್ಲಿಂದ ಹೊರಬರುವ ಶುಶ್ರೂಷಕರು ಇನ್ನಿತರ ಕಾಲೇಜುಗಳಿಗಿಂತ ವಿಭಿನ್ನವಾಗಿರುತ್ತಾರೆ ಎಂದು ಅಭಿಪ್ರಾಯಪಟ್ಟರು.

ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಶುಶ್ರೂಷಕರ ಸೇವೆಗೆ ಭಾರತದಲ್ಲಿ ಸಿಗುತ್ತಿರುವ ವೇತನ ಮತ್ತು ಆರ್ಥಿಕ ಸೌಲಭ್ಯ ನಗಣ್ಯ. ಹಾಗಾಗಿ ಆಸ್ಪತ್ರೆಗಳ ಮಾಲೀಕರು ಶುಶ್ರೂಷಕರ ಸಂಬಳ ಹೆಚ್ಚಿಸುವ ಬಗ್ಗೆ ಆಲೋಚಿಸಬೇಕು. ಇಂದಿನ ಆಧುನಿಕ ಶುಶ್ರೂಷಕರಿಗೆ ಫ್ಲಾರೆನ್ಸ್ ನೈಟಿಂಗೇಲ್ ಅವರ ಸೇವೆ ಅನುಕರಣೀಯವಾಗಿದೆ. ಅವರು ಹುಟ್ಟಿದ ದಿನವನ್ನು ಅಂತಾರಾಷ್ಟ್ರೀಯ ಶುಶ್ರೂಷಕರ ದಿನವನ್ನಾಗಿ ಆಚರಿಸಲಾಗುತ್ತಿದೆ ಎಂದರು.

ಬಳಿಕ ಸುಯೋಗ್‌ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕ ಅಭಿಷೇಕ್‌ಗೆ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ನೀಡಲಾಯಿತು. ಸುಯೋಗ್ ಸಮೂಹ ಶಿಕ್ಷಣ ಸಂಸ್ಥೆಗಳ ಸಿಇಓ ಡಾ.ರಾಜೇಂದ್ರಪ್ರಸಾದ್, ಉಪಾಧ್ಯಕ್ಷೆ ಡಾ.ಸೀಮಾ ಯೋಗಣ್ಣ, ಪ್ರಾಂಶುಪಾಲೆ ನಾಗಮಣಿ, ಜನರಲ್ ಮ್ಯಾನೇಜರ್ ಪಿ.ಜೆ.ಅರುಣ್‌ಕುಮಾರ್ ಮತ್ತಿತರರಿದ್ದರು.



ಮೈಸೂರಿನ ಸುಯೋಗ್ ಆಸ್ಪತ್ರೆಯಲ್ಲಿ ಅಂತಾರಾಷ್ಟ್ರೀಯ ಶುಶ್ರೂಷಕರ ದಿನ ಆಚರಿಸಲಾಯಿತು.

ಡಿಕೆಶಿ ಹೇಳಿಕೆ ಸ್ವಾಗತಾರ್ಹ

ಮೈಸೂರು, ಮೇ 23– ಬೂತ್ ಮಟ್ಟದಲ್ಲಿ ಸಂಘಟನಾತ್ಮಕ ಕೆಲಸ ಮಾಡಿ, ಚುನಾವಣೆಯಲ್ಲಿ ಪಕ್ಷಕ್ಕೆ ಮತ ಕೊಡಿಸಿದರೆ ಮಾತ್ರ ಇನ್ನು ಮುಂದೆ ಕಾಂಗ್ರೆಸ್‌ನಲ್ಲಿ ಅಧಿಕಾರ ಪಡೆಯಲು ಸಾಧ್ಯ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದು, ಇದು ಸ್ವಾಗತಾರ್ಹ ನಿರ್ಧಾರ ಎಂದು ಕಾಂಗ್ರೆಸ್ ಮುಖಂಡ ಜಿ.ಶ್ರೀನಾಥ್ ಬಾಬು ಹೇಳಿದರು.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬೂತ್‌ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡುವ ಕಾರ್ಯಕರ್ತರನ್ನು ಸೂಕ್ತ ಸ್ಥಾನಮಾನ ನೀಡಬೇಕಿದೆ. ಇದಕ್ಕೆ ಬೇಕಾಗುವಂತೆ ಹೈಕಮಾಂಡ್ ಮಟ್ಟದಲ್ಲಿ ಸಮಿತಿ ರಚಿಸಬೇಕು. ತಾನು ಮತಹಾಕುವ ಬೂತ್‌ಗಳಲ್ಲಿ ಮತಗಳನ್ನು ಹಾಕಿಸಲು ಆಗದವರು ಉನ್ನತ ಸ್ಥಾನ ಗಿಟ್ಟಿಸಿಕೊಳ್ಳುತ್ತಿರುವುದರಿಂದ ನಿಷ್ಠಾವಂತ ಕಾರ್ಯಕರ್ತರು ನಿರಾಶರಾಗಿದ್ದಾರೆ. ಅವರ ಪ್ರಾಮಾಣಿಕತೆ, ಸಂಘಟನಾ ಕೌಶಲ ನಾಯಕರಿಗೆ ತಿಳಿಯದ ಕಾರಣ ಅವಕಾಶಗಳಿಂದ ವಂಚಿತರಾಗಿ ನೊಂದಿದ್ದಾರೆ. ಇದೀಗ ರಾಜ್ಯ ಕಾಂಗ್ರೆಸ್ ಅಧ್ಯಕ್ಷರ ಈ ನಡೆ ಖುಷಿ ತಂದಿದೆ ಎಂದರು.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಮೇ 23–ಕೆ.ವಿ.ಜಿ. ಮಲ್ಲಿಗೆರೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯನಿರ್ವಹಣೆಯನ್ನು ಹಮ್ಮಿಕೊಳ್ಳಲಾಗಿದ್ದು, ಮೇ 24ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಜಿ.ಮಲ್ಲಿಗೆರೆ, ಹೊನ್ನೆಮಡು, ಹುನಗನಹಳ್ಳಿ, ನಂಜೇನಹಳ್ಳಿ, ಮುತ್ತೆಗೆರೆ, ತಿಪ್ಪಾಪುರ, ಬುಂಡಾರೆಕೊಪ್ಪಲು, ಎಂ.ಹಟ್ನ, ಸಂಗಾಪುರ ಜವನಹಳ್ಳೀ, ಮಲ್ಲೇನಹಳ್ಳಿ, ಛತ್ರನಹಳ್ಳಿ, ಬಿಲ್ಲೇನಹಳ್ಳೀ, ಬಂಕನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಎಸ್‌ಎಸ್‌ಎಲ್‌ಸಿ ಪಾಸಾದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ಮಂಡ್ಯ, ಮೇ 23– ಮದ್ದೂರು ತಾಲೂಕು ಕೆಸ್ತೂರು ಸರ್ಕಾರಿ ಕೈಗಾರಿಕಾ ಸಂಸ್ಥೆಯಲ್ಲಿ 2024–26ನೇ ಸಾಲಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿ ಪಡೆಯಲು ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಮೇ 20 ರಿಂದ ಜೂ.3ರೊಳಗೆ www.cite.kamataka.gov.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ:9632033351 ಮತ್ತು 9164651721ನ್ನು ಸಂಪರ್ಕಿಸಬಹುದು.

ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

ಮಂಡ್ಯ, ಮೇ 23– ಮೇ 25ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ನಗರ ಪ್ರದೇಶಗಳಾದ ಗುತ್ತಲು, ಫ್ಯಾಕ್ಟರಿ ವೃತ್ತ, ಕೈಗಾರಿಕ ಬಡಾವಣೆಗಳು, ಎಂ.ಸಿ.ರಸ್ತೆ, ತಾವರೆಗೆರೆ, ನೆಹರು ನಗರ, ಉದಯಗಿರಿ, ಸಾದತ್ ಮೊಹಲ್ಲ, ಚನ್ನಯ್ಯ ಬಡಾವಣೆ, ಸಿದ್ದಾರ್ಥ ಬಡಾವಣೆ, ಬೆಂಗಳೂರು ಮುಖ್ಯ ರಸ್ತೆಯ ಹೆಬ್ಬಾಳ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಮತ್ತು ಗ್ರಾಮಾಂತರ ಪ್ರದೇಶಗಳಾದ ಶ್ರೀನಿವಾಸಪುರ ಗೇಟ್, ಹನಕೆರೆ ಐ.ಪಿ ವ್ಯಾಪ್ತಿ, ಬಸವಪುರ ಐ.ಪಿ. ವ್ಯಾಪ್ತಿ ಬೂದನೂರು, ಭೂತನ ಹೊಸೂರು, ಚನ್ನಪ್ಪನದೊಡ್ಡಿ, ಹಂಬರಹಳ್ಳಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ತುಂಬಕೆರೆ ವಿದ್ಯುತ್ ವಿತರಣಾ ಕೇಂದ್ರದ ಗ್ರಾಮಾಂತರ ಪ್ರದೇಶಗಳಾದ ಹೊಡಾಘಟ್ಟ, ಕೀಲಾರ, ಹನಕೆರೆ, ಹಳೆ ಬೂದನೂರು, ಹೊಸಬೂದನೂರು, ಈಚಗೆರೆ, ಹಂಬರಹಳ್ಳಿ, ಆಲಕೆರೆ, ನಲ್ಲಹಳ್ಳಿ, ಕಚ್ಚಿಗೆರೆ, ಶ್ರೀನಿವಾಸಪುರ ಗೇಟ್, ಹೊನಗಾನಹಳ್ಳಿಮಠ, ತುಂಬಕೆರೆ, ಚಾಮಲಾಪುರ, ಉಮ್ಮಡಹಳ್ಳಿ, ಬಸವನಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಅವರನ್ನು ಗೆಲ್ಲಿಸಿಕೊಡಿ

ಮಂಡ್ಯ ಜಿಲ್ಲೆಯಲ್ಲಿ ಭರ್ಜರಿ ಮತ ಯಾಚನೆ



ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಅವರ ಪರವಾಗಿ ಪ್ರಾಧ್ಯಾಪಕರಲ್ಲಿ ಗುರುವಾರ ಮತ ಯಾಚನೆ ಮಾಡಲಾಯಿತು.

ಮಂಡ್ಯ: ಜಿಲ್ಲೆಯಾದ್ಯಂತ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದೇವೆ, ಅಭ್ಯರ್ಥಿ ಪರವಾಗಿ ಮತ ಪ್ರಚಾರ ಆರಂಭಿಸಿದ್ದೇವೆ, ಮಿಮ್ಸ್‌ನಲ್ಲಿನ ಪ್ರಾಧ್ಯಾಪಕರು ಹಾಗೂ ಸಹಾಯಕ ಪ್ರಾಧ್ಯಾಪಕರು ಸೇರಿದಂತೆ ಎಲ್ಲರೂ ಮೈತ್ರಿ ಅಭ್ಯರ್ಥಿ ವಿವೇಕಾನಂದ ಅವರನ್ನು ಗೆಲ್ಲಿಸಿಕೊಡಬೇಕು ಎಂದು ಮಾಜಿ ಶಾಸಕ ಕೆ.ಅನ್ನದಾನಿ ಮನವಿ ಮಾಡಿದರು.

ನಗರದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಅವರ ಪರವಾಗಿ ಪ್ರಾಧ್ಯಾಪಕರಲ್ಲಿ ಗುರುವಾರ ಮತ ಯಾಚನೆ ಮಾಡಿದರು.

ಸಮಾಜ ಸೇವಾ ಕ್ಷೇತ್ರದಲ್ಲಿ ವಿವೇಕಾನಂದ ಅವರು ತೊಡಗಿಕೊಂಡು ಸೇವೆಯನ್ನು ಮುಂದುವರಿಸಿದ್ದಾರೆ, ಅವರನ್ನು ಗೆಲ್ಲಿಸಿಕೊಂಡು ಬಂದರೆ ಶಿಕ್ಷಕರ ಸಮಸ್ಯೆ ಬಗೆಹರಿಯಲಿದೆ, ಹಾಗಾಗಿ ಎನ್‌ಡಿಎ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವ ಭರವಸೆಯನ್ನು ಶಿಕ್ಷಕರು ಮತ್ತು ಪ್ರಾಧ್ಯಾಪಕರು ನೀಡಿರುವುದರಿಂದ ನಮಗೆ ಗೆಲುವು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೊದಲ ಪ್ರಾಶಸ್ತ್ಯ ಮತವನ್ನು ನಮ್ಮ ಎನ್‌ಡಿಎ ಅಭ್ಯರ್ಥಿಗೆ ನೀಡಬೇಕು. ಜಿಲ್ಲೆಯಲ್ಲಿ ಅತಿ ಹೆಚ್ಚು ಮತಗಳನ್ನು ನೀಡಲು ಎನ್‌ಡಿಎ ಅಭ್ಯರ್ಥಿಗೆ ಹೆಚ್ಚು ಮತಗಳನ್ನು ಕೊಡಿಸಲು ಶ್ರಮವಹಿಸುತ್ತೇವೆ, ಈ ಬಾರಿ ಶಿಕ್ಷಕರು ಬದಲಾವಣೆ ಬಯಸಿದ್ದಾರೆ, ಅದೇ ರೀತಿ ಶಿಕ್ಷಕ ಬಾಂಧವರು ಬದಲಾವಣೆಗಾಗಿ ಹಾಗೂ ವಿವೇಕಾನಂದ ಅವರಿಗೆ ನಿಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ದಕ್ಷಿಣ ಕ್ಷೇತ್ರಗಳಾದ ಮಂಡ್ಯ, ಚಾಮರಾಜನಗರ, ಮೈಸೂರು, ಹಾಸನದ ಮತದಾರರು ಒಲವು ತೋರಿರುವುದು ಸಂತೋಷ ತಂದಿದೆ. ಈ ಜಿಲ್ಲೆಯ ಎಲ್ಲ ಮತದಾರರಲ್ಲಿಯೂ ನಾವು ಮನವಿ ಮಾಡಿಕೊಳ್ಳುವುದೇನೆಂದರೆ ಜೂನ್ 3 ರಂದು ನಡೆಯುವ ಚುನಾವಣೆಯಲ್ಲಿ ಕ್ರಮ ಸಂಖ್ಯೆ 2 ರ ಅಭ್ಯರ್ಥಿಗೆ ಮತ ನೀಡುವ ಮೂಲಕ ಗೆಲುವು ಕೊಡಿಸಬೇಕು ಎಂದರು.

ಎನ್‌ಡಿಎ ಅಭ್ಯರ್ಥಿ ಕೆವಿವೇಕಾನಂದ ಮಾತನಾಡಿ, ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ ಮತ ಯಾಚನೆ ಮಾಡುತ್ತಿದ್ದೇನೆ, ಜಿಲ್ಲೆಯಲ್ಲಿ ಹೋದಲ್ಲೆಲ್ಲಾ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ, ಅವರ ಸೇವೆಗೆ ಸಿದ್ಧನಾಗಿರುವ ನನಗೆ ಆಶೀರ್ವಾದ ಮಾಡಬೇಕು. ಮಳವಳ್ಳಿ, ಮದ್ದೂರು, ಕೆ.ಆರ್.ಪೇಟೆ, ಪಾಂಡವಪುರ ಸೇರಿದಂತೆ ಶಿಕ್ಷಕರುಗಳನ್ನು ಭೇಟಿ ಮಾಡಿ ಮತಯಾಚನೆ ಮಾಡುತ್ತಿದ್ದೇನೆ, ಮತದಾರರು ತೋರಿಸುತ್ತಿರುವ ಪ್ರೀತಿಗೆ ನಾನು ಆಭಾರಿಯಾಗಿದ್ದೇನೆ, ಮತದಾರರು ನನಗೆ ಮತ ನೀಡಿ ಜಯ ತಂದು ಕೊಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕೆ.ಎಲ್.ರಮೇಶ್, ಚಂದ್ರಪ್ಪ ಕಚ್ಚೀಗೆರೆ ಸೇರಿದಂತೆ ಇತರರು ಭಾಗವಹಿಸಿದ್ದರು.

ಲೋಪವಿಲ್ಲದಂತೆ ಲೋಕಸಭಾ ಚುನಾವಣೆ ಮತ ಎಣಿಕೆ ಯಶಸ್ವಿಗೊಳಿಸಿ



ಮತ ಎಣಿಕೆ ಸಿಬ್ಬಂದಿ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವ ಡಿಸಿ

ಮಂಡ್ಯ, ಮೇ23– ಲೋಕಸಭಾ ಸಾರ್ವತ್ರಿಕ ಚುನಾವಣೆ 2024ರ ಮತ ಎಣಿಕೆ ಕಾರ್ಯ ಜೂನ್ 4ರಂದು ನಡೆಯಲಿದ್ದು, ಉತ್ತಮ ರೀತಿಯಲ್ಲಿ ತರಬೇತಿ ಪಡೆದು ಯಾವುದೇ ಲೋಪದೋಷವಿಲ್ಲದೇ ಮತ ಎಣಿಕೆ ಕಾರ್ಯ ಯಶಸ್ವಿಗೊಳಿಸಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಇವಿಎಂ ಮತ ಎಣಿಕೆ ಸಿಬ್ಬಂದಿಗಳಿಗೆ ಸೂಚಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಂಡ್ಯ ಲೋಕಸಭಾ ಸಾರ್ವತ್ರಿಕ ಚುನಾವಣೆ 2024ರ ಇವಿಎಂ ಮತ ಎಣಿಕೆ ಸಿಬ್ಬಂದಿಗಳಿಗೆ ಆಯೋಜಿಸಲಾದ ಚುನಾವಣಾ ತರಬೇತಿಯಲ್ಲಿ ಮಾತನಾಡಿದ ಅವರು, ಚುನಾವಣೆಯಲ್ಲಿ ಮತದಾನ ಕಾರ್ಯಗಳಿಗೆ ಸಂಬಂಧಿಸಿದಂತೆ ನೇಮಕಗೊಂಡಿದ್ದ ಸೆಕ್ಟರ್ ಅಧಿಕಾರಿಗಳು, ಎಆರ್‌ಒಗಳು, ಪಿಆರ್‌ಒಗಳು, ಮಾಸ್ಟರ್ ಟ್ರೇನರ್‌ಗಳನ್ನೇ ಮತ ಎಣಿಕೆ ಸಿಬ್ಬಂದಿಗಳಾಗಿ ನೇಮಕ ಮಾಡಲಾಗಿದೆ. ಎಲ್ಲಾ ಮತ ಎಣಿಕೆ ಸಿಬ್ಬಂದಿಗಳಿಗೂ ಇವಿಎಂ ಬಳಕೆಯ ಅನುಭವವಿರುವುದರಿಂದ ಭಯ ಪಡದೆ ಧೈರ್ಯ ಹಾಗೂ ಆತ್ಮವಿಶ್ವಾಸದಿಂದ ಕಾರ್ಯ ನಿರ್ವಹಿಸಿ ಎಂದರು.

ಮತ ಎಣಿಕೆಯ ದಿನ ಎಲ್ಲಾ ಸಿಬ್ಬಂದಿಗಳು ನಿಗದಿಪಡಿಸುವ ಸಮಯಕ್ಕೆ ಸರಿಯಾಗಿ ಹಾಜರಿರಬೇಕು. ಮತ ಎಣಿಕೆ ಕೊಠಡಿಗೆ ಮೊಬೈಲ್ ಅನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಪ್ರತಿಯೊಂದು ಟೇಬಲ್‌ಗಳ ಮೇಲೂ ಸಿಸಿ. ಕ್ಯಾಮರಾ ಇದ್ದು, ಬಹಳ ಜಾಗರೂಕತೆಯಿಂದ ಮತ ಎಣಿಕೆ ನಡೆಸಬೇಕು. ಕೆಲವು ಸಂದರ್ಭದಲ್ಲಿ ಮತ ಎಣಿಕೆಯ ಸಂದರ್ಭದಲ್ಲಿ ಇವಿಎಂಗೆ ಸಂಬಂಧಿಸಿದಂತೆ ತಾಂತ್ರಿಕ ತೊಂದರೆ ಉಂಟಾಗಬಹುದು. ಕ್ಲೋಸ್ ಬಟನ್ ಉಪಯೋಗಿಸಿ ಕ್ಲೋಸ್ ಮಾಡದ ಪ್ರಕರಣ ಕಂಡು ಬರಬಹುದು ಇಂತಹ ಸಂದರ್ಭದಲ್ಲಿ ಯಾವ ರೀತಿ ಕೆಲಸ ನಿರ್ವಹಿಸಬೇಕು ಎಂದು ಚುನಾವಣಾ ಆಯೋಗ ನಿರ್ದೇಶನ ನೀಡಿದೆ. ಅದನ್ನು ಅನುಸರಿಸಬೇಕು. ಸಮಸ್ಯೆ ಎದುರಾದಾಗ ಅದಕ್ಕೆ ತಹಶೀಲ್ದಾರ್ ಅಥವಾ ಸಹಾಯಕ ಚುನಾವಣಾಧಿಕಾರಿಗಳ ಬಳಿ ಪರಿಹಾರ ಪಡೆದುಕೊಳ್ಳುತ್ತೇವೆ ಎಂಬ ಮನೋಭಾವ ಇರಬಾರದು ಎಂದು ಹೇಳಿದರು.

ಮತ ಎಣಿಕೆಗೆ ಸಂಬಂಧಿಸಿದಂತೆ ನಿಯೋಜಿಸಲಾಗುವ ಏಜೆಂಟ್‌ಗಳ ಬಳಿ ಶಾಂತವಾಗಿ ವ್ಯವಹರಿಸಿ. ಅವರಿಗೆ ಸಂಶಯಗಳಿದ್ದಲ್ಲಿ ಅವುಗಳನ್ನು ಪರಿಹರಿಸಿ. ಮತ ಎಣಿಕೆ ಮೇಲ್ವಿಚಾರಕರ ಜವಾಬ್ದಾರಿಯು ಬಹಳ ಮುಖ್ಯವಾಗಿದ್ದು, ಮೇಲ್ವಿಚಾರಕರು ಪ್ರತಿ ಇವಿಎಂಗಳಲ್ಲಿ ಎಣಿಕೆಯಾದ ತಕ್ಷಣ ನಿಖರವಾಗಿ ಅಂಕಿಅಂಶಗಳನ್ನು ಬರೆದುಕೊಳ್ಳಬೇಕು. ಇದರಲ್ಲಿ ತಪ್ಪಾದರೆ ಎಣಿಕೆ ಕೆಲಸಗಳು ಕಷ್ಟಕರವಾಗುತ್ತದೆ. ಆದರಿಂದ ತರಬೇತಿಯ ಅವಧಿಯಲ್ಲಿ ಸ್ಪಷ್ಟವಾದ ಮಾಹಿತಿ ಹಾಗೂ ಮಾರ್ಗದರ್ಶನ ಪಡೆಯಿರಿ. ಯಾವುದೇ ಗೊಂದಲವಿದ್ದರೂ ಇಲ್ಲಿಯೇ ಬಗೆಹರಿಸಿಕೊಳ್ಳಿ ಎಂದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜು, ಸಹಾಯಕ ಚುನಾವಣಾಧಿಕಾರಿಗಳಾದ ಮಹೇಶ್, ಆನಂದ್‌ಕುಮಾರ್, ಕೃಷ್ಣಕುಮಾರ್, ಲೋಕನಾಥ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೇಬಿ ಮಠದಲ್ಲಿ ಬುದ್ಧ ಪೂರ್ಣಿಮೆ ಆಚರಣೆ



ಬೇಬಿಗ್ರಾಮದ ದುರ್ದಂಡೇಶ್ವರ ಮಠದಲ್ಲಿ ಬುದ್ಧಪೂರ್ಣಿಮೆ ಅಂಗವಾಗಿ ವಿಶೇಷ ಪೂಜೆ ಸಲ್ಲಿಸಿ ಬಳಿಕ ಪೀಠಾಧ್ಯಕ್ಷ ಡಾ.ಶ್ರೀತ್ರಿನೇತ್ರಮಹಂತ ಸ್ವಾಮೀಜಿ ಭಕ್ತರಿಗೆ ಪ್ರವಚನ ನೀಡಿದರು.

ಚಿನಕುರಳಿ, ಮೇ 23–ಬುದ್ಧಪೂರ್ಣಿಮೆಯ ಅಂಗವಾಗಿ ತಾಲೂಕಿನ ಬೇಬಿ ಗ್ರಾಮದ ದುರ್ದಂಡೇಶ್ವರ ಮಠದಲ್ಲಿ ಪೀಠಾಧ್ಯಕ್ಷ ಡಾ.ಶ್ರೀ ತ್ರಿನೇತ್ರ ಮಹಂತ ಸ್ವಾಮೀಜಿಗಳ ನೇತೃತ್ವದಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಮಠದ ಆವರಣದಲ್ಲಿ ಇರುವ ಶತಾಯುಷಿ ಲಿಂಗೈಕ್ಯ ಶ್ರೀ ಮರೀದೇವರು ಸ್ವಾಮೀಜಿಗಳ ಗದ್ದುಗೆಯಲ್ಲಿ ವಿಶೇಷ ಪೂಜಾ ಕೈಂಕರ್ಯಗಳನ್ನು ನಡೆಸಿದರು. ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಭಕ್ತರು ಶ್ರೀಮರೀ ದೇವರುಸ್ವಾಮೀಜಿಗಳ ಗುದ್ದುಗೆಗೆ ಭಕ್ತಿಯಿಂದ ನಮಿಸುವ ಮೂಲಕ ಭಕ್ತಿಭಾವ ಪ್ರದರ್ಶಿಸಿದರು.

ಬಳಿಕ ಡಾ.ಶ್ರೀ ತ್ರಿನೇತ್ರ ಮಹಂತ ಸ್ವಾಮೀಜಿ ಮಾತನಾಡಿ, ಸುಜ್ಞಾನದ ಅರಿವಿನ ಕೊರತೆಯಿಂದಾಗಿ ದೇಶದಲ್ಲಿ ಕ್ರೋಧ, ಮತೀಯ ಗಲಭೆಗಳು ಹೆಚ್ಚು ನಡೆಯುತ್ತಿವೆ, ಇವುಗಳನ್ನು ಹೋಗಲಾಡಿಸಬೇಕಾದರೆ ನೀತಿಯ ಶಿಕ್ಷಣದ ಅಗತ್ಯವಿದೆ ಎಂದು ತಿಳಿಸಿದರು.

ದೇಹವನ್ನು ಪ್ರೀತಿಸುವುದಕ್ಕಿಂತ ದೇಶವನ್ನು ಪ್ರೀತಿಸುವ ಶಿಕ್ಷಣ ನಮಗೆ ಬೇಕಾಗಿದೆ. ಪೋಷಕರ ತಾತ್ಸಾರ, ನಮ್ಮ ಸುತ್ತಮುತ್ತಲಿನ ಪರಿಸರ, ಕಲುಷಿತ ರಾಜಕೀಯಗಳಿಂದಾಗಿ ಮಕ್ಕಳು ಕ್ರೋಧಗಳಿಗೆ ಒಳಗಾಗಿ ಕೊಲೆ, ಸುಲಿಗೆ, ಅತ್ಯಾಚಾರಗಳಂದ ಕೃತ್ಯಗಳು ಹೆಚ್ಚಾಗಿ ನಡೆಯುತ್ತಿವೆ. ಪೋಷಕರು ಮಕ್ಕಳಿಗೆ ಸರಿಯಾದ ಸಂಸ್ಕೃತಿ, ಸಂಸ್ಕಾರಗಳನ್ನು ಬೆಳೆಸಬೇಕು. ಮಠ–ಮಂದಿರಗಳಿಗೆ ಕೇವಲ ದೊಡ್ಡವರು ಮಾತ್ರ ಬರುತ್ತಾರೆ, ಜತೆಯಲ್ಲಿ ಮಕ್ಕಳನ್ನು ಸಹ ಕರೆತಂದು ಮಕ್ಕಳಿಗೆ ಸಂಸ್ಕಾರದ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಸಂದರ್ಭದಲ್ಲಿ ಭಕ್ತರರಾದ ಧಾರವಾಡ ದ್ಯಾಮಣ್ಣರೇವಣ್ಣನವರ್, ಮಲ್ಲನಗೌಡ ಪಾಟೀಲ್, ನಾಗಣ್ಣಹೊಂಗಲ, ವೀರಭದ್ರ, ಎಂ.ಗಂಗಾಧರ್, ಮಠದ ಕಾರ್‍ಯದರ್ಶಿ ಟಿ.ಪಿ.ಶಿವಕುಮಾರ್, ಮುಖ್ಯಶಿಕ್ಷಕ ಜಗದೀಶ್ ಹಾಜರಿದ್ದರು.

ಉದ್ಯೋಗಕ್ಕೆ ಅರ್ಜಿ ಆಹ್ವಾನ

ಮಂಡ್ಯ, ಮೇ 23– ಮಂಡ್ಯ ತಾಲೂಕು ಬಸರಾಳು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಿಂದ 2 ಸಿ.ಐ.ಟಿ.ಎಸ್ ಉದ್ಯೋಗ ಯೋಜನೆಗೆ ಅರ್ಜಿ ಆಹ್ವಾನಿಸಲಾಗಿದೆ.

ಆನ್‌ಲೈನ್ ಮೂಲಕ ಅರ್ಜಿ ಭರ್ತಿ ಮಾಡಿ ಸಲ್ಲಿಸಲು ಜೂನ್ 3 ಕೊನೆಯ ದಿನವಾಗಿದ್ದು ಅರ್ಜಿಯನ್ನು ಇಲಾಖೆಯ www.cite.karnataka.gov.in ವೆಬ್ ಸೈಟ್ ಮೂಲಕ ಸಲ್ಲಿಸತಕ್ಕದ್ದು.

ಅರ್ಜಿ ಆಹ್ವಾನ

ಮಂಡ್ಯ, ಮೇ 23– ಮಂಡ್ಯ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಳವಳ್ಳಿ ತಾಲೂಕು ಕಲ್ಕುಣಿ ಸರ್ಕಾರಿ ಮುಸ್ಲಿಂ ವಸತಿ ಶಾಲೆ, ಡಾ. ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ, ಮೌಲಾನಾ ಆಜಾದ್ ಮಾದರಿ ಶಾಲೆ, ಮಂಡ್ಯ ಟೌನ್ ಮೌಲಾನಾ ಆಜಾದ್ ಶಾಲೆಯಲ್ಲಿ 2024–25ನೇ ಸಾಲಿನ ಶೈಕ್ಷಣಿಕ ವರ್ಷದ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಸಕ್ತ ಅಭ್ಯರ್ಥಿಗಳು ಮೇ 31 ರೊಳಗೆ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಥವಾ ಸಂಬಂಧಪಟ್ಟ ಶಾಲೆ ಗಳಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08232–297240 ಅನ್ನು ಸಂಪರ್ಕಿಸಬಹುದು.

ಪಾರ್ವತಮ್ಮ ನಿಧನ



ಮಂಡ್ಯ: ತಾಲೂಕು ಹೊಳಲು ಗ್ರಾಮದ ಲೇಟ್ ಕಾಳಲಿಂಗಯ್ಯ ಅವರ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮ(85) ಗುರುವಾರ ನಿಧನರಾದರು. ಹೊಳಲು ಗ್ರಾಮದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಯಿತು. ಮೃತರು ಪುತ್ರ ಬ್ರಹ್ಮಲಿಂಗಯ್ಯ (ಭಾವನ ಪ್ರಿಂಟ್ ಟಚ್), ಸೊಸೆ ರೇಖಾ, ಹೆಣ್ಣು ಮಕ್ಕಳಾದ ಲತಾ, ನವೀನ ಹಾಗೂ ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ.

ಮಾಜಿ ಶಾಸಕರಾದ ಎಚ್.ಬಿ.ರಾಮು, ರಾಜ್ಯ ಒಕ್ಕಲಿಗ ಸಂಘದ ಮಾಜಿ ಉಪಾಧ್ಯಕ್ಷ ಎಚ್.ಎಲ್.ಶಿವಣ್ಣ ಹಾಗೂ ಗ್ರಾಮದ ಮುಖಂಡರು ಮೃತರ ಮನೆಗೆ ಭೇಟಿ ನೀಡಿ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

ಒಂದನೇ ಪುಟದಿಂದ

ಮೃತ ಕನಕರಾಜು ಕುಟುಂಬಕ್ಕೆ ಸಾಂತ್ವನ



ಮುಖ್ಯಮಂತ್ರಿ ಸಿದ್ದರಾಮಯ್ಯ ಕೆ.ಸಾಲುಂಡಿಯಲ್ಲಿನ ತಾತ್ಕಾಲಿಕ ಓಪಿಡಿಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅಸ್ವಸ್ಥರ ಆರೋಗ್ಯ ವಿಚಾರಿಸಿದರು. ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಮುಡಾ ಅಧ್ಯಕ್ಷ ಕೆ.ಮರೀಗೌಡ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ಮತ್ತಿತರರಿದ್ದರು.

ಸೋದರನಿಗೆ ಉದ್ಯೋಗ ಭರವಸೆ

ಮಗನನ್ನು ಕಳೆದುಕೊಂಡು ನೋವಿನಲ್ಲಿರುವ ಕನಕರಾಜು ತಾಯಿ, ತಮ್ಮ ಮತ್ತೊಬ್ಬ ಮಗ ರವಿಗೆ ಉದ್ಯೋಗ ಕೊಡಿಸುವಂತೆ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು. ನನ್ನ ಗಂಡನೂ ಮೂರು ತಿಂಗಳ ಹಿಂದೆ ನಿಧನರಾದರು. ಈಗ ಮಗನೂ ಇಲ್ಲ ಕುಟುಂಬಕ್ಕೆ ದಿಕ್ಕಿಲ್ಲದಂತಾಗಿದೆ. ದಯವಿಟ್ಟು ದೊಡ್ಡ ಮಗ ರವಿಗೆ ಉದ್ಯೋಗ ಕೊಡಿಸಿ, ನಮ್ಮ ಜಮೀನಿನ ವ್ಯಾಜ್ಯವನ್ನು ಸರಿಮಾಡಿಸಿಕೊಡಿ ಎಂದು ಕೋರಿಕೊಂಡರು. ಇದೇ ವೇಳೆ ಗ್ರಾಮದ ಮುಖಂಡರು ಸ್ವಚ್ಛ ನೀರು ಕಲ್ಪಿಸುವುದರ ಜೊತೆಗೆ ಸ್ವಚ್ಛತೆ ಕಾಪಾಡಲು ಕ್ರಮ ವಹಿಸುವಂತೆ ಮನವಿ ಪತ್ರ ನೀಡಿದರು. ಬೇಡಿಕೆ ಈಡೇರಿಸುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದರು.

ಆರ್ಥಿಕ ನೆರವನ್ನು ಕುಟುಂಬದವರಿಗೆ ಹಸ್ತಾಂತರಿಸಿದರು. ಈ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಸಿಎಂ, ನಾನು ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಿದ್ದಾಗಲೆಲ್ಲಾ ಈ ಊರಲ್ಲಿ ನೂರಕ್ಕೆ ನೂರು ಮತ ನೀಡಿದ್ದಾರೆ. ಅಧಿಕಾರಿಗಳ ತಪ್ಪಿನಿಂದ ಕಲುಷಿತ ನೀರು ಸೇವಿಸಿ ಕಾಲರಾ ಹೆಚ್ಚಾಗಿದೆ. ಕನಕರಾಜು ಎಂಬ ಯುವಕ ಮೃತಪಟ್ಟಿದ್ದಾನೆ. ಆತನ ಕುಟುಂಬದವರನ್ನು ಭೇಟಿ ಮಾಡಿ, ಸಾಂತ್ವನ ಹೇಳಿದ್ದೇನೆ. ಕುಟುಂಬಕ್ಕೆ 5 ಲಕ್ಷ ಪರಿಹಾರ ನೀಡುವುದಾಗಿ ತಿಳಿಸಿದ್ದೇನೆ ಎಂದರು.

ಕುಡಿಯುವ ನೀರು ಪೂರೈಕೆ ಜವಾಬ್ದಾರಿ ಹೊಂದಿರುವ ಬೋಗಾದಿ ಪಟ್ಟಣ ಪಂಚಾಯಿತಿ ಅಧಿಕಾರಿಗಳ ನಿರ್ಲಕ್ಷ್ಯದಿಂದಲೇ ಕೆ ಸಾಲುಂಡಿ ಗ್ರಾಮಕ್ಕೆ ಕಲುಷಿತ ನೀರು ಪೂರೈಕೆಯಾಗಿದೆ ಎಂದು ಜಿಲ್ಲಾಧಿಕಾರಿಗಳು ವರದಿ ನೀಡಿದ್ದಾರೆ. ಕಲುಷಿತ ನೀರು ಕುಡಿದು 90ಕ್ಕೂ ಹೆಚ್ಚು ಮಂದಿ ಅಸ್ವಸ್ಥರಾಗಿದ್ದಾರೆ. ಜಿಲ್ಲಾಡಳಿತದ ವತಿಯಿಂದ ಚಿಕಿತ್ಸೆಗೆ ಎಲ್ಲಾ ರೀತಿಯ ಕ್ರಮ ವಹಿಸಲಾಗಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಗ್ರಾಮದಲ್ಲಿ ಹೊಸ ಕೊಳವೆ ಬಾವಿ ತೆಗೆಸಿ ಶುದ್ಧ ಕುಡಿಯುವ ನೀರು ಕಲ್ಪಿಸಲಾಗುವುದು. ಈ ಘಟನೆಗೆ ಕಾರಣರಾದ ಬೋಗಾದಿ ಪಟ್ಟಣ ಪಂಚಾಯ್ತಿ ಮುಖ್ಯ ಅಧಿಕಾರಿ, ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸೇರಿ ಮೂವರನ್ನು ಅಮಾನತುಗೊಳಿಸಲಾಗಿದೆ ಎಂದು ತಿಳಿಸಿದರು.

ಖಡಕ್ ಎಚ್ಚರಿಕೆ: ಗ್ರಾಮದಲ್ಲಿ ಸದ್ಯ ಪರಿಸ್ಥಿತಿ ಸ್ಥಿರವಾಗಿದೆ. ಎಲ್ಲೆಲ್ಲಿ ನೀರು ಕಲುಷಿತವಾಗುವ ಸಾಧ್ಯತೆ ಇದೆಯೋ ಪತ್ತೆಹಚ್ಚಿ ಕೂಡಲೆ ಸರಿಪಡಿಸಲು ಕ್ರಮ ಕೈಗೊಳ್ಳಬೇಕು. ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಮತ್ತೆ ಈ ರೀತಿಯ ಸಮಸ್ಯೆಯಾಗದಂತೆ ಮುಂಜಾಗ್ರತೆ ವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ನಿರ್ಲಕ್ಷ್ಯ ವಹಿಸಿದರೆ ಸಿಇಓ ಅವರನ್ನೂ ಅಮಾನತು ಮಾಡಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಖಡಕ್ ಎಚ್ಚರಿಕೆ ನೀಡಿದರು.

ಅಸ್ವಸ್ಥರ ಭೇಟಿ: ಕಲುಷಿತ ನೀರು ಸೇವಿಸಿ ವಾಂತಿ–ಭೇದಿಯಿಂದ ಅಸ್ವಸ್ಥರಾದವರಿಗೆ ತಕ್ಷಣ ಚಿಕಿತ್ಸೆ ನೀಡಲು ಗ್ರಾಮದಲ್ಲಿ ಆರಂಭಿಸಿರುವ ತಾತ್ಕಾಲಿಕ ಓಪಿಡಿ ಆಸ್ಪತ್ರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಭೇಟಿ ಮಾಡಿ, ಚಿಕಿತ್ಸೆ ಪಡೆಯುತ್ತಿರುವ ಅಸ್ವಸ್ಥರ ಆರೋಗ್ಯ ವಿಚಾರಿಸಿದರು. ಚಿಕಿತ್ಸೆಗೆ ವ್ಯವಸ್ಥೆ ಹಾಗೂ ಅಸ್ವಸ್ಥರ ಆರೋಗ್ಯ ಸ್ಥಿತಿಯ ಬಗ್ಗೆ ಜಿಲ್ಲಾ ಆರೋಗ್ಯಾಧಿಕಾರಿಯಿಂದ ಮಾಹಿತಿ ಪಡೆದರು. ಈ ವೇಳೆ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್, ಮುಡಾ ಅಧ್ಯಕ್ಷ ಕೆ.ಮರಿಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಖಂಡರಾದ ಎಂ.ಲಕ್ಷ್ಮಣ್, ರಾಕೇಶ್ ಪಾಪಣ್ಣ ಮತ್ತಿತರರಿದ್ದರು.

ಕೆ.ಸಾಲುಂಡಿ ಪ್ರಕರಣಕ್ಕೆ ಅಧಿಕಾರಿಗಳೇ ಹೊಣೆ

ಮೈಸೂರು, ಮೇ 23(ಆರ್‌ಕೆ)–ಮೈಸೂರು ತಾಲೂಕಿನ ಕೆ.ಸಾಲುಂಡಿ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ವ್ಯಕ್ತಿ ಸಾವನ್ನಪ್ಪಿ ಇತರರು ಅಸ್ವಸ್ಥರಾಗಲು ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಿಡಿಮಿಡಿಗೊಂಡಿದ್ದಾರೆ. ಬೆಂಗಳೂರಲ್ಲಿ ವೀಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದ ಅವರು, ಮೈಸೂರು ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಇನ್ನಿತರ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಿ, ಎರಡು ಗ್ರಾಮಗಳಲ್ಲಿ ಕಲುಷಿತ ನೀರು ಸರಬರಾಜಾಗಲು ಯಾರು ಕಾರಣ ಎಂದು ಪ್ರಶ್ನಿಸಿದರು. ಪ್ರತೀ ದಿನ ಪೂರೈಕೆಯಾಗುವ ನೀರು ಕುಡಿಯಲು ಯೋಗ್ಯವೇ, ಇಲ್ಲವೇ ಎಂಬುದನ್ನು ಪರೀಕ್ಷೆ ಮಾಡದಿರುವುದೇ ಘಟನೆಗೆ ಕಾರಣ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಈ ರೀತಿಯಾಗುತ್ತಿದೆ. ಜಿಲ್ಲಾ ಮಟ್ಟದ ಅಧಿಕಾರಿಗಳೇ ಇದಕ್ಕೆ ಹೊಣೆ ಎಂದು ಅವರು ದೂರಿದರು.

ಕಲುಷಿತ ನೀರು ಪೂರೈಕೆಯಿಂದ ತೊಂದರೆ ಆದರೆ ಇನ್ನು ಮುಂದೆ ಜಿಲ್ಲಾಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು. ಅದೇ ರೀತಿ ಕಾಲರಾದಂತಹ ಸಾಂಕ್ರಾಮಿಕ ರೋಗಗಳು ಕಂಡು ಬಂದಲ್ಲಿ, ಸರಿಯಾಗಿ ನಿರ್ವಹಣೆ ಮಾಡದಿದ್ದಲ್ಲಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳೇ ಹೊಣೆಯಾಗುತ್ತಾರೆ ಎಂದು ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು. ಇನ್ನು ಮುಂದೆ ನೀರಿನ ಪರೀಕ್ಷೆ ಮಾಡಿ ಕುಡಿಯಲು ಯೋಗ್ಯ ಎಂಬುದನ್ನು ಖಾತರಿಪಡಿಸಬೇಕು. ಮಲಿನ ನೀರು, ಒಳ ಚರಂಡಿ ನೀರು ಸೇರಿ ಕುಡಿಯುವ ನೀರು ಕಲುಷಿತವಾಗದಂತೆ ಎಚ್ಚರ ವಹಿಸಬೇಕು. ನಗರ, ಪಟ್ಟಣ ಹಾಗೂ ಗ್ರಾಮಗಳಿಗೆ ಶುದ್ಧ ನೀರನ್ನೇ ಪೂರೈಸ ಬೇಕು ಎಂದು ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಸಂತ ಫಿಲೋಮಿನಾ ಕಾಲೇಜಿನ 749 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ನಾವೆಲ್ಲ ವಸುದೈವ ಕುಟುಂಬಕಂ ಪರಿಚಯಿಸಿದ ದೇಶದಲ್ಲಿ ವಾಸಿಸುತ್ತಿದ್ದೇವೆ: ಕಾಲೇಜು ಅಭಿವೃದ್ಧಿ ಪರಿಷತ್ ನಿರ್ದೇಶಕ ಡಾ.ಆನಂದ ವಿದ್ಯಾರ್ಥಿಗಳಿಗೆ ಕಿವಿಮಾತು



ಮೈಸೂರು, ಮೇ 23–ಸಂತ ಫಿಲೋಮಿನಾ ಕಾಲೇಜಿನಲ್ಲಿ ಪ್ರಸ್ತುತ 2023–2024ನೇ ಸಾಲಿನ ಅಂತಿಮ ವರ್ಷದ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಕಾರ್ಯಕ್ರಮ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಇಂದು ಜರುಗಿತು. ಈ ವೇಳೆ ಪದವಿಯಿಂದ 525, ಸ್ನಾತಕೋತ್ತರ ಪದವಿಯ 199 ವಿದ್ಯಾರ್ಥಿಗಳು ಸಮಾರಂಭದಲ್ಲಿ ಪದವಿ ಸ್ವೀಕರಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಪರಿಷತ್ ನಿರ್ದೇಶಕರಾದ ಡಾ.ಡಿ.ಆನಂದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನೂರಾರು ವಿದ್ಯಾರ್ಥಿಗಳು ಇಂದು ಪದವಿ ಸ್ವೀಕರಿಸಿ ಹೆಮ್ಮೆಯಿಂದ ಜೀವನದಲ್ಲಿ ಸ್ವತಂತ್ರವಾಗಿ ಬದುಕಲು ಉತ್ಸುಕರಾಗಿದ್ದೀರಿ. ಆದರೆ ಸಮಾಜವು ಅವಕಾಶಗಳೊಂದಿಗೆ ಕಠಿಣ ಸವಾಲುಗಳನ್ನು ತಂದೊಡ್ಡುತ್ತದೆ ಎಂಬುದನ್ನು ಮರೆಯಬಾರದು. ಶಿಕ್ಷಣವು ನೀವು ಪಡೆಯುತ್ತಿರುವ ಪದವಿಗೆ ಹಾಗೂ ನಿಮ್ಮನ್ನು ನಿರ್ದಿಷ್ಟ ರೀತಿಯ ಉದ್ಯೋಗಕ್ಕೆ ಅರ್ಹರನ್ನಾಗಿ ಮಾಡುವುದರ ಜೊತೆಗೆ ಸಾಮರ್ಥ್ಯ ಮತ್ತು ಸಮಾಜವನ್ನು ಅರಿತುಕೊಳ್ಳಲು ಅವಕಾಶ ಕಲ್ಪಿಸಿದೆ.

ಪ್ರೀತಿಯ ಮೂಲಕ ಶಿಕ್ಷಣ ಮತ್ತು ಜ್ಞಾನವನ್ನು ಹರಡುವುದು ಫಿಲೋಮಿನಾ ಕಾಲೇಜಿನ ಧ್ಯೇಯವಾಕ್ಯವಾಗಿದೆ ಎಂದು ಒತ್ತಿ ಹೇಳಿದ ಅವರು, ಸಮಾಜದಲ್ಲಿ ಎಲ್ಲಾ ವರ್ಗದವರನ್ನು ಒಳಗೊಂಡಂತೆ ಅನ್ಯೋನ್ಯತೆಯಿಂದ ಬದುಕುವುದು ವಿದ್ಯಾರ್ಥಿಯ ಜವಾಬ್ದಾರಿಯಾಗಿದ್ದು, ರಾಷ್ಟ್ರದ ಭವಿಷ್ಯಕ್ಕಾಗಿ ಅವರು ವ್ಯಕ್ತಿತ್ವ ಹಾಗೂ ರಾಷ್ಟ್ರದ ಹಿತಕ್ಕಾಗಿ ಎಲ್ಲವನ್ನು ತ್ಯಜಿಸಿ ಸಮರ್ಪಿತ ಭಾವ ಹೊಂದಿರಬೇಕು. ವಿದ್ಯಾರ್ಥಿಗಳಿಗೆ ಸಹೃದಯತೆಯನ್ನು ಕಲಿಸದ ವಿದ್ಯೆ ವ್ಯರ್ಥ ಎಂದು ಕಿವಿಮಾತು ಹೇಳಿದರು.

ನಾವು ವಸುದೈವ ಕುಟುಂಬಕಂ ಪರಿಚಯಿಸಿದ ದೇಶದಲ್ಲಿ ಬದುಕುತ್ತಿದ್ದು, ಇಂದು ಇದನ್ನು ಜಗತ್ತಿಗೆ ಸಾರಿ ಹೇಳುವ ಸಮಯವಾಗಿದೆ. 65% ಯುವಜನಾಂಗವನ್ನು ಹೊಂದಿರುವ ಈ ದೇಶದಲ್ಲಿ ಯುವಕ ಯುವತಿಯರು ರಾಷ್ಟ್ರದ ಹಿತಕ್ಕಾಗಿ ದುಡಿದು ನಮ್ಮ ದೇಶದ ನಿಜವಾದ ಸಾಮರ್ಥ್ಯವನ್ನು ಜಗತ್ತಿಗೆ ಪ್ರದರ್ಶಿಸಬೇಕು ಎಂದರು.

ಇದೇ ವೇಳೆ ಕಾರ್ಯಕ್ರಮದಲ್ಲಿ 2023–2024 ಶೈಕ್ಷಣಿಕ ವರ್ಷದಲ್ಲಿ ಸಾಧನೆಗೈದ 25 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂತ ಫಿಲೋಮಿನಾ ಕಾಲೇಜಿನ ರೆಕ್ಟರ್ ಡಾ.ಬರ್ನಾಡ್ ಪ್ರಕಾಶ್ ಬಾರ್ನಿಸ್ ವಹಿಸಿದ್ದು, ಪ್ರಾಂಶುಪಾಲರಾದ ಡಾ.ರವಿ ಜೆಡಿ ಸಲ್ಡಾನ್ಹಾ, ರೊನಾಲ್ಡ್ ಪ್ರಕಾಶ್ ಕುಟಿನಾ, ಉಪ ಪ್ರಧಾನ ಆಡಳಿತ ಅಧಿಕಾರಿ, ನಾಗರಾಜ ಅರಸ್ ಉಪಪ್ರಾಂಶುಪಾಲರು ಹಾಗೂ ಥಾಮಸ್ ಗುಣಶೀಲನ್, IQAC ಸಂಯೋಜಕರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬೆಂಗಳೂರು ರೇವ್ ಪಾರ್ಟಿ: ತೆಲುಗು ನಟಿ ಸೇರಿ 86 ಮಂದಿ ಮಾದಕ ದ್ರವ್ಯ ಸೇವನೆ

ರಕ್ತದ ಮಾದರಿ ಪರೀಕ್ಷಾ ಫಲಿತಾಂಶ ಪಾಸಿಟಿವ್!



ಬೆಂಗಳೂರು, ಮೇ 23– ಇತ್ತೀಚೆಗೆ ಬೆಂಗಳೂರು ಹೊರವಲಯದ ಫಾರ್ಮ್‌ಹೌಸ್‌ನಲ್ಲಿ ನಡೆದ ರೇವ್ ಪಾರ್ಟಿಯಲ್ಲಿ ಭಾಗವಹಿಸಿದ್ದವರ ರಕ್ತದ ಮಾದರಿಗಳ ಫಲಿತಾಂಶ ಬಂದಿದ್ದು, ತೆಲುಗು ನಟಿ ಸೇರಿದಂತೆ 86 ಮಂದಿ ಮಾದಕ ದ್ರವ್ಯ ಸೇವಿಸಿರುವುದು ದೃಢಪಟ್ಟಿದೆ ಎಂದು ಪೊಲೀಸ್ ಮೂಲಗಳು ಗುರುವಾರ ತಿಳಿಸಿವೆ.

ಬರ್ತ್ ಡೇ ಪಾರ್ಟಿ ನೆಪದಲ್ಲಿ ಆಯೋಜಿಸಲಾಗಿದ್ದ ರೇವ್ ಪಾರ್ಟಿಯಲ್ಲಿ ಒಟ್ಟು 103 ಮಂದಿ ಪಾಲ್ಗೊಂಡಿದ್ದರು. ಭಾಗವಹಿಸಿದವರಲ್ಲಿ 73 ಪುರುಷರು ಮತ್ತು 30 ಮಹಿಳೆಯರು ಸೇರಿದ್ದಾರೆ. ಮೇ 19ರಂದು ಬೆಳ್ಳಂಬೆಳಗ್ಗೆ ಎಲೆಕ್ಟ್ರಾನಿಕ್ ಸಿಟಿ ಬಳಿಯ ಫಾರ್ಮ್‌ಹೌಸ್‌ನಲ್ಲಿ ದಾಳಿ ನಡೆಸಿದ ಪೊಲೀಸರು 1.5 ಕೋಟಿ ಮೌಲ್ಯದ MDMA (Ecstacy) ಮಾತ್ರೆಗಳು, ಹೈಡ್ರೋ ಗಾಂಜಾ, ಕೊಕೇನ್, ಹೈ ಎಂಡ್ ಕಾರುಗಳು, DJ ಉಪಕರಣಗಳು, ಧ್ವನಿ ಮತ್ತು ಬೆಳಕು ಉಪಕರಣಗಳು ಸೇರಿದಂತೆ 1.5 ಕೋಟಿ ರೂ ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆದಿದ್ದರು. ದಾಳಿಯ ನಂತರ, ಪೊಲೀಸರು ಖಾಸಗಿ ಆಸ್ಪತ್ರೆಯಲ್ಲಿ ಭಾಗವಹಿಸಿದವರ ರಕ್ತದ ಮಾದರಿಗಳನ್ನು ಸಂಗ್ರಹಿಸಿದರು. ಇದರಲ್ಲಿ 59 ಪುರುಷರು ಮತ್ತು 27 ಮಹಿಳೆಯರ ಮಾದಕ ದ್ರವ್ಯ ಪರೀಕ್ಷಾ ಫಲಿತಾಂಶ ಪಾಸಿಟಿವ್ ಬಂದಿದ್ದು, ಅವರು ಮಾದಕ ವಸ್ತು ಸೇವಿಸಿದ್ದಾರೆ ಎಂಬುದು ದೃಢಪಟ್ಟಿದೆ.

ಪಾರ್ಟಿಗೆ ಹಾಜರಾದ ಹೆಚ್ಚಿನ ಜನರು ಡ್ರಗ್ಸ್ ಸೇವಿಸುತ್ತಿದ್ದರು. ಪ್ರಸ್ತುತ ಪಾಸಿಟಿವ್ ಬಂದಿರುವವರಿಗೆ ಕೇಂದ್ರ ಅಪರಾಧ ವಿಭಾಗವು ನೋಟಿಸ್ ನೀಡಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಾಸು ಎಂಬಾತನ ಹೆಸರಿನಲ್ಲಿ ಬರ್ತಡೇ ಪಾರ್ಟಿಯನ್ನು ಭಾನುವಾರ (ಮೇ 19) ಮಧ್ಯರಾತ್ರಿ ಆಯೋಜಿಸಲಾಗಿತ್ತು. ಆದರೆ ಇದಕ್ಕೆ ಎಂಟ್ರಿ ಫೀಸ್ ಮಾತ್ರ ಎರಡು ಲಕ್ಷದವರೆಗೆ ಇತ್ತು ಎನ್ನಲಾಗುತ್ತಿದೆ. ಎಲೆಕ್ಟ್ರಾನಿಕ್ ಸಿಟಿ ಬಳಿಯ ಜಿಆರ್ ಫಾರ್ಮ್ ಹೌಸ್‌ನಲ್ಲಿ ಪಾರ್ಟಿ ಭಾನುವಾರ ಸಂಜೆ ಐದು ಘಂಟೆಯಿಂದ ಆರಂಭವಾಗಿದ್ದು ಸೋಮವಾರ ಬೆಳಗಿನ ಜಾವದವರೆಗೂ ಮುಂದುವರಿದಿತ್ತು. ಐದು ಜನ ಈ ಇವೆಂಟ್ ಆರ್ಗನೈಸ್ ಮಾಡಿದ್ದರು ಎಂದು ನಗರ ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ಪರಿಷತ್ ಚುನಾವಣೆ: ಕಾಂಗ್ರೆಸ್‌ನಿಂದ ಐವರು ಬಂಡಾಯ ಅಭ್ಯರ್ಥಿಗಳ ಉಚ್ಚಾಟನೆ

ಬೆಂಗಳೂರು, ಮೇ 23– ವಿಧಾನಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಲು ಪಕ್ಷದ ಟಿಕೆಟ್ ಸಿಗದಿದ್ದಕ್ಕೆ ಬಂಡಾಯ ಅಭ್ಯರ್ಥಿಗಳಾಗಿ ಸ್ಪರ್ಧಿಸಿರುವ ಐವರನ್ನು ಕಾಂಗ್ರೆಸ್ ಗುರುವಾರ ಪಕ್ಷದಿಂದ ಉಚ್ಚಾಟನೆ ಮಾಡಿದೆ.

ಕರ್ನಾಟಕ ವಿಧಾನಪರಿಷತ್‌ಗೆ ಈಶಾನ್ಯ ನೈಋತ್ಯ ಬೆಂಗಳೂರು ಪದವೀಧರ ಕ್ಷೇತ್ರ ಹಾಗೂ ಆಗ್ನೇಯ ನೈಋತ್ಯ ದಕ್ಷಿಣ ಶಿಕ್ಷಕರ ಕ್ಷೇತ್ರಗಳು ಸೇರಿ ಒಟ್ಟು 6 ಕ್ಷೇತ್ರಗಳಿಗೆ ಜೂ.3ರಂದು ಚುನಾವಣೆ ನಡೆಯಲಿದೆ.

ಕಾಂಗ್ರೆಸ್ ಈಗಾಗಲೇ ತನ್ನ ಅಭ್ಯರ್ಥಿಗಳನ್ನು ಘೋಷಣೆ ಮಾಡಿದೆ. ಆದರೂ ಕಾಂಗ್ರೆಸ್ ಟಿಕೆಟ್ ಕೈತಪ್ಪಿರುವುದರಿಂದ ಕೆಲ ನಾಯಕರು ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿಕೆ ಶಿವಕುಮಾರ್ ಸೂಚನೆ ಮೇರೆಗೆ ಒಟ್ಟು ಐವರು ಬಂಡಾಯ ಅಭ್ಯರ್ಥಿಗಳನ್ನು ಉಚ್ಚಾಟಿಸಿ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ಇಂದು ಆದೇಶ ಹೊರಡಿಸಿದ್ದಾರೆ.

ಉಚ್ಚಾಟನೆಗೊಂಡವರು: ನೈಋತ್ಯ ಪದವೀಧರ ಕ್ಷೇತ್ರದ ಬಂಡಾಯ ಅಭ್ಯರ್ಥಿ –ಎಸ್.ಪಿ.ದಿನೇಶ್, ಬೆಂಗಳೂರು ಪದವೀಧರ ಕ್ಷೇತ್ರದ ಬಂಡಾಯ ಅಭ್ಯರ್ಥಿ– ಫರ್ಡಿನಾಂಡ್ ಲಾರೆನ್ಸ್, ನೈಋತ್ಯ ಶಿಕ್ಷಕರ ಕ್ಷೇತ್ರದ ಬಂಡಾಯ ಅಭ್ಯರ್ಥಿ –ಬಿ.ಆರ್.ನಂಜೇಶ್, ಆಗ್ನೇಯ ಶಿಕ್ಷಕರ ಕ್ಷೇತ್ರದ ಬಂಡಾಯ ಅಭ್ಯರ್ಥಿಗಳಾದ ಲೋಕೇಶ್ ತಾಳಿಕಟ್ಟೆ ಮತ್ತು ವಿನೋದ್ ಶಿವರಾಜ್.

ಮೈಸೂರು ಮಿತ್ರ

ಆದಿವಾಸಿ ಸಮುದಾಯ ಪ್ರತಿನಿಧಿಸಲು ಡಾ.ದ್ವಾರಕಾನಾಥ್ ಪರಿಷತ್‌ಗೆ ನಾಮನಿರ್ದೇಶನ ಮಾಡಲು ಬುಡಕಟ್ಟು ಸಮುದಾಯ ಮನವಿ



ದ್ವಾರಕಾನಾಥ್

ಮೈಸೂರು,ಮೇ 23(ಎಂಟಿವೈ)– ವಿಧಾನ ಸಭೆ ಹಾಗೂ ವಿಧಾನಪರಿಷತ್‌ನಲ್ಲಿ ಆದಿವಾಸಿ ಸಮುದಾಯ ಪ್ರತಿನಿಧಿಗಳಿಲ್ಲ ಹಾಗೂ ಸಮುದಾಯದ ಪರ ಹೋರಾಡುತ್ತಿರುವ ಡಾ.ಸಿ.ಎಸ್. ದ್ವಾರಕಾನಾಥ್ ಅವರನ್ನು ಪರಿಷತ್‌ಗೆ ನಾಮ ನಿರ್ದೇಶನ ಮಾಡಬೇಕೆಂದು ಕರ್ನಾಟಕ ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾ ಸದಸ್ಯ ವಡ್ಡರಗುಡಿ ಚಿಕ್ಕಣ್ಣ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿವಾಸಿಗಳ ನೋವನ್ನು ಕೇಳುವವರೇ ಇಲ್ಲದಂತಾಗಿದೆ. ಈ ಸಮುದಾಯವನ್ನು ಪ್ರತಿನಿಧಿಸುವ ಯಾರೊಬ್ಬರು ವಿಧಾನ ಸಭೆ ಹಾಗೂ ವಿಧಾನಪರಿಷತ್‌ನಲ್ಲಿ ಇಲ್ಲದ ಕಾರಣ, ಸಮುದಾಯ ನಾನಾ ಸಮಸ್ಯೆ ಎದುರಿಸುತ್ತಲೇ ಇದೆ. ಕಳೆದ 3–4 ದಶಕಗಳಿಂದ ಆದಿವಾಸಿಗಳ ಪರವಾಗಿ ಹೋರಾಡುತ್ತಿರುವ ಡಾ.ದ್ವಾರಕಾನಾಥ್ ಅವರನ್ನೇ ವಿಧಾನಪರಿಷತ್‌ಗೆ ಆಯ್ಕೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿರ್ಧರಿಸಬೇಕು. ಆ ಮೂಲಕ ಆದಿವಾಸಿ ಸಮುದಾಯಕ್ಕೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ದ್ವಾರಕಾನಾಥ್ ಅವರು ಅಲೆಮಾರಿ ಮತ್ತು ಆದಿವಾಸಿ ಸಮಸ್ಯೆಗಳ ಬಗ್ಗೆ ನ್ಯಾಯಾಲಯದಲ್ಲಿ ಹೋರಾಡುತ್ತಿರುವುದಲ್ಲದೆ, ಹಕ್ಕುಗಳನ್ನು ದೊರಕಿಸಿಕೊಡಲು ಶ್ರಮಿಸಿದ್ದಾರೆ. ಇವರಿಗೆ ಈ ಎಲ್ಲ ಸಮುದಾಯಗಳ ಬಗ್ಗೆ ಮಾಹಿತಿ ಇದೆ. ಇವರು 48 ಸಮುದಾಯಗಳ ಸಂಶೋಧನಾ ಕೃತಿಗಳಿಗೆ ಮಾರ್ಗದರ್ಶಕರಾಗಿ ಹಾಗೂ ಡಾ.ಅಂಬೇಡ್ಕರ್ ಸಂಶೋಧನಾ ಸಂಸ್ಥೆ ಕೆಲಸ ಕಾರ್ಯಗಳಲ್ಲೂ ತೊಡಗಿದ್ದರು. ರಾಜ್ಯ ಸರ್ಕಾರದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ಹಿಂದುಳಿದ ಪ್ರವರ್ಗ–1ರಲ್ಲಿರುವ 46 ಅಲೆಮಾರಿ ಸಮುದಾಯಗಳ ಅಸ್ಮಿತೆ ರಕ್ಷಿಸಿದ್ದಾರೆ. ಹೀಗಾಗಿ ಇವರು ಇಂತಹ 120 ಸಮುದಾಯಗಳನ್ನೂ ಪ್ರತಿನಿಧಿಸಲು ಪರಿಷತ್‌ಗೆ ನಾಮ ನಿರ್ದೇಶನ ಮಾಡಬೇಕೆಂದು ಸಿಎಂಗೂ ಮನವಿ ಸಲ್ಲಿಸುವುದಾಗಿ ತಿಳಿಸಿದರು. ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾ ಪದಾಧಿಕಾರಿಗಳಾದ ಎಂ.ಮುತ್ತು, ರವಿ, ಲೋಕೇಶ್, ಮಣಿ, ಶೇಖರ್ ಇದ್ದರು.

ಬಸವ ಜಯಂತಿಗೆ ಆಹ್ವಾನ



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಬಸವ ಬಳಗಗಳ ಒಕ್ಕೂಟದ ವತಿಯಿಂದ 2024ನೇ ಬಸವ ಜಯಂತಿ ಜೂನ್ 9ರಂದು ನಡೆಯಲಿದ್ದು ಅದರ ನಿಮಿತ್ತವಾಗಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರಸ್ವಾಮೀಜಿ ಅವರನ್ನು ಭೇಟಿಯಾದ ಒಕ್ಕೂಟದ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್, ಸಮಿತಿ ಪದಾಧಿಕಾರಿಗಳು ಆಶೀರ್ವಾದ ಪಡೆದು ಜಯಂತಿಗೆ ಆಹ್ವಾನ ನೀಡಿದರು. ಈ ಸಂದರ್ಭದಲ್ಲಿ ಕೋಶಾಧ್ಯಕ್ಷ ಹೆಚ್.ಎಸ್.ವೀರೇಶ್, ಪ್ರಧಾನ ಕಾರ್ಯದರ್ಶಿ ಎಂ.ಕೆ.ಸ್ವಾಮಿ, ಸಂಘಟನಾ ಕಾರ್ಯದರ್ಶಿ ರೇಚಣ್ಣ, ಮಧುಕರ್, ಮೂಗೂರು ನಂಜುಂಡಸ್ವಾಮಿ, ಎಸ್‌ಆರ್‌ಎಸ್ ಶಿವಕುಮಾರ್, ದೂರ ವೃಷಭೇಂದ್ರ, ಶಶಿಕಿರಣ್, ಜಗದೀಶ್ ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದವರಿಗೆ ಡಿಪ್ಲೊಮಾ ತರಗತಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 23(ಜಿಎ)–ಮೈಸೂರು ಕೆಆರ್‌ಎಸ್ ರಸ್ತೆಯ ಬೆಳಗೊಳ ಕೈಗಾರಿಕಾ ಪ್ರದೇಶದಲ್ಲಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ವತಿಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ 2024–25ನೇ ಸಾಲಿನ ಡಿಪ್ಲೊಮಾ ಪ್ರವೇಶಕ್ಕೆ ಎಐಸಿಟಿಇ ಅನುಮೋದಿತ ದೀರ್ಘಾವಧಿ ಕೋರ್ಸ್‌ಗಳಿಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ ಎಂದು ಕೇಂದ್ರದ ಪ್ರಾಂಶುಪಾಲ ಎಸ್.ಎನ್.ಜಗದೀಶ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಪ್ಲೊಮಾ ಇನ್ ಟೂಲ್ ಮತ್ತು ಡೈ ಮೇಕಿಂಗ್, ಡಿಪ್ಲೊಮಾ ಇನ್ ಪ್ರಿಸಿಷನ್ ಮ್ಯಾನುಫ್ಯಾಕ್ಚರಿಂಗ್ ಕೋರ್ಸ್‌ಗಳು ಈಗಾಗಲೇ ಪ್ರಾರಂಭವಾಗಿವೆ. ಈ ವರ್ಷ ಡಿಪ್ಲೊಮಾ ಇನ್ ಎಲೆಕ್ಟ್ರಾನಿಕ್ ಮತ್ತು ಕಮ್ಯೂನಿಕೇಷನ್ ಕೋರ್ಸ್ ಅನ್ನು ಪ್ರಾರಂಭಿಸಲಾಗಿದೆ. 3 ವರ್ಷದ ಕೋರ್ಸ್ ಜತೆಗೆ 1 ವರ್ಷ ಕಡ್ಡಾಯವಾಗಿ ಕೈಗಾರಿಕಾ ತರಬೇತಿ, ಕೋರ್ಸ್ ಮುಗಿದ ಬಳಿಕ ಉದ್ಯೋಗದ ನೆರವು ನೀಡಲಾಗುವುದು. ಪುರುಷ ಅಭ್ಯರ್ಥಿಗಳಿಗೆ ವಿದ್ಯಾರ್ಥಿನಿಲಯದ ಸೌಲಭ್ಯ ಅರ್ಹ ವಿದ್ಯಾರ್ಥಿಗಳಿಗೆ ಸರ್ಕಾರದ ವಿದ್ಯಾರ್ಥಿ ವೇತನದ ಸೌಲಭ್ಯವಿರುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೇಂದ್ರದ ಮುಖ್ಯಸ್ಥ ಓಬಯ್ಯ, ಸಿಒಇ ವಿಭಾಗದ ಪ್ರಭಾರ ಅಧಿಕಾರಿ ಶ್ರೀನಿವಾಸ್ ಭಟ್, ವಿನಯ್ ಉಪಸ್ಥಿತರಿದ್ದರು.

ಪ್ರವೇಶಾತಿಯನ್ನು ಆನ್‌ಲೈನ್ ಮೂಲಕ ಮೆರಿಟ್ ಮತ್ತು ರೋಸ್ಟರ್ ಆಧಾರದ ಮೇಲೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಡೆಸಲಾಗುತ್ತಿದ್ದು, ಆನ್‌ಲೈನ್ ಮೂಲಕ ಅರ್ಜಿಯನ್ನು ಮೇ 11ರಿಂದ 27ರವರೆಗೆ ಸಲ್ಲಿಸಬಹುದು. ಮಾಹಿತಿಗೆ ಸಹಾಯವಾಣಿ ಸಂ.155267, ಮೊ.ಸ. 9980557205, 8660139259, 9141630315, 9880068986, ವೆಬ್‌ಸೈಟ್ www.gttc.karnataka.gov.in, cetonline. karnataka.gov.in ಸಂಪರ್ಕಿಸಬಹುದು.

ಉತ್ತಮ ಮಳೆ; ಮೈಸೂರಲ್ಲಿ ಕೃಷಿ ಚಟುವಟಿಕೆ ಚುರುಕು

ಜಿಲ್ಲೆಯಲ್ಲಿ 1.28 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಪೂರ್ಣ

- 3,90,247 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯ ಗುರಿ
- 2,61,804 ಹೆಕ್ಟೇರ್‌ನಲ್ಲಿ ಹಂತ ಹಂತವಾಗಿ ಬಿತ್ತನೆ
- ರಿಯಾಯಿತಿ ದರದಲ್ಲಿ ರೈತರಿಗೆ ಬಿತ್ತನೆ ಬೀಜ ವಿತರಣೆ
- ತಿಂಗಳ ನಂತರ ನೀರಿನ ಲಭ್ಯತೆ ಆಧರಿಸಿ ಭತ್ತ ನಾಟಿ



ಮೈಸೂರು, ಮೇ23(ಬಿಎಲ್‌ಯು)– ಬರಗಾಲದಿಂದ ಕಂಗೆಟ್ಟಿದ್ದ ರೈತರಲ್ಲಿ ಈ ಬಾರಿಯ ವರ್ಷಧಾರೆ ಚೈತನ್ಯ ತಂದಿದೆ. ಪೂರ್ವ ಮುಂಗಾರು ಉತ್ತಮವಾಗಿದ್ದು, ಮೈಸೂರು ಜಿಲ್ಲೆಯ ರೈತಾಪಿ ವರ್ಗ ಅತ್ಯಂತ ಉತ್ಸಾಹದಿಂದ ಕೃಷಿ ಚಟುವಟಿಕೆ ಆರಂಭಿಸಿದೆ.

ಪೂರ್ವ ಮುಂಗಾರಿನಲ್ಲೇ ವರುಣ ಆರ್ಭಟಿಸಿದ್ದಾನೆ. ಬರಗಾಲದಿಂದ ತತ್ತರಿಸಿದ್ದ ರೈತರು ವರುಣನ ಕೃಪೆಯಿಂದ ಉತ್ಸಾಹಭರಿತರಾಗಿದ್ದಾರೆ. ಪೂರ್ವ ಮುಂಗಾರಿನಲ್ಲೇ ಮೈಸೂರು ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿರುವುದರಿಂದ ಮುಂದೆ ವಾಡಿಕೆಗಿಂತ ಹೆಚ್ಚು ಮಳೆ ಬೀಳುವ ನಿರೀಕ್ಷೆಯಿಂದ ಅನ್ನದಾತ ಕೃಷಿ ಚಟುವಟಿಕೆಗಳತ್ತ ಮುಖ ಮಾಡಿದ್ದಾನೆ.

ಮಳೆ, ಬೆಳೆ ಇಲ್ಲದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ರೈತರು ಈ ಬಾರಿಯಾದರೂ ಉತ್ತಮ ಮಳೆಯಾಗಲೀ ಎಂದು ದೇವರ ಮೊರೆ ಹೋಗಿದ್ದರು. ಇದಕ್ಕಾಗಿ ಪೂಜೆ–ಪುನಸ್ಕಾರಗಳಲ್ಲಿ ತೊಡಗಿದ್ದರು. ಪ್ರಾಯಶಃ ವರುಣನಿಗೆ ರೈತರ ಮೊರೆ ತಲುಪಿ ಈ ಬಾರಿ ಉತ್ತಮ ಮಳೆ ಆರಂಭವಾಗಿದೆ.

ಮೈಸೂರು ಜಿಲ್ಲೆಯಲ್ಲಿ ಕೃಷಿ ಇಲಾಖೆ 3,90,247 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯ ಗುರಿ ಹೊಂದಿದೆ. ಕಳೆದ ವಾರ ಮಳೆಯಾದ ಹಿನ್ನೆಲೆಯಲ್ಲಿ ವಾರದಿಂದ 1.28,443 ಹೆಕ್ಟೇರ್ ಭೂಮಿಯಲ್ಲಿ ಬಿತ್ತನೆ ಮಾಡಲಾಗಿದೆ. ಉಳಿದ 2,61,804 ಹೆಕ್ಟೇರ್ ಪ್ರದೇಶದಲ್ಲಿ ಹಂತ ಹಂತವಾಗಿ ಬಿತ್ತನೆ ಪೂರ್ಣಗೊಳಿಸಲಿದ್ದಾರೆ.

ಉತ್ತಮ ಮಳೆಯಿಂದ ಹದವಾಗಿರುವ ಭೂಮಿಯಲ್ಲಿ ರೈತರು ಈಗಾಗಲೇ ಅಲಸಂದೆ, ಉದ್ದು, ಹೆಸರು, ಮುಸುಕಿನ ಜೋಳ, ಸೂರ್ಯಕಾಂತಿ ಸೇರಿದಂತೆ ಇತರೆ ಬಿತ್ತನೆ ಬಿತ್ತಿದ್ದಾರೆ. ಕೃಷಿ ಇಲಾಖೆಯಿಂದ ರಿಯಾಯಿತಿ ದರದಲ್ಲಿ ರೈತ ಸಂಪರ್ಕ ಕೇಂದ್ರಗಳ ಮೂಲಕ ರೈತರಿಗೆ ಬಿತ್ತನೆ ಬೀಜ ವಿತರಣಾ ಕಾರ್ಯ ಈಗಾಗಲೇ ಆರಂಭವಾಗಿದೆ. ಸರ್ವೆ ನಂಬರ್ ಆಧಾರದ ಮೇಲೆ ರೈತರಿಗೆ ಕೃಷಿ ಇಲಾಖೆ ಎಫ್‌ಐಡಿ ಗುರುತಿನ ಸಂಖ್ಯೆ ನೀಡಿದೆ. ರೈತರು ಬಿತ್ತನೆ ಬೀಜ ಪಡೆಯುವ ವೇಳೆ ತಮ್ಮ ಎಫ್‌ಐಡಿ ಅಥವಾ ಅಧಾರ್ ಸಂಖ್ಯೆ ಹೇಳಿದರೆ, ಮೊಬೈಲ್ ಫೋನ್‌ನಲ್ಲಿ ಬರುವ ಓಟಿಪಿ ಸಂಖ್ಯೆ ಖಚಿತಪಡಿಸಿಕೊಂಡು ಬಿತ್ತನೆ ಬೀಜ ನೀಡಲಾಗುತ್ತಿದೆ.

ಮೈಸೂರು ಜಿಲ್ಲೆಯಲ್ಲಿ 90 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತದೆ. ಮುಂಗಾರಿನಲ್ಲಿ ಹೆಚ್ಚು ಮಳೆಯಾಗಿ ಜಲಾಶಯ ತುಂಬಲು ಆರಂಭವಾಗುವ ವೇಳೆಗೆ ಭತ್ತದ ಬೆಳೆಗೆ ಕಾಲುವೆಗಳ ಮೂಲಕ ನೀರು ಬಿಡಲಾಗುತ್ತದೆ. ಕೃಷಿ ಇಲಾಖೆ ನೀಡಿರುವ ಮಾಹಿತಿ ಪ್ರಕಾರ ಇನ್ನು ಒಂದು ತಿಂಗಳ ನಂತರ ಭತ್ತದ ನಾಟಿ ಆರಂಭವಾಗಲಿದೆ. ಮೈಸೂರು ಜಿಲ್ಲೆಯಲ್ಲಿ 78 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೆಳೆಯಲಿದ್ದು, ಮತ್ತಷ್ಟು ಮಳೆಯಾದ ನಂತರ ರಾಗಿ ಬಿತ್ತನೆ ಕಾರ್ಯವನ್ನು ರೈತರು ಆರಂಭಿಸಲಿದ್ದಾರೆ.

ಈ ಬಾರಿ ಹದವಾದ ಮಳೆ, ಉತ್ತಮ ಇಳುವರಿ ನಿರೀಕ್ಷೆ

ಮೈಸೂರು ಜಿಲ್ಲೆಯಲ್ಲಿ ಈಗಾಗಲೇ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದು, ಇದು ಎಲ್ಲಾ ರೀತಿಯ ಬೆಳೆಗೆ ಹದವಾದ ಮಳೆಯಾಗಿದೆ. ಮೈಸೂರು ಜಿಲ್ಲೆಯಲ್ಲಿ ಮಾರ್ಚ್ ಮತ್ತು ಏಪ್ರಿಲ್ ವೇಳೆಗೆ 163.4 ಮಿಲಿ ಮೀಟರ್ ಮಳೆಯಾಗಬೇಕು. ಆದರೆ 2 ತಿಂಗಳ ಅವಧಿಯಲ್ಲಿ 188 ಮಿಲಿ ಮೀಟರ್ ಮಳೆಯಾಗಿದ್ದು, ವಾಡಿಕೆಗಿಂತ ಶೇ.12ರಷ್ಟು ಮಳೆ ಹೆಚ್ಚಾಗಿದೆ. ಇನ್ನು ಮೇ ತಿಂಗಳಲ್ಲಿ ಮೇ 1ರಿಂದ 22ರ ತನಕ 80 ಮಿಲಿ ಮೀಟರ್ ಮಳೆಯಾಗಬೇಕು. ಆದರೆ ಈಗ 173.55 ಮಿಲಿ ಮೀಟರ್ ಮಳೆಯಾಗಿದೆ. ಈ ಮೂಲಕ ಶೇಕಡ 112ರಷ್ಟು ಹೆಚ್ಚು ಮಳೆಯಾಗಿದೆ. ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದು, ಉತ್ತಮ ಇಳುವರಿಗೆ ಹದವಾದ ಮಳೆಯಾಗಿದೆ. ಈಗ ಬಿತ್ತನೆ ಬೀಜ ಮಾಡಿದ್ದು, ಇದೇ ರೀತಿ ಆಯಾ ಸಮಯಕ್ಕೆ ಅವಶ್ಯ ಮಳೆಯಾದರೆ ಈ ಬಾರಿ ಉತ್ತಮ ಇಳುವರಿ ಬರುತ್ತದೆ ಎಂಬ ವಿಶ್ವಾಸವಿದೆ.

ಮೈಸೂರು ಜಿಲ್ಲೆಯಲ್ಲಿ ಉತ್ತಮ ಕೃಷಿ ಚಟುವಟಿಕೆ ಹಾಗೂ ಹೆಚ್ಚು ಇಳುವರಿಗೆ ವಾರ್ಷಿಕ 837 ಮಿಲಿ ಮೀಟರ್ ಮಳೆಯಾಗಬೇಕು. ಹವಾಮಾನ ಇಲಾಖೆ ನೀಡಿರುವ ಮಾಹಿತಿ ಪ್ರಕಾರ ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗುತ್ತದೆ.

ಕಳೆದ ವರ್ಷ ಬರಗಾಲದಿಂದ ಭೂಮಿ ಬರಡಾಗಿತ್ತು. ಹಸಿರಿಲ್ಲದೆ ದನಕರುಗಳು ಮೇವಿಗಾಗಿ ಪರಿತಪಿಸುತ್ತಿದ್ದವು. ಆದರೆ ಈಗ ಉತ್ತಮ ಮಳೆಯಾಗುತ್ತಿರುವ ಕಾರಣ ಹಸಿರು ಚಿಗುರೊಡೆದಿದೆ. ರೈತಾಪಿ ವರ್ಗ ಉಲ್ಲಾಸಿತರಾಗಿದ್ದಾರೆ.

83 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು

"ಬಿತ್ತನೆ ಬೀಜದಂತೆ ಸಮರ್ಪಕವಾಗಿ ರಸಗೊಬ್ಬರವನ್ನು ಸರಬರಾಜು ಮಾಡಲಾಗುವುದು ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಚಂದ್ರಶೇಖರ್ ಭರವಸೆ ನೀಡಿದ್ದಾರೆ. ಮೈಸೂರು ಜಿಲ್ಲೆಯ ಕೃಷಿಗೆ ಅವಶ್ಯವಿರುವಷ್ಟು 83 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಮಾಡಲಾಗಿದೆ. ರೈತರಿಗೆ ಅವಶ್ಯ ಸಮಯದಲ್ಲಿ ರಸಗೊಬ್ಬರ ವಿತರಣೆ ಮಾಡಲಾಗುವುದು ಎಂದರು. ಯೂರಿಯಾ, ಡಿಎಪಿ ಹಾಗೂ ಕಾಂಪ್ಲೆಕ್ಸ್ ಗೊಬ್ಬರ ದಾಸ್ತಾನು ಮಾಡಲಾಗಿದೆ. ಇದರಿಂದ ರೈತರಿಗೆ ರಸಗೊಬ್ಬರಕ್ಕೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ತಿಳಿಸಿದರು.

ಸಮುದಾಯದ ಸಂಘಟನೆಗೆ ಯುವಕರು ಮುಂದಾಗಲಿ

ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ ಕಿವಿಮಾತು



ಮೈಸೂರು, ಮೇ 23– ವಿಪ್ರ ಸಮುದಾಯದ ಸಂಘಟನೆಗೆ ತಮ್ಮೊಳಗಿನ ಭೇದ ಭಾವಗಳನ್ನು ಮರೆತು ಎಲ್ಲರೂ ಸಮಾನಮನಸ್ಕರಾಗಬೇಕು ಹಾಗೂ ವಿಪ್ರ ಯುವಕರು ಸಂಘಟಕರಾಗಿ ಹೆಚ್ಚು ಸಮಯ ತೊಡಗಿಸಿಕೊಳ್ಳಬೇಕು ಎಂದು ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ ಕಿವಿಮಾತು ಹೇಳಿದರು.

ನಗರದ ಚಾಮುಂಡಿಪುರಂನಲ್ಲಿರುವ ಅಪೂರ್ವ ಹೋಟೆಲ್ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ನಡೆದ ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘದ ಜಿಲ್ಲಾಧ್ಯಕ್ಷರಾಗಿ ನೇಮಕಗೊಂಡ ಮುಳ್ಳೂರು ಗುರುಪ್ರಸಾದ್ ಅವರನ್ನು ಅಭಿನಂದಿಸಿ, ಮಾತನಾಡಿದರು.

ಹಿರಿಯ ಸಮಾಜ ಸೇವಕರಾದ ಕೆ ರಘುರಾಮ್ ವಾಜಪೇಯಿ ಮಾತನಾಡಿ, ದೀಪದಿಂದ ದೀಪ ಹಚ್ಚುವ ಕೆಲಸವಾಗಬೇಕು. ಬ್ರಾಹ್ಮಣ ಧರ್ಮಸಹಾಯ ಸಭಾದ ಮೂಲಕ ಆರಂಭಗೊಂಡ ಸಂಘಟನೆ ಬಿ.ಎನ್.ವಿ.ಸುಬ್ರಹ್ಮಣ್ಯ ನೇತೃತ್ವದಲ್ಲಿ ಮೈಸೂರು ವಲಯ ಸಮಾವೇಶ, ಜಿಲ್ಲಾ ಸಮಾವೇಶ, ಸಮಾವೇಶದಿಂದಾಗಿ, ಸರ್ಕಾರದಿಂದ ಉತ್ತಮ ನಿವೇಶನ ದೊರಕಿತು. ತ್ರಿಮತಸ್ಥರು ಒಂದಾಗಬೇಕು. ಬೇರೆಯವರಿಗೆ ಒಗ್ಗಟ್ಟಿನ ಕಾರ್ಯತಂತ್ರ ದಾರಿ ಹೇಳಿಕೊಟ್ಟು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು. ಸರಿಯಾದ ನಾಯಕತ್ವ ದೊರಕದ ಕಾರಣ ರಾಷ್ಟ್ರಮಟ್ಟದಲ್ಲಿ ಯಶಸ್ವಿಯಾಗಲಿಲ್ಲ. ಹಿರಿಯರ ಮಾರ್ಗದರ್ಶನದಲ್ಲಿ ಸಂಘಟನೆಯ ಕೆಲಸವಾಗಬೇಕು ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠ ಕುಮಾರ್, ಹೊಯ್ಸಳ ಕರ್ನಾಟಕದ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ ಮಾತನಾಡಿದರು. ಕಾರ್ಯಕ್ರಮಕ್ಕೂ ಮೊದಲು ಇತ್ತೀಚೆಗೆ ನಿಧನರಾದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಹಿರಿಯಣ್ಣಸ್ವಾಮಿ ಅವರಿಗೆ ಸಂತಾಪ ಸಲ್ಲಿಸಲಾಯಿತು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಎಂ.ಆರ್. ಬಾಲಕೃಷ್ಣ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್‌ಶಾಸ್ತ್ರಿ, ಅಪೂರ್ವ ಸುರೇಶ್, ವೆಂಕಟಸುಬ್ಬಯ್ಯ, ಹಿರಿಯ ಪತ್ರಕರ್ತರಾದ ರಂಗನಾಥ್, ಸಚಿಂದ್ರ, ಚಕ್ರಪಾಣಿ, ಶ್ರೀಕಾಂತ್ ಕಶ್ಯಪ್, ಹೊಯ್ಸಳ ಕರ್ನಾಟಕದ ಸಹಕಾರ್ಯದರ್ಶಿ ವಿಜಯಕುಮಾರ್, ನಿರ್ದೇಶಕರಾದ ರಂಗನಾಥ್, ಸುಧೀಂದ್ರ, ಅಶ್ವಿನ್, ಎಸ್.ಎನ್.ರಾಜೇಶ್ ಇನ್ನಿತರ ಪದಾಧಿಕಾರಿಗಳು ಹಾಜರಿದ್ದರು.

ಬೆಳ್ಳಂಬೆಳಗ್ಗೆ ಸರಸ್ವತಿಪುರಂನಲ್ಲಿ ಮಹಿಳೆಯ ಸರ ಕಳವು

ಮೈಸೂರು, ಮೇ 23(ಎಸ್‌ಬಿಡಿ)– ಬೆಳ್ಳಂಬೆಳಗ್ಗೆ ಅಂಗಡಿಗೆ ಹೋಗುತ್ತಿದ್ದ ಮಹಿಳೆಯ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ಸರಸ್ವತಿಪುರಂನಲ್ಲಿ ಬುಧವಾರ ನಡೆದಿದೆ.

ಟೆಲಿಕಾಂ ಬಡಾವಣೆ ನಿವಾಸಿ ಮಧುರಾ ಅವರು ಸಮಯ ಪ್ರಜ್ಞೆಯಿಂದ ಅರ್ಧ ಸರ ಉಳಿಸಿಕೊಂಡಿದ್ದಾರೆ. ಬುಧವಾರ ಬೆಳಗ್ಗೆ 8 ಗಂಟೆ ವೇಳೆಯಲ್ಲಿ ಮನೆಯಿಂದ ಅಂಗಡಿಗೆ ನಡೆದುಕೊಂಡು ಹೋಗುತ್ತಿದ್ದಾಗ ಬೈಕ್‌ನಲ್ಲಿ ಬಂದ ಸುಮಾರು 30 ವರ್ಷದ ವ್ಯಕ್ತಿ, ಏಕಾಏಕಿ ಮಧುರಾ ಅವರ ಕತ್ತಿನಲ್ಲಿದ್ದ ಸರ ಕೀಳಲು ಯತ್ನಿಸಿದ್ದಾನೆ. ಎಚ್ಚೆತ್ತುಕೊಂಡ ಮಧುರಾ ಅವರು ಸರವನ್ನು ಬಿಗಿಯಾಗಿ ಹಿಡಿದುಕೊಂಡಿದ್ದರಿಂದ ಅರ್ಧ ಸರ ಮಾತ್ರ ಕಳ್ಳನ ಪಾಲಾಗಿದೆ. ಅದು ಸುಮಾರು 30 ಗ್ರಾಂ ಇರಬಹುದು ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಳ್ಳನ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಇನ್ಸ್‌ಪೆಕ್ಟರ್ ಪುರುಷೋತ್ತಮ್ ತಿಳಿಸಿದ್ದಾರೆ.

ಮಂಗಗಳಿಗೂ ಮೊಬೈಲ್ ಫೋನ್ ಕ್ರೇಜ್...!?

ಚಾಮುಂಡಿ ಬೆಟ್ಟದ ತಪ್ಪಲಲ್ಲಿ ಭಕ್ತರ ಮೊಬೈಲ್ ಫೋನ್ ಕಸಿದು ಚೇಷ್ಟೆ



ಮೈಸೂರು, ಮೇ23(ಬಿಎಲ್‌ಯು)– ಮೊಬೈಲ್ ಫೋನ್ ಕ್ರೇಜ್ ಈ ತನಕ ಮನುಷ್ಯರಲ್ಲಿ ಮಾತ್ರ ಇದೆ ಅಂದುಕೊಂಡಿದ್ದೆವು. ಆದರೆ ಮಂಗಗಳಿಗೂ ಮೊಬೈಲ್ ಫೋನ್ ಅಂದರೆ ಕ್ರೇಜ್. ಮೈಸೂರಿನ ಚಾಮುಂಡಿಬೆಟ್ಟದ ಪಾದದ ಬಳಿ ಭಕ್ತರೊಬ್ಬರ ಪರ್ಸ್‌ನಲ್ಲಿದ್ದ ಮೊಬೈಲ್ ಫೋನ್ ಎಗರಿಸಿದ ಮಂಗವೊಂದು ಭಕ್ತರಿಗೆ ಫಜೀತಿ ತಂದಿಟ್ಟ ಘಟನೆ ಇಂದು ಬೆಳಿಗ್ಗೆ ನಡೆದಿದೆ.

ಹಾಸನದ ಕುಟುಂಬವೊಂದು ಇಂದು ಬೆಳಿಗ್ಗೆ ಮೆಟ್ಟಿಲುಗಳ ಮೂಲಕ ಚಾಮುಂಡಿ ಬೆಟ್ಟಕ್ಕೆ ಹೋಗಲು ಬಂದಿದೆ. ಈ ಸಂದರ್ಭದಲ್ಲಿ ಇನ್ನೇನು ಮೆಟ್ಟಿಲು ಹತ್ತಲು ಆರಂಭಿಸಬೇಕು ಎನ್ನುವಷ್ಟರಲ್ಲಿ ಮಹಿಳೆಯೊಬ್ಬರ ಪರ್ಸ್ ಅನ್ನು ಮಂಗ ಕಸಿದಿದೆ.

ಪರ್ಸ್ ಅನ್ನು ಕಿತ್ತುಕೊಂಡು ಮರವೇರಿದ ಮಂಗ ಚೇಷ್ಟೆ ಶುರು ಮಾಡಿದೆ. ಪರ್ಸ್ ತೆಗೆದು ಅದರಲ್ಲಿದ್ದ ಹಣ ಸೇರಿದಂತೆ ಒಂದೊಂದೇ ವಸ್ತುವನ್ನು ಕೆಳಗೆ ಬಿಸಾಡಿದೆ. ಕಡೆಗೆ ಪರ್ಸ್‌ನಲ್ಲಿದ್ದ ಮೊಬೈಲ್ ಕಂಡ ಕೂಡಲೇ ಪರ್ಸ್ ಅನ್ನೇ ಕೆಳಗೆ ಎಸೆದಿದೆ. ಆದರೆ ಚಾಲಾಕಿ ಕೋತಿ ಮೊಬೈಲ್ ಕೆಳಗೆ ಬೀಸಾಡದೇ ಅದನ್ನು ಕೈಯ್ಯಲ್ಲಿಡಿದುಕೊಂಡು ಕೊಂಬೆಯಿಂದ ಕೊಂಬೆಗೆ ನೆಗೆದಿದೆ.

ಈ ಸಂದರ್ಭದಲ್ಲಿ ಬಾಳೆ ಹಣ್ಣು, ಬಿಸ್ಕೆಟ್ ಆಮಿಷ ತೋರಿದರೂ ಬಗ್ಗಲಿಲ್ಲ. ಆದರೆ ಮೊಬೈಲ್ ಫೋನ್ ಮಾತ್ರ ಬೀಸಾಡಲಿಲ್ಲ. ಕಪಿರಾಯನ ಚೇಷ್ಟೆಯಿಂದ ಭಕ್ತರ ಕುಟುಂಬ ಕಿರಿಕಿರಿ ಅನುಭವಿಸಿದೆ.

ಸುಮಾರು ಅರ್ಧ ಗಂಟೆಯಾದರೂ ಮಂಗ ಮೊಬೈಲ್ ಬಿಡಲಿಲ್ಲ. ಫೋನ್ ಹಿಡಿದು ಕೊಂಬೆಯಿಂದ ಕೊಂಬೆಗೆ ನೆಗೆಯುತ್ತಲೇ ಇತ್ತು. ಮಂಗನ ಆಟ ನೋಡಿ ಮಹಿಳೆ ಕಕ್ಕಾಬಿಕ್ಕಿಯಾದರು. ಸಾವಿರಾರು ರೂಪಾಯಿ ಮೌಲ್ಯದ ಫೋನ್ ಹಾಳಾಗುವುದಲ್ಲ ಎಂದು ಚಿಂತೆಗೆ ಬಿದ್ದರು.

ಫೋನ್ ರಿಂಗ್ ಆದರೆ ಆ ಶಬ್ಧಕ್ಕಾದರೂ ಗಾಬರಿಯಾಗಿ ಮೊಬೈಲ್ ಕೆಳಗೆ ಬೀಳಿಸಬಹುದು ಎಂದು ಆ ಪ್ರಯತ್ನವನ್ನೂ ಮಾಡಿದರು. ಫೋನ್ ರಿಂಗ್ ಆಗುವುದನ್ನು ತಿರುವು–ಮುರುವು ಹಾಕಿ ಅದನ್ನು ನೋಡುತ್ತಿತ್ತೇ ಹೊರತು ಕೆಳಗೆ ಕೈಬಿಡಲಿಲ್ಲ.

ಕಡೆಗೆ ಅದಕ್ಕೆ ಏನು ಅನಿಸಿತೊ ಏನೊ ಅರ್ಧ ಗಂಟೆ ತರುವಾಯ ಮೊಬೈಲ್ ಫೋನ್ ಕೈಬಿಟ್ಟಿದೆ. ಕೆಳಗೆ ಬಿದ್ದ ರಭಸಕ್ಕೆ ಸ್ಕ್ರೀನ್ ಒಡೆದಿದೆ. ಸದ್ಯ ಮೊಬೈಲ್ ಸಿಕ್ತಲ್ಲಾ ಎಂದು ಮಹಿಳೆ ಮೆಟ್ಟಿಲು ಮೂಲಕ ಚಾಮುಂಡಿಬೆಟ್ಟಕ್ಕೆ ತೆರಳಿದರು. ಮಂಗನ ಕೈಗೆ ಮಾಣಿಕ್ಯ ಸಿಕ್ಕರೆ ಏನಾಗುತ್ತೆ ಎಂಬ ಗಾದೆ ಮಾತಿದೆ. ಆದರೆ ಮೊಬೈಲ್ ಸಿಕ್ಕರೆ ಏನೆಲ್ಲಾ ಮಾಡಬಹುದು ಎಂಬುದನ್ನು ಈ ಮಂಗ ಮಾಡಿ ತೋರಿಸಿತು.

ಪ್ರೊ.ಮಾದಯ್ಯರಿಂದ ಮೈವಿವಿಯಲ್ಲಿ ಶೈಕ್ಷಣಿಕ ಕ್ರಾಂತಿ

- ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಬಣ್ಣನೆ
- ಮಹಾರಾಜ ಕಾಲೇಜು ಸ್ನಾತಕ ಗ್ರಂಥಾಲಯದಲ್ಲಿ ನುಡಿ ನಮನ



ಮೈಸೂರಿನ ಮಹಾರಾಜ ಕಾಲೇಜು ಸ್ನಾತಕ ಗ್ರಂಥಾಲಯದಲ್ಲಿ ಗುರುವಾರ ನುಡಿನಮನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮೈಸೂರು, ಮೇ 23– ಪ್ರೊ.ಎಂ. ಮಾದಯ್ಯನವರು ಕುಲಪತಿಗಳಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ಕ್ರಾಂತಿಯನ್ನೇ ನಡೆಸಿದರು ಎಂದು ಮೈವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಸ್ಮರಿಸಿದರು.

ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಹಾಗೂ ಮೈವಿವಿ ಸ್ನಾತಕ ಗ್ರಂಥಾಲಯವು ಮಹಾರಾಜ ಕಾಲೇಜು ಸ್ನಾತಕ ಗ್ರಂಥಾಲಯದಲ್ಲಿ ಗುರುವಾರ ಏರ್ಪಡಿಸಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಖಾಲಿ ಹುದ್ದೆಗಳ ನೇಮಕಾತಿ, ಶೈಕ್ಷಣಿಕ ಗುಣಮಟ್ಟದ ಮಾದಯ್ಯನವರ ಕಾಲದಲ್ಲಿ ಕ್ರಾಂತಿಯೇ ಆಯಿತು. ಇದರಿಂದ ಮೈಸೂರು ವಿವಿಗೆ ಒಳ್ಳೆಯ ಹೆಸರು ಬಂದಿತು. ಮತ್ತೆ ಆ ದಿನಗಳು ಬರುವ ರೀತಿಯಲ್ಲಿ ಕೆಲಸ ಮಾಡಬೇಕಿದೆ. ನಾನು ಕೂಡ ಅವರು ಸಾಗಿದ ದಾರಿ ಅನುಸರಿಸಲು ಪ್ರಯತ್ನಿಸುತ್ತಿದ್ದೇನೆ ಎಂದರು.

ಮಾನಸಗಂಗೋತ್ರಿಯಲ್ಲಿ ಸೆನೆಟ್ ಭವನ, ಗಂಗೋತ್ರಿ ಗ್ಲೇಡ್ಸ್ ನಿರ್ಮಾಣಕ್ಕೆ ಮಾದಯ್ಯ ಅವರು ಕಾರಣ. ಅದೇ ರೀತಿ ಹಾಸನ, ಮಂಡ್ಯ ಸ್ನಾತಕೋತ್ತರ ಕೇಂದ್ರಗಳನ್ನು ಆರಂಭಿಸಿ, ಈಗ ಅವು ವಿವಿಗಳಾಗಿವೆ. ಕರ್ನಾಟಕ ರಾಜ್ಯ ಮುಕ್ತ ವಿವಿ ಕೂಡ ಅವರು ಕುಲಪತಿಯಾಗಿದ್ದ ಅವಧಿಯಲ್ಲಿಯೇ ಮೈಸೂರು ವಿವಿಯಿಂದ ಪ್ರತ್ಯೇಕಗೊಂಡಿತು ಎಂದು ಹೇಳಿದರು.

ಇಂದಿನ ವಿದ್ಯಾರ್ಥಿಗಳು ಪ್ರೊ.ಮಾದಯ್ಯ ಅವರನ್ನು ಆದರ್ಶವಾಗಿಟ್ಟುಕೊಂಡು ಸಾಧನೆ ಮಾಡಬೇಕು. ಹಳ್ಳಿಯಲ್ಲಿ ಹುಟ್ಟಿದ ಅವರು ಖ್ಯಾತ ಅರ್ಥಶಾಸ್ತ್ರಜ್ಞರಾಗಿದ್ದು ಹೇಗೆ? ಎಂಬುದನ್ನು ಅರಿಯಬೇಕು ಎಂದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ನನಗೆ ಪ್ರೊ.ಮಾದಯ್ಯ ಅವರು ಚಿಕ್ಕಂದಿನಿಂದಲೂ ಗೊತ್ತಿತ್ತು. ನಮ್ಮ ತಂದೆ ಕೂಡ ಸಹಾಯಕ ಗ್ರಂಥಪಾಲಕರಾಗಿ ಕೆಲಸ ಮಾಡುತ್ತಿದ್ದರು. ಅವರ ನಿಧನಾನಂತರ ಪ್ರೊ.ಮಾದಯ್ಯ ಅವರು ನನಗೆ ಅನುಕಂಪದ ಆಧಾರದ ಮೇಲೆ ನೌಕರಿ ನೀಡಿದರು. ಇವತ್ತು ಕೂಡ ನಮ್ಮ ತಾಯಿಗೆ ವಿವಿಯಿಂದ ಪಿಂಚಣಿ ಬರುತ್ತಿದೆ. ಹೀಗಾಗಿ ನಾವು ಮೈಸೂರು ವಿವಿಯ ಋಣದಲ್ಲಿದ್ದೇವೆ ಎಂದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ನಾನು ಶಾಸಕನಾಗಿ ಆಯ್ಕೆಯಾದಾಗ ಪ್ರೊ.ಮಾದಯ್ಯ ಅವರು ಕರೆ ಮಾಡಿ, ಶೈಕ್ಷಣಿಕವಾಗಿ ಮೈಸೂರು ವಿವಿ ಹಾಗೂ ಮೈಸೂರು ಅಭಿವೃದ್ಧಿಗೆ ಕೆಲಸ ಮಾಡುವಂತೆ ಸಲಹೆ ಮಾಡಿದರು. ಅವರು ಯಾವಾಗಲೂ ಶೈಕ್ಷಣಿಕವಾಗಿಯೇ ಆಲೋಚಿಸುತ್ತಿದ್ದರು. ಮಾದಯ್ಯ ಅವರು ತಮ್ಮ ಅಧಿಕಾರಾವಧಿಯಲ್ಲಿ ಬಸವಣ್ಣನವರಂತೆ ಎಲ್ಲರನ್ನು ಸಮನಾಗಿ ಕಂಡು, ಕೆಲಸ ಮಾಡಿದ್ದಾರೆ ಎಂದರು.

ಗಾಂಧಿ ಭವನ ಹಾಗೂ ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿವೃತ್ತ ನಿರ್ದೇಶಕ ಪ್ರೊ.ಎಸ್.ಶಿವರಾಜಪ್ಪ ಮಾತನಾಡಿ, ಪ್ರೊ.ಮಾದಯ್ಯ ಅವರ ಅಧಿಕಾರಾವಧಿಯಲ್ಲಿ ಇಡೀ ದಕ್ಷಿಣ ಭಾರತದಲ್ಲಿಯೇ ಯಾವುದೇ ಬ್ಲ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇಲ್ಲದಂತೆ ಭರ್ತಿ ಮಾಡಿದ ಮೊದಲಿಗರು ಎನಿಸಿದರು. ಆ ಮೂಲಕ ಶೋಷಿತರಿಗೆ ನ್ಯಾಯ ಒದಗಿಸಿದರು ಎಂದರು.

ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಮೈಸೂರು ವಿವಿ ಅಮೃತ ಮಹೋತ್ಸವದಲ್ಲಿ ಡಾ.ಮನಮೋಹನ ಸಿಂಗ್ ಭಾಗಿಯಾಗಿದ್ದರು. ಇದಕ್ಕೆ ಪ್ರೊ.ಮಾದಯ್ಯ ಅವರ ಸ್ನೇಹವೇ ಕಾರಣ ಎಂದರು. ಯುವರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಎಂ.ಕೆ.ಮಹೇಶ್, ವಿವಿ ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ.ಮಹದೇವಮೂರ್ತಿ, ವಿಶ್ವಮಾನವ ನೌಕರರ ವೇದಿಕೆ ಅಧ್ಯಕ್ಷ ಬಿ.ವಾಸುದೇವ ಇತರರಿದ್ದರು. ಗ್ರಂಥಪಾಲಕ ವೈ.ಎಲ್.ಸೋಮಶೇಖರ್ ಪ್ರಾಸ್ತಾವಿಕ ಭಾಷಣ ಮಾಡಿದರು. ತಾಂತ್ರಿಕ ಸಹಾಯಕ ಅರುಣ್ ಸ್ವಾಗತಿಸಿ, ನಿರೂಪಿಸಿದರೆ, ಕವಿತಾ ವಂದಿಸಿದರು. ವಿವಿ ವಿದ್ಯಾರ್ಥಿಗಳು, ಸಂಶೋಧಕರು ಭಾಗವಹಿಸಿದ್ದರು.

ತಂದೆ–ತಾಯಿಯ ವೃದ್ಧಾಶ್ರಮಕ್ಕೆ ಸೇರಿಸಿ ಕಲ್ಲು ದೇವರ ಪೂಜಿಸಿ ಏನು ಫಲ!

ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ.ಕುಂಬಾರ ಆಕ್ರೋಶ



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿ ಕಾರ್ಯಕ್ರಮವನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಡಿ.ಕುಂಬಾರ ಉದ್ಘಾಟಿಸಿದರು.

ಮೈಸೂರು, ಮೇ23(ಬಿಎಲ್‌ಯು)– ಇತ್ತೀಚಿನ ದಿನಗಳಲ್ಲಿ ತಂದೆ–ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸಿ, ಕಲ್ಲು ದೇವರನ್ನು ಪೂಜಿಸಿ ಏನು ಫಲ ಪಡೆಯಲು ಸಾಧ್ಯ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಬಿ.ಡಿ.ಕುಂಬಾರ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ನಡೆದ ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹೀಗೆ ತಂದೆ ತಾಯಿ ಬಗ್ಗೆ ಪ್ರೀತಿ–ವಾತ್ಸಲ್ಯ, ಗೌರವ ಇಲ್ಲದವರು ಬಸವಣ್ಣ ಸೇರಿದಂತೆ ಶರಣರ ವಚನಗಳ ಸಾರವನ್ನು ಅರಿಯಬೇಕು ಎಂದು ಸಲಹೆ ನೀಡಿದರು.

ಅಸಮಾನತೆಯ ಸಮಾಜ ನಿರ್ಮಾಣ ಗಟ್ಟಿಯಾಗಿದ್ದ ಸಮಯದಲ್ಲಿ 12ನೇ ಶತಮಾನದಲ್ಲೇ ಬಸವಣ್ಣನವರು ಸಮಾನತೆಯ ಸಮಾಜಕ್ಕಾಗಿ ಕ್ರಾಂತಿ ಮಾಡಿದರು. ಬಸವಣ್ಣನವರು ಸೇರಿದಂತೆ ಶರಣರ ವಚನಗಳಿಂದ ಇಂದು ಸಮಾನತೆಯ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ ಎಂದು ಅಭಿಪ್ರಾಯಪಟ್ಟರು.

ಬಸವಣ್ಣ ಸೇರಿದಂತೆ ಶರಣರ ವಚನಗಳು ಸಾಮಾಜಿಕ ಬದಲಾವಣೆಯ ಚಳವಳಿಯ ದರ್ಶನ ಮಾಡಿಸುತ್ತಿವೆ. ಈ ಮೂಲಕ ಸಮಾನತೆಯ ಸಮಾಜ ನಿರ್ಮಾಣದ ಬಗ್ಗೆ ಪರಿಣಾಮಕಾರಿ ಅರಿವು ಮೂಡುತ್ತಿವೆ ಎಂದು ಹೇಳಿದರು.

ಮೌಢ್ಯತೆ ಹೆಚ್ಚಾಗಿದ್ದ ಸಂದರ್ಭದಲ್ಲಿ ಶರಣ ವಚನಗಳು ಸತ್ಯವನ್ನು ಸಾರಿ ಹೇಳಿತು. ಇದರಿಂದ ಸಮಾನತೆಯ ಸಮಾಜ ನಿರ್ಮಾಣಕ್ಕೆ ಚಳವಳಿಗಳು ಜೀವ ಪಡೆದವು ಎಂದು ಪ್ರೊ.ಕುಂಬಾರ ತಿಳಿಸಿದರು.


ಸಮಾನತೆಯ ಸಮಾಜ ನಿರ್ಮಾಣಕ್ಕೆ ಬಸವಣ್ಣ ಹಾಗೂ ಶರಣರ ವಚನಗಳನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗೆ ತಿಳಿಸಿ ಹೇಳುವ ಅವಶ್ಯವಿದೆ ಎಂದು ಕಾರ್ಯಕ್ರಮದ ಸಂಯೋಜಕ ಡಾ.ಎನ್.ಆರ್. ಚಂದ್ರೇಗೌಡ ಅಭಿಪ್ರಾಯಪಟ್ಟರು.

ಶರಣರ ಮೌಲ್ಯ ಅರಿವಾದಷ್ಟು ಜೀವನದ ಮೌಲ್ಯ ಯುವ ಪೀಳಿಗೆಗೆ ತಿಳಿಯುತ್ತದೆ ಎಂದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ್, ಪರೀಕ್ಷಾಂಗ ಕುಲಸಚಿವ ಡಾ.ಹೆಚ್.ವಿಶ್ವನಾಥ್, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ಲಕ್ಷ್ಮಿ, ಅಧ್ಯಯನ ಕೇಂದ್ರದ ಡೀನ್ ಪ್ರೊ.ನಾಮನಾಥಂ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶುಕ್ರವಾರ 24 ಮೇ 2024

ಸೂರಿಗಾಗಿ ಬೇಡುತ್ತಿರುವ ಹಿರಿಯ ಜೀವಗಳು

ಇಂದೋ, ನಾಳೆಯೋ ಬಿದ್ದು ಹೋಗುವ ಮನೆಯಲ್ಲೇ ವೃದ್ಧ ದಂಪತಿಯ ಬದುಕು





ಮಡಿಕೇರಿ, ಮೇ 23–ಇಂದೋ ಅಥವಾ ನಾಳೆಯೋ ಬಿದ್ದು ಹೋಗುವ ಆತಂಕದ ಮನೆಯಲ್ಲಿ ಜೀವ ಕೈಯಲ್ಲಿ ಹಿಡಿದು ಬದುಕುತ್ತಿರುವ ವೃದ್ಧ ದಂಪತಿ, ಒಂದೇ ಕೊಠಡಿಯಲ್ಲಿ ಗೃಹ ಬಳಕೆ ವಸ್ತುಗಳ ಸಹಿತ ಬದುಕುತ್ತಿರುವ 3 ಜೀವಗಳು, ಮಳೆಗಾಲಕ್ಕೂ ಮುನ್ನ ಸೂರು ನೀಡುವಂತೆ ಬೇಡುತ್ತಿವೆ ಹಿರಿಯ ಜೀವಗಳು.

ಹೌದು.. ಇಂತಹ ದೃಶ್ಯ ಕಂಡು ಬಂದಿದ್ದು, ನಗರದ ಅಪಾಯಕಾರಿ ಸ್ಥಳಗಳ ಪೈಕಿ ಮಂಗಳಾದೇವಿ ನಗರದ ರಾಘವನ್ ಪಿಳ್ಳೆ ಮತ್ತು ಸುಶೀಲ ವೃದ್ಧ ದಂಪತಿಯ ಮನೆ. ಮಳೆಗಾಲದಲ್ಲಿ ಇಲ್ಲಿನ ನಿವಾಸಿಗಳು ಆತಂಕದಿಂದಲೇ ಬದುಕು ಸಾಗಿಸುತ್ತಾರೆ.

2018ರ ಮಳೆಗಾಲದ ಪ್ರಕೃತಿ ವಿಕೋಪದ ಭೂ ಕುಸಿತ ಘಟನೆಯಿಂದ ಮಂಗಳಾದೇವಿ ನಗರದ ನಿವಾಸಿಗಳು ಕೂಡ ಸಂತ್ರಸ್ಥರಾಗಿದ್ದರು. ಪ್ರಕೃತಿ ವಿಕೋಪದ ಕಾರಣಗಳನ್ನು ಅಧ್ಯಯನ ನಡೆಸಿದ್ದ ಜಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾದ ವಿಜ್ಞಾನಿಗಳು ಕೂಡ ಮಂಗಳಾದೇವಿ ನಗರ ಸುರಕ್ಷಿತ ಅಲ್ಲ ಎಂದು ಜಿಲ್ಲಾಡಳಿತಕ್ಕೆ ವರದಿ ನೀಡಿದೆ.

ತೀರಾ ಇಳಿಜಾರಿನ ಬೆಟ್ಟದ ಸಾಲಿನಲ್ಲಿ ಜನವಸತಿ ಪ್ರದೇಶವಿದ್ದು, ಇದೇ ಸಾಲಿನಲ್ಲಿ ರಾಘವನ್ ಪಿಳ್ಳೆ ಮತ್ತು ಸುಶೀಲ ವೃದ್ಧ ದಂಪತಿಯ ಮನೆ ಇದೆ. 2018ರಲ್ಲಿ ಸಂಭವಿಸಿದ ಭೂ ಕುಸಿತದಲ್ಲಿ ಇವರ ಮನೆಗೂ ತೀರಾ ಹಾನಿಯಾಗಿತ್ತು. ಬಳಿಕ ಮಡಿಕೇರಿ ನಗರಸಭೆ, ಜಿಲ್ಲಾಡಳಿತಕ್ಕೂ ಮನವಿ ಸಲ್ಲಿಸಿದ್ದ ವೃದ್ಧ ದಂಪತಿ ಪ್ರಕೃತಿ ವಿಕೋಪ ಸಂತ್ರಸ್ಥರಿಗಾಗಿ ನಿರ್ಮಿಸುತ್ತಿರುವ ಮನೆಗಳ ಪೈಕಿ ತಮಗೂ ಒಂದು ಮನೆ ಮಂಜೂರು ಮಾಡುವಂತೆ ಅರ್ಜಿ ಸಲ್ಲಿಸಿದ್ದರು. ಆದರೆ, ಆಡಳಿತ ವ್ಯವಸ್ಥೆಯ ಜಡತ್ವ ಮತ್ತು ಇಚ್ಛಾಶಕ್ತಿಯ ಕೊರತೆಯಿಂದ ಇಂದಿಗೂ ಬಡ ಮತ್ತು ಸಂತ್ರಸ್ಥ ಕುಟುಂಬಕ್ಕೆ ಮನೆ ಮಂಜೂರಾಗಿಲ್ಲ.

ಬದುಕು ದುಸ್ತರ

ಮಳೆಗಾಲ ಈ ಮನೆಯಲ್ಲಿ ಉಳಿಯಲು ಅಸಾಧ್ಯವಾಗಿದೆ. ಈ ಕಾರಣದಿಂದ ಬಾಡಿಗೆ ಮನೆ ಹುಡುಕುವ ಸಂದರ್ಭ 25 ಸಾವಿರ ಮುಂಗಡ ಸಹಿತ ತಿಂಗಳಿಗೆ 5 ಸಾವಿರ ರೂ. ಬಾಡಿಗೆ ನೀಡುವಂತೆ ಮನೆಗಳ ಮಾಲೀಕರು ಕೇಳುತ್ತಾರೆ. ಕೂಲಿ ಮಾಡಿ ಬದುಕುವುದೇ ಕಷ್ಟವಾಗಿರುವ ಸಂದರ್ಭದಲ್ಲಿ ಇಷ್ಟು ಹಣವನ್ನು ಪಾವತಿಸಲು ಸಾಧ್ಯವೇ ಎಂದು ವೃದ್ಧ ದಂಪತಿ ರಾಘವನ್ ಪಿಳ್ಳೆ ಮತ್ತು ಸುಶೀಲ ಅಳಲು ತೋಡಿಕೊಂಡಿದ್ದಾರೆ. ಪ್ರಕೃತಿ ವಿಕೋಪ ಸಂತ್ರಸ್ಥರಿಗೆ ನಿರ್ಮಿಸಿರುವ ಮನೆಗಳ ಪೈಕಿ ಒಂದು ಮನೆಯನ್ನು ನಮ್ಮಂತಹ ಬಡ ಕುಟುಂಬಕ್ಕೆ ಜಿಲ್ಲಾ ಆಡಳಿತ ನೀಡುವಂತೆ ರಾಘವನ್ ಪಿಳ್ಳೆ ಹಾಗೂ ಸುಶೀಲ ದಂಪತಿ ಮನವಿ ಮಾಡಿದ್ದಾರೆ.

ಮಳೆಗಾಲದಲ್ಲಿ ಮನೆ ಉಳಿಯಲ್ಲ: ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಹಿಂದೆಯೇ ಶಿಥಿಲವಾಗಿದ್ದ ರಾಘವನ್ ಪಿಳ್ಳೆ ಮತ್ತು ಸುಶೀಲ ವೃದ್ಧ ದಂಪತಿಯ ಮನೆ ಇದೀಗ ಮತ್ತಷ್ಟು ಶೋಚನೀಯ ಸ್ಥಿತಿಗೆ ಹೊರಳಿದೆ. ಗೋಡೆಗಳ ಸಹಿತ ನೆಲದಲ್ಲೂ ಬಿರುಕು ಬಿಟ್ಟಿವೆ. ಮನೆಯ ಹಿಂಬದಿಯ ಬರೆ ಕುಸಿದು ಮರ ಸಹಿತ ಗೋಡೆಯ ಮೇಲೆ ಬಿದ್ದಿದ್ದು, ಇಟ್ಟಿಗೆಗಳು ಕುಸಿದು ಬಿದ್ದಿವೆ. ಮಳೆ ನೀರು ಮನೆ ಒಳಗೆ ಸೇರುತ್ತಿದೆ. ಮನೆಯ ಸದ್ಯದ ಪರಿಸ್ಥಿತಿ ನೋಡಿದರೆ, ಈ ಮಳೆಗಾಲದಲ್ಲಿ ಮನೆ ಉಳಿಯಬಹುದೇ ಎಂಬ ಸಂಶಯ ಮೂಡುತ್ತದೆ. ಇದೇ ಆತಂಕ ವೃದ್ಧ ದಂಪತಿಯನ್ನೂ ಕಾಡುತ್ತಿದ್ದು, ಜೀವ ಉಳಿಸಿಕೊಳ್ಳಲು ಸೂರು ನೀಡಿ ಎಂದು ಅಂಗಲಾಚುತ್ತಿದ್ದಾರೆ.

ವಿದ್ಯುತ್ ತಂತಿ ತಗುಲಿ ಕಾರ್ಮಿಕ ಸಾವು



ಗೋಣಿಕೊಪ್ಪ, ಮೇ 23– ತೋಟದಲ್ಲಿ ಕಬ್ಬಿಣದ ಏಣಿಗೆ ವಿದ್ಯುತ್ ತಂತಿ ತಗುಲಿ ಕಾರ್ಮಿಕ ಮೃತಪಟ್ಟಿರುವ ಘಟನೆ ನಿಡುಗುಂಬ ಗ್ರಾಮದಲ್ಲಿ ಗುರುವಾರ ನಡೆದಿದೆ. ಮೂಲತಃ ಹೆಚ್.ಡಿ.ಕೋಟೆ ನಿವಾಸಿ ಸಿದ್ದ (49) ಮೃತ ಕಾರ್ಮಿಕ. ಗ್ರಾಮದ ಪ್ರಶಾಂತ್ ಅವರ ತೋಟದಲ್ಲಿ ಕೆಲಸ ಮಾಡುತ್ತಿದ್ದ ಈತ ಪಪ್ಪಾಯ ಹಣ್ಣು ಕೊಯ್ದು ಏಣಿಯನ್ನು ಬೇರೆಡೆಗೆ ಸಾಗಿಸುತ್ತಿದ್ದಾಗ ವಿದ್ಯುತ್ ತಂತಿ ತಗುಲಿದೆ. ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶವವನ್ನು ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದ ಶವಾಗಾರದಲ್ಲಿ ಇರಿಸಲಾಗಿದೆ. ಈ ಸಂಬಂಧ ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಡಾನೆಯಿಂದ ತಪ್ಪಿಸಿಕೊಳ್ಳುವಾಗ ವಿದ್ಯಾರ್ಥಿಗೆ ಗಾಯ



ವಿರಾಜಪೇಟೆ, ಮೇ 23–ಕಾಲೇಜಿಗೆ ತೆರಳುತ್ತಿದ್ದ ವಿದ್ಯಾರ್ಥಿಯ ಮೇಲೆ ಕಾಡಾನೆ ದಾಳಿಗೆ ಮುಂದಾಗಿದ್ದು, ಈ ವೇಳೆ ಈತ ಪ್ರಾಣ ಉಳಿಸಿಕೊಳ್ಳಲು ಓಡಿ ಹೋಗುವಾಗ ಬಿದ್ದು ಗಾಯಗೊಂಡಿದ್ದಾನೆ.

ತಾಲೂಕಿನ ಚೆಂಬೆಬೆಳ್ಳೂರು ಗ್ರಾಮದ ಪುದುಕೋಟೆ ನಿವಾಸಿ ಹಾಗೂ ಗೋಣಿಕೊಪ್ಪಲಿನ ಕಾವೇರಿ ಕಾಲೇಜಿನ ಪದವಿ ವಿದ್ಯಾರ್ಥಿ ಜಿ.ಟಿ.ಚಂಗಪ್ಪ ಗಾಯಗೊಂಡು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದಾನೆ. ಈತ ಗುರುವಾರ ಬೆಳಗ್ಗೆ 7.30ರಲ್ಲಿ ಮನೆಯಿಂದ ಕಾಲೇಜಿಗೆ ಹೋಗಲು ಬಸ್‌ಗಾಗಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ದಿಢೀರ್ ಪ್ರತ್ಯಕ್ಷವಾದ ಕಾಡಾನೆ ದಾಳಿ ನಡೆಸಲು ಮುಂದಾಗಿದೆ. ಈ ವೇಳೆ ತಪ್ಪಿಸಿಕೊಳ್ಳಲು ಈತ ಓಡಿಹೋಗುತ್ತಿದ್ದಾಗ ಬಿದ್ದು ಕೈ, ಕಾಲು ಮತ್ತು ಸೊಂಟಕ್ಕೆ ಪೆಟ್ಟಾಗಿದೆ. ಎಸಿಎಫ್ ನೆಹರು ಹಾಗೂ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಬೇಟಿ ನೀಡಿ, ಪರಿಶೀಲಿಸಿದರು. ಬಳಿಕ ಗಾಯಾಳುವಿನ ಆರೋಗ್ಯ ವಿಚಾರಿಸಿದರು. ಈ ಭಾಗದಲ್ಲಿ ಅನೇಕ ದಿನಗಳಿಂದ ಬೀಡು ಬಿಟ್ಟಿರುವ ಕಾಡಾನೆಗಳು ಮರಿ ಆನೆಗಳೊಂದಿಗೆ ಸಂಚರಿಸುತ್ತಿವೆ. ಇದರಿಂದ ಭಯಗೊಂಡಿರುವ ಗ್ರಾಮಸ್ಥರು ಕೂಡಲೇ ಆನೆಗಳನ್ನು ಕಾಡಿಗೆ ಓಡಿಸುವಂತೆ ಒತ್ತಾಯಿಸಿದ್ದಾರೆ.

ಅಪರಿಚಿತ ವ್ಯಕ್ತಿಯಿಂದ ವಂಚನೆಗೆ ಯತ್ನ



ಸಿದ್ದಾಪುರ, ಮೇ 23– ಕಾಫಿ ತೋಟದ ಒಂಟಿ ಮನೆಗಳನ್ನೇ ಗುರಿಯಾಗಿಸಿಕೊಂಡು ಕಾರ್ಡ್ ಸ್ಕ್ರಾಚ್ ಮಾಡಿದರೆ ವಿಶೇಷ ಬಹುಮಾನ ಸಿಗಲಿದೆ ಎಂದು ನಂಬಿಸಿ, ವಂಚನೆ ಮಾಡಲು ಯತ್ನಿಸಿದ ಅಪರಿಚಿತ ವ್ಯಕ್ತಿಯನ್ನು ಬೆಳೆಗಾರರೊಬ್ಬರು ಪಾಲಿಬೆಟ್ಟದಲ್ಲಿ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮೂಕೊಂಡ ವಿಜು ಸುಬ್ರಮಣಿ ಅವರ ಮನೆಗೆ ಬೈಕ್‌ನಲ್ಲಿ ಬಂದ ಅಪರಿಚಿತ ವ್ಯಕ್ತಿ, ನೀವು ನನ್ನ ಬಳಿ 200 ರೂ.ನ ಆಫರ್ ಕಾರ್ಡ್ ಪಡೆದು ಸ್ಕ್ರಾಚ್ ಮಾಡಿದರೆ ಗ್ಯಾಸ್‌ಸ್ಟವ್ ಸೇರಿದಂತೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ವಿಶೇಷ ಬಹುಮಾನವಾಗಿ ನೀಡುವುದಾಗಿ ನಂಬಿಸಿದ್ದಾನೆ. ಆದರೆ, ಆತನ ವರ್ತನೆಯ ಬಗ್ಗೆ ಸಂಶಗೊಂಡ ವಿಜು ಸುಬ್ರಮಣಿ, ಈತನನ್ನು ಹಿಡಿದು ವಿಚಾರಿಸಿದಾಗ ಈತ ಹೆಸರು ಬದಲಿಸಿ ವಿರಾಜಪೇಟೆ ಮೂಲದವನು ಎಂದು ಹೇಳಿದ್ದಾನೆ.

ಬಳಿಕ ವಿಜು ಸುಬ್ರಮಣಿ, ಈತನ ಆಧಾರ್ ಕಾರ್ಡ್ ಸೇರಿದಂತೆ ಯಾವುದಾದಾರೂ ದಾಖಲಾತಿ ಕೊಡುವಂತೆ ಕೇಳಿದ್ದಾರೆ. ಆದರೆ, ಈತನ ಬಳಿ ಯಾವ ದಾಖಲಾತಿ ಇರಲಿಲ್ಲ. ಇದರಿಂದ ಈತ ವಂಚಕ ಎಂದು ತಿಳಿದು ಸಿದ್ದಾಪುರ ಠಾಣೆ ಪೊಲೀಸರಿಗೆ ತಿಳಿಸಿದ್ದಾರೆ. ನಂತರ ಸ್ಥಳಕ್ಕೆ ಆಗಮಿಸಿದ ಪೊಲೀಸರು, ಈತನನ್ನು ವಿಚಾರಿಸಿದ್ದಾರೆ. ಮೂಲತಃ ಈತ ಉತ್ತರ ಪ್ರದೇಶದವನು ಎಂದು ತಿಳಿದು ಬಂದಿದೆ. ಬಳಿಕ ಪೊಲೀಸರು ದಂಡ ವಿಧಿಸಿ ಕಳುಹಿಸಿದ್ದಾರೆ. ಮೂಕೊಂಡ ವಿಜು ಸುಬ್ರಮಣಿ ಮಾತನಾಡಿ, ಜಿಲ್ಲೆಯ ವಿವಿಧೆಡೆಗಳಲ್ಲಿ ಒಂಟಿ ಮನೆಗಳನ್ನೇ ಗುರಿಯಾಗಿಸಿಕೊಂಡು, ಆಸೆ ಆಮಿಷಗಳನ್ನು ಒಡ್ಡಿ ದರೋಡೆ ಸೇರಿದಂತೆ ಹಲವು ಘಟನೆಗಳು ಜಿಲ್ಲೆಯಲ್ಲಿ ನಡೆದಿವೆ. ವರ್ಷದ ಹಿಂದೆ ಪಾಲಿಬೆಟ್ಟದಲ್ಲೂ ದರೋಡೆ ಪ್ರಕರಣ ನಡೆದಿದೆ. ಆದ್ದರಿಂದ ಜಿಲ್ಲೆಯ ಜನರು ಹೊರ ಜಿಲ್ಲೆ, ರಾಜ್ಯಗಳಿಂದ ಆಗಮಿಸುವವರ ಬಗ್ಗೆ ನಿಗಾ ವಹಿಸಬೇಕೆಂದು ಮನವಿ ಮಾಡಿದ್ದಾರೆ.

ಜಿಲ್ಲಾ ಮಟ್ಟದ ಬಂಟರ ಕ್ರೀಡಾಕೂಟ ಮುಕ್ತಾಯ



ಜಿಲ್ಲಾ ಮಟ್ಟದ ಬಂಟರ ಕ್ರೀಡಾಕೂಟದ ಕ್ರಿಕೆಟ್‌ನಲ್ಲಿ ಪ್ರಥಮ ಸ್ಥಾನ ಪಡೆದ ಕೈಕೇರಿ ಯಂಗ್ ಬಂಟ್ಸ್ ಪ್ಯಾಂಥರ್ಸ್ ತಂಡ.

ವಿರಾಜಪೇಟೆ, ಮೇ 23–ನಗರದ ಸಂತ ಅನ್ನಮ್ಮ ವಿದ್ಯಾ ಸಂಸ್ಥೆಯ ಮೈದಾನದಲ್ಲಿ ಎರಡು ದಿನ ನಡೆದ ಜಿಲ್ಲಾ ಮಟ್ಟದ ಬಂಟರ ಕ್ರೀಡಾಕೂಟ ಮುಕ್ತಾಯವಾಗಿದ್ದು, ಕ್ರಿಕೆಟ್ ಪಂದ್ಯಾವಳಿಯಲ್ಲಿ ಕೈಕೇರಿಯ ಯಂಗ್ ಬಂಟ್ಸ್ ಪ್ಯಾಂಥರ್ಸ್ ತಂಡ ಪ್ರಥಮ ಬಹುಮಾನ ಪಡೆದುಕೊಂಡಿದೆ.

ಫೈನಲ್‌ನಲ್ಲಿ ಯಂಗ್ ಬಂಟ್ಸ್ ಪ್ಯಾಂಥರ್ಸ್ ತಂಡ 19 ರನ್‌ಗಳಿಂದ ಮಡಿಕೇರಿಯ ಚಕ್ರವರ್ತಿ ತಂಡವನ್ನು ಮಣಿಸಿ, ಪ್ರಶಸ್ತಿ ಗಳಿಸಿತು. ದಿಕ್ಷೀತ್ ಸರಣಿ ಶ್ರೇಷ್ಠ, ಶರತ್ ಉತ್ತಮ ಬ್ಯಾಟ್ಸಮನ್, ಜಯಂತ್ ರೈ ಉತ್ತಮ ಬೌಲರ್ ಹಾಗೂ ಗಗನ್ ಆಳ್ವಾ ಪಂದ್ಯ ಶ್ರೇಷ್ಠ ಪ್ರಶಸ್ತಿ ಗಳಿಸಿದರು.

ಮಹಿಳೆಯರ ಥ್ರೋಬಾಲ್‌ನಲ್ಲಿ ಮಡಿಕೇರಿಯ ತಂಡ ಮೊದಲು ಹಾಗೂ ನೀಲಿಮಾಡು ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿತು. ಪುರುಷರ ಹಗ್ಗಜಗ್ಗಾಟ ಸ್ಪರ್ಧೆಯಲ್ಲಿ ಮಡಿಕೇರಿಯ ಚಕ್ರವರ್ತಿ ತಂಡ ಮೊದಲ ಮತ್ತು ವಿರಾಜಪೇಟೆಯ ಮಲ್ನಾಡು ಬಂಟ್ಸ್ ತಂಡ ದ್ವಿತೀಯ ಸ್ಥಾನ ಗಳಿಸಿತು.

ಮಹಿಳೆಯರ ವಿಭಾಗದಲ್ಲಿ ನಾಪೋಕ್ಲು ತಂಡ ಪ್ರಥಮ ಹಾಗೂ ಮಡಿಕೇರಿ ತಂಡ ದ್ವಿತೀಯ ಸ್ಥಾನ ಮತ್ತು ಪುರುಷರ ಗುಂಡು ಎಸೆತ ಸ್ಪರ್ಧೆಯಲ್ಲಿ ರಮೇಶ್ ರೈ ಪ್ರಥಮ, ಗಗನ್ ಆಳ್ವಾ ದ್ವಿತೀಯ ಹಾಗೂ ರಂಜಿತ್ ಶೆಟ್ಟಿ ತೃತೀಯ ಸ್ಥಾನ ಗಳಿಸಿದರು. ಮಹಿಳೆಯರ ವಿಭಾಗದಲ್ಲಿ ಶುಭಾ ಶೆಟ್ಟಿ ಪ್ರಥಮ, ರಾಶಿ ದ್ವಿತೀಯ ಹಾಗೂ ಭೂಮಿಕಾ ತೃತೀಯ ಸ್ಥಾನ ಪಡೆದರು.

ಮಕ್ಕಳ ಬಾಂಬ್ ಬ್ಲಾಸ್ಟಿಂಗ್ ಸ್ಪರ್ಧೆಯಲ್ಲಿ ತಾನ್ಯ ರೈ ಪ್ರಥಮ, ಆತ್ಮಿಕ ರೈ ದ್ವಿತೀಯ ಹಾಗೂ ಸುಜಾತ ರೈ ತೃತೀಯ ಹಾಗೂ ಕಪ್ಪೆಜಿಗಿತದಲ್ಲಿ ವಿಹಾನ್ ರೈ ಪ್ರಥಮ, ಸಾರಾ ಶೆಟ್ಟಿ ದ್ವಿತೀಯ, ಮಿರಲ್ ಆಳ್ವಾ ತೃತೀಯ ಸ್ಥಾನ ಗಳಿಸಿದರು.

ನರ್ಸರಿ ವಿಭಾಗದ ಕಪ್ಪೆಜಿಗಿತ ಸ್ಪರ್ಧೆಯಲ್ಲಿ ಆಳ್ವಾ ರೈ ಪ್ರಥಮ, ನೈನ ರೈ ದ್ವಿತೀಯ, ಜಶ್ವಿಕ್ ರೈ ತೃತೀಯ ಹಾಗೂ ದ್ರುವ ರೈ 4ನೇ ಸ್ಥಾನ ಪಡೆದರು. ಬಾಲಕಿಯರ ಓಟದ ಸ್ಪರ್ಧೆಯಲ್ಲಿ ಜನನಿ ರೈ ಪ್ರಥಮ, ನಿರ್ವಿ ದ್ವಿತೀಯ ಮತ್ತು ಇಂಚರಾ ರೈ ತೃತೀಯ ಬಹುಮಾನ ಪಡೆದರು. ಬಾಲಕರ ವಿಭಾಗದಲ್ಲಿ ದರ್ಶಿಲ್ ಪ್ರಥಮ, ಶಶಿತ್ ರೈ ದ್ವಿತೀಯ ಹಾಗೂ ಸಂಚಿತ್ ತೃತೀಯ ಸ್ಥಾನ ಗಳಿಸಿದರು.

ಸಮಾರೋಪದಲ್ಲಿ ನ್ಯಾಯಾಧೀಶೆ ಲತಾ, ಯೋಗ ಗುರು ಸೀತಾರಾಂ ರೈ, ಜಾದೂಗಾರ್ ವಿಕ್ರಂ ಶೆಟ್ಟಿ, ಪೊಲೀಸ್ ಕ್ರೀಡಾಪಟು ಜಿತೇಂದ್ರ ರೈ ಅವರನ್ನು ಸನ್ಮಾನಿಸಲಾಯಿತು. ಬಂಟರ ಸಂಘದ ಜಿಲ್ಲಾಧ್ಯಕ್ಷ ಬಿ.ಡಿ.ಜಗದೀಶ್ ರೈ, ಪ್ರಧಾನ ಕಾರ್ಯದರ್ಶಿ ವಿ.ರವೀಂದ್ರ ರೈ, ಸೋಮವಾರಪೇಟೆ ತಾಲೂಕು ಅಧ್ಯಕ್ಷ ಬಿ.ಬಿ.ಜನಾರ್ದನ ಶೆಟ್ಟಿ ವಿರಾಜಪೇಟೆ ತಾಲೂಕು ಅಧ್ಯಕ್ಷ ಬಿ.ಎಸ್.ಲೀಲಾಧರ ರೈ, ಗೌರವಾಧ್ಯಕ್ಷ ರಾಮಣ್ಣ ಶೆಟ್ಟಿ, ಉಪಾಧ್ಯಕ್ಷ ಪ್ರಕಾಶ್ ರೈ, ಕಾರ್ಯದರ್ಶಿ ಸಂಪತ್ ಶೆಟ್ಟಿ, ಮಹಿಳಾ ಅಧ್ಯಕ್ಷೆ ಬಿ.ಆರ್. ನೀತಾ ರೈ, ಜಿಲ್ಲಾ ಯುವ ಬಂಟ್ಸ್ ಅಸೋಸಿಯೇಷನ್ ಅಧ್ಯಕ್ಷ ವಸಂತ್ ರೈ, ಮಡಿಕೇರಿ ನಗರ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯ ಶೆಟ್ಟಿ, ನಿರ್ದೇಶಕರಾದ ಡಾ.ಹೇಮಂತ್ ಶೆಟ್ಟಿ, ಶೀತಲ್ ರೈ, ಬಿ.ಕೆ.ಸತೀಶ್ ರೈ, ಕೆ.ಡಿ.ಸತೀಶ್ ರೈ, ಶೋಭಾ ರೈ, ಬಿ.ಎ.ಸುರೇಶ್ ರೈ, ಖಜಾಂಚಿ ಮದನ್ ಶೆಟ್ಟಿ ಸುದೀಶ್ ರೈ, ಸತೀಶ್ ರೈ, ಕಾರ್ಯದರ್ಶಿ ಶಶಿಕಲಾ ಶೆಟ್ಟಿ ಮಹಿಳಾ ಘಟಕದ ಗೌರವಾಧ್ಯಕ್ಷೆ ಎನ್.ಕುಸುಮ ಶೆಟ್ಟಿ ಹಾಜರಿದ್ದರು.

ಹಾನಿ ತಡೆಯಲು ಮುನ್ನೆಚ್ಚರಿಕೆ ಕ್ರಮ ವಹಿಸಿ

ಮಾನ್ಸೂನ್ ನಿರ್ವಹಣೆ ಸಭೆಯಲ್ಲಿ ಅಧಿಕಾರಿಗಳಿಗೆ ಡಿಸಿ ಶಿಲ್ಪನಾಗ್ ಸೂಚನೆ



ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಅಧಿಕಾರಿಗಳಿಗೆ ಡಿಸಿ ಶಿಲ್ಪನಾಗ್ ಮಾತನಾಡಿದರು.

ಚಾಮರಾಜನಗರ, ಮೇ 23–ಜಿಲ್ಲಾದ್ಯಂತ ಪೂರ್ವ ಮುಂಗಾರು ಮಳೆ ಆರಂಭಗೊಂಡಿದ್ದು, ಯಾವುದೇ ಜನ–ಜಾನುವಾರುಗಳಿಗೆ ಹಾನಿಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯ ಕೆಸ್ವಾನ್ ಸಭಾಂಗಣದಲ್ಲಿ ಗುರುವಾರ ನಡೆದ ಜಿಲ್ಲೆಯ ಬರ ಪರಿಸ್ಥಿತಿ ಮತ್ತು ಮಾನ್ಸೂನ್ ನಿರ್ವಹಣೆ ಸಂಬಂಧ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಒಂದು ವಾರದಿಂದ ಸತತವಾಗಿ ಮಳೆಯಾಗುತ್ತಿದೆ. ಈ ಬಾರಿ ವಾಡಿಕೆಗಿಂತ ಅಧಿಕ ಮಳೆಯಾಗುವ ಮುನ್ಸೂಚನೆ ಇದ್ದು, ಮಳೆಯಿಂದ ಆಗಬಹುದಾದ ಅನಾಹುತಗಳನ್ನು ತಡೆಗಟ್ಟಲು ಜಿಲ್ಲಾಮಟ್ಟದ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು. ಜಿಲ್ಲೆಯ ಎಲ್ಲಾ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳು ಈ ನಿಟ್ಟಿನಲ್ಲಿ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಜೀವಹಾನಿ ತಡೆಯಲು ಯಾವುದೇ ಕ್ಷಣದಲ್ಲಿ ಸನ್ನದ್ಧರಾಗಿರಬೇಕು ಎಂದು ನಿರ್ದೇಶಿಸಿದರು.

ಮನೆಗಳು ಮತ್ತು ಗುಡುಗು ಸಿಡಿಲಿನಿಂದ ಜನ–ಜಾನುವಾರು ಹಾನಿ ತಡೆಯಲು ಎಲ್ಲಾ ಅಧಿಕಾರಿಗಳು ಕ್ಷೇತ್ರಪ್ರವಾಸ ಮಾಡಬೇಕು. ಈ ಸಂಬಂಧ ಯಾವುದೇ ಸಮಸ್ಯೆಗಳು ಮಾಧ್ಯಮಗಳಲ್ಲಿ ವರದಿಯಾಗುವ ಮೊದಲೇ ಅವುಗಳನ್ನು ಪರಿಹರಿಸಲು ಮುಂದಾಗಬೇಕು. ಜಿಲ್ಲೆಯ ಯಾವುದೇ ಭಾಗದಲ್ಲಿ ಪ್ರಕೃತಿ ವಿಕೋಪ ಉಂಟಾದರೂ ಅದನ್ನು ತ್ವರಿತವಾಗಿ ನಿಭಾಯಿಸಲು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಬೇಕು. ಪ್ರಾಣ ಹಾನಿ ಸಂಭವಿಸಿದರೆ ಪರಿಹಾರ ವಿತರಣೆಯಲ್ಲಿ ವಿಳಂಬವಾಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಸಮರ್ಪಕವಾಗಿ ಸರಬರಾಜು ಮಾಡಬೇಕು. ಮಳೆಯಿಂದ ನೀರು ಕಲುಷಿತಗೊಳ್ಳದಂತೆ ಗಮನ ಹರಿಸಬೇಕು. ಕುಡಿಯುವ ನೀರಿನ ಪೈಪ್‌ಲೈನ್‌ಗೆ ಮಣ್ಣು ಹಾಗೂ ಯುಜಿಡಿ ನೀರು ಸೇರಿ ಆರೋಗ್ಯ ಸಮಸ್ಯೆಗಳಾಗದಂತೆ ಎಚ್ಚರ ವಹಿಸಬೇಕು. ಈ ಸಂಬಂಧ ಎಲ್ಲಾ ತಹಶೀಲ್ದಾರ್‌ಗಳು, ತಾಪಂ ಕಾರ್ಯನಿರ್ವಾಹಕಾಧಿಕಾರಿಗಳು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ತಪ್ಪಿದ್ದಲ್ಲಿ ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲೆಯಲ್ಲಿ ವಾರದಿಂದ ತೀವ್ರಗೊಂಡಿರುವ ಮಳೆ–ಗಾಳಿಯಿಂದ ಸಾಕಷ್ಟು ಕೃಷಿ ಹಾಗೂ ತೋಟಗಾರಿಕೆ ಬೆಳೆ ಹಾನಿಯಾಗಿವೆ. ಅದರಲ್ಲೂ 980 ಹೆಕ್ಟೇರ್‌ಗೂ ಹೆಚ್ಚು ಬಾಳೆ ಬೆಳೆ ಹಾನಿಯಾಗಿದ್ದು, ಅಧಿಕಾರಿಗಳು ತಕ್ಷಣ ಕ್ಷೇತ್ರಪ್ರವಾಸ ಕೈಗೊಂಡು ಸ್ಥಳ ಮಹಜರು ಮಾಡಿ ರೈತರಿಗೆ ಪರಿಹಾರ ವಿತರಿಸಬೇಕು. ರೈತರಿಂದ ಯಾವುದೇ ದೂರುಗಳು ಬರದಂತೆ ಅಧಿಕಾರಿಗಳು ಕ್ರಿಯಾಶೀಲರಾಗಬೇಕು. ಜನರ ನಂಬಿಕೆ, ವಿಶ್ವಾಸ ಗಳಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಎಲ್ಲಾ ತಾಲೂಕಿನ ತಹಶೀಲ್ದಾರ್‌ಗಳು, ತಾಪಂ ಇಓಗಳು, ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ವಿದ್ಯುತ್ ಅವಘಡ ತಪ್ಪಿಸಿ

ಜಿಲ್ಲೆಯ ವಿವಿಧ ಭಾಗಗಳಲ್ಲಿ ಅತಿ ಹೆಚ್ಚು ಮಳೆಯಾಗುತ್ತಿರುವುದು ವರದಿಯಾಗುತ್ತಿದ್ದು, ವಿದ್ಯುತ್ ಅವಘಡ ಉಂಟಾಗದಂತೆ ನಿಗಾವಹಿಸಬೇಕು. ಸಾರ್ವಜನಿಕರು ವಿದ್ಯುತ್‌ಗೆ ಸಂಬಂಧಿಸಿದಂತೆ ದೂರುಗಳಿಗೆ ಕರೆ ಮಾಡಿದಲ್ಲಿ ಶೀಘ್ರವಾಗಿ ಸ್ಪಂದಿಸಬೇಕು. ಅಧಿಕ ಮಳೆಗಾಳಿಯಿಂದ ರಸ್ತೆಗಳಲ್ಲಿ ವಿದ್ಯುತ್ ತಂತಿ ಬಿದ್ದ ಸಂದರ್ಭದಲ್ಲಿ ಸಾರ್ವಜನಿಕರಿಗೆ ತೊಂದರೆಗಳಾಗದಂತೆ ಅಧಿಕಾರಿಗಳು ಸ್ಥಳದಲ್ಲಿದ್ದು, ಸಮಸ್ಯೆ ಬಗೆಹರಿಸಬೇಕು ಎಂದು ಸೆಸ್ಕ್ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚಿಸಿದರು.

ಮಳೆಯಿಂದ ಉಂಟಾಗುವ ಪ್ರವಾಹ ಪರಿಸ್ಥಿತಿ ನಿಭಾಯಿಸಲು ಮುತುವರ್ಜಿ ವಹಿಸಬೇಕು. ಪ್ರವಾಹ ಉಂಟಾದರೆ ಕಾಳಜಿ ಕೇಂದ್ರಗಳನ್ನು ತೆರೆದು ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವ ಕೆಲಸ ವಾಗಬೇಕು. ಜಿಲ್ಲೆಯ ಎಲ್ಲಾ ಕೆರೆಗಳ ಹೂಳು ತೆಗೆಸಲು ಸಂಬಂಧಪಟ್ಟ ಅಧಿಕಾರಿಗಳು ಮುಂದಾಗಬೇಕು ಎಂದು ಶಿಲ್ಪನಾಗ್ ತಿಳಿಸಿದರು.

ಪಾರ್ವತಿ ಬೆಟ್ಟದಲ್ಲಿ ವಿಜೃಂಭಣೆಯ ರಥೋತ್ಸವ



ಗುಂಡ್ಲುಪೇಟೆ ತಾಲೂಕಿನ ಪಾರ್ವತಿ ಬೆಟ್ಟದಲ್ಲಿ ಸೋಮೇಶ್ವರ ಪಾರ್ವತಾಂಬೆ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಗುಂಡ್ಲುಪೇಟೆ, ಮೇ 23–ತಾಲೂಕಿನ ಪಾರ್ವತಿ ಬೆಟ್ಟದಲ್ಲಿ ಶ್ರೀ ಸೋಮೇಶ್ವರ ಸ್ವಾಮಿ ಸಮೇತ ಪಾರ್ವತಿ ದೇವಿಯ ರಥೋತ್ಸವ ಗುರುವಾರ ಸಾವಿರಾರು ಭಕ್ತರ ನಡುವೆ ವಿಜೃಂಭಣೆಯಿಂದ ನಡೆಯಿತು.


ಪ್ರತಿವರ್ಷ ಬುದ್ಧ ಪೂರ್ಣಿಮೆಯ ದಿನ ಪಾರ್ವತಿ ಮತ್ತು ಸೋಮೇಶ್ವರಸ್ವಾಮಿ ರಥೋತ್ಸವ ನಡೆಯಲಿದೆ. ಅದರಂತೆ ಗುರುವಾರ ರಥೋತ್ಸವ ಸಾಂಗವಾಗಿ ನೆರವೇರಿತು. ಬೆಳಗ್ಗೆ ವಿಶೇಷ ಪೂಜೆ ನಂತರ ಉತ್ಸವ ಮೂರ್ತಿಗಳನ್ನು ಮೆರವಣಿಗೆ ಮೂಲಕ ತಂದು ರಥಕ್ಕೆ ಕುಳ್ಳಿರಿಸಲಾಯಿತು. ಮಧ್ಯಾಹ್ನ 12 ಗಂಟೆಗೆ ಮುಜರಾಯಿ ಇಲಾಖೆಯ ಅಧಿಕಾರಿ ಮಂಜುನಾಥ್ ರಥಕ್ಕೆ ಪೂಜೆ ಸಲ್ಲಿಸಿದ ನಂತರ ಭಕ್ತರು ರಥವನ್ನು ಎಳೆಯಲಾರಂಭಿಸಿದರು. ಬೆಟ್ಟದ ತಪ್ಪಲಿನಲ್ಲಿ ಒಂದು ಸುತ್ತು ಹಾಕಿದ ರಥವನ್ನು ಮತ್ತೆ ಸ್ವಸ್ಥಾನಕ್ಕೆ ಸೇರಿಸಲಾಯಿತು. ನಂತರ ಭಕ್ತರಿಗೆ ಅನ್ನಸಂತರ್ಪಣೆ ಹಾಗೂ ಪ್ರಸಾದ ವಿನಿಯೋಗಿಸಲಾಯಿತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ನೇತೃತ್ವದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಇಂದು ಸ್ಕೌಟ್ಸ್, ಗೈಡ್ಸ್ ಸಮಾರೋಪ

ಚಾಮರಾಜನಗರ, ಮೇ 23–ಕಾಲೇಜು ಶಿಕ್ಷಣ ಇಲಾಖೆ ಮತ್ತು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಸಾಂಸ್ಕೃತಿಕ, ಕ್ರೀಡಾ, ರಾಷ್ಟ್ರೀಯ ಸೇವಾ ಯೋಜನೆ, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರೆಡ್‌ಕ್ರಾಸ್ ಚಟುವಟಿಕೆಗಳ ಸಮಾರೋಪ ಮೇ 24ರಂದು ಬೆಳಗ್ಗೆ 10.30ಕ್ಕೆ ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಎಸ್.ಚಂದ್ರಮ್ಮ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಎಂ.ಆರ್. ಸುಮತಿ ಅಧ್ಯಕ್ಷತೆ ವಹಿಸಲಿದ್ದಾರೆ. ಚಾಮರಾಜನಗರ ವಿಶ್ವವಿದ್ಯಾನಿಲಯದ ಸುವರ್ಣ ಗಂಗೋತ್ರಿಯ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜಕ ಡಾ.ಆರ್.ಮಹೇಶ್, ಐಕ್ಯೂಎಸಿ ಸಮಿತಿ ಸಂಚಾಲಕ ಪಿ.ಬಾಲಸುಬ್ರಹ್ಮಣ್ಯ, ಸಾಂಸ್ಕೃತಿಕ ಸಮಿತಿ ಸಂಚಾಲಕಿ ಡಾ.ಎಂ.ಸಿ.ಪ್ರಭಾವತಿ, ಕ್ರೀಡಾ ಸಮಿತಿ ಸಂಚಾಲಕ ಡಾ.ಶಾಂತರಾಜು ಭಾಗವಹಿಸಲಿದ್ದಾರೆ.

ಮನೆ ಛಾವಣಿ ಕುಸಿದು ದಂಪತಿಗೆ ಗಾಯ



ಹೊಸಹಂಪಾಪುರದ ನಾಯಕರ ಬಡಾವಣೆಯ ಶಿವಲಿಂಗನಾಯಕ ಮತ್ತು ಸಿದ್ದನಂಜಮ್ಮ ದಂಪತಿ ಮನೆ ಛಾವಣಿ ಕುಸಿದಿರುವುದು.

ಕೊಳ್ಳೇಗಾಲ, ಮೇ 23–ಮಳೆಗೆ ಮನೆ ಕುಸಿದು ದಂಪತಿಗೆ ಸಣ್ಣಪುಟ್ಟ ಗಾಯಗಳಾಗಿರುವ ಘಟನೆ ತಾಲೂಕಿನ ಹೊಸಹಂಪಾಪುರ ಗ್ರಾಮದಲ್ಲಿ ಬುಧವಾರ ರಾತ್ರಿ ನಡೆದಿದೆ.

ಗ್ರಾಮದ ಶಿವಲಿಂಗನಾಯಕ ಮತ್ತು ಸಿದ್ದನಂಜಮ್ಮ ದಂಪತಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಇಬ್ಬರು ಎಂದಿನಂತೆ ಕೂಲಿ ಕೆಲಸ ಮುಗಿಸಿ, ರಾತ್ರಿ ಊಟ ಮಾಡಿ ಮನೆಯಲ್ಲಿ ಮಲಗಿದ್ದರು. ಈ ವೇಳೆ ಮಳೆ ಬಂದಿದ್ದು, ಗೋಡೆ ಕುಸಿದು ಛಾವಣಿ ದಂಪತಿ ಮೇಲೆ ಬಿದ್ದಿದೆ. ಗೋಡೆ ಬಿದ್ದ ಶಬ್ದದಿಂದ ಅಕ್ಕಪಕ್ಕದವರು ಓಡಿ ಬಂದು ಛಾವಣಿ ಕೆಳಗೆ ಸಿಲುಕಿದ್ದ ಇಬ್ಬರನ್ನು ರಕ್ಷಿಸಿ, ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಗುರುವಾರ ತಹಶೀಲ್ದಾರ್ ಎಂ.ಮಂಜುಳಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಬಳಿಕ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ವಸತಿ ಶಾಲೆಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಮೇ 23– ಸಮಾಜ ಕಲ್ಯಾಣ, ಪರಿಶಿಷ್ಟ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯು ಚಾಮರಾಜನಗರ ಜಿಲ್ಲೆಯ ವಸತಿ ಶಾಲೆಗಳಲ್ಲಿ 2024–25ನೇ ಸಾಲಿನ 7, 8 ಮತ್ತು 9ನೇ ತರಗತಿಯ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಹತ್ತಿರದ ವಸತಿ ಶಾಲೆಗಳಿಗೆ ಮೇ 27ರೊಳಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಕಚೇರಿ (ಮೊ.ಸಂ: 8310291951) ಅಥವಾ ಜಿಲ್ಲಾ ಸಮಾಲೋಚಕ ಚಂದ್ರು (ಮೊ.ಸಂ: 6361295799) ಅವರನ್ನು ಸಂಪರ್ಕಿಸಬಹುದು.

ಇಡೀ ವಿಶ್ವವೇ ಬುದ್ಧನತ್ತ ಮುಖ ಮಾಡಿದೆ



ಚಾಮರಾಜನಗರದ ಸಾರನಾಥ ಬೌದ್ಧ ವಿಹಾರದಲ್ಲಿ ಬುದ್ಧ ಪೂರ್ಣಿಮೆ ಆಚರಿಸಲಾಯಿತು.

ಚಾಮರಾಜನಗರ, ಮೇ 23– ವಿಶ್ವದ ಜ್ವಲಂತ ಸಮಸ್ಯೆಗಳಿಗೆ ಗೌತಮ ಬುದ್ಧರೇ ವೈದ್ಯರಾಗಿದ್ದು, ಇಡೀ ವಿಶ್ವವೇ ಬುದ್ಧನತ್ತ ಮುಖ ಮಾಡಿದೆ ಎಂದು ಕೊಳ್ಳೇಗಾಲ ಜೇತವನ ಬೌದ್ಧ ವಿಹಾರದ ಭಿಕ್ಕು ಮನೋರಖ್ಖಿತ ಬಂತೇಜಿ ಹೇಳಿದರು.

ನಗರದ ಸಾರನಾಥ ಬೌದ್ಧ ವಿಹಾರದಲ್ಲಿ ಗುರುವಾರ ತಾಲೂಕು ಭಾರತೀಯ ಬೌದ್ಧ ಮಹಾಸಭಾ ಆಯೋಜಿಸಿದ್ದ ಬುದ್ಧ ಪೂರ್ಣಿಮೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೈಶಾಖ ಬುದ್ಧ ಪೂರ್ಣಿಮೆಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಏಷ್ಯಾ ಖಂಡದ ಬೌದ್ಧ, ಯುರೋಪ್, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ 2568ನೇ ವೈಶಾಖ ಬುದ್ಧ ಪೂರ್ಣಿಮೆಯನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಬೌದ್ಧ ಧಮ್ಮ ಸ್ವೀಕರಿಸಿದ ಮೇಲೆ ಭಾರತದಲ್ಲಿ ಬೌದ್ಧ ಧಮ್ಮ ಕ್ರಾಂತಿ ಉಂಟಾಯಿತು. ವಿಶ್ವದ ಬೆಳಕು ಗೌತಮ ಬುದ್ಧರು ಪ್ರೀತಿ, ಕರುಣೆ, ಮೈತ್ರಿ ಬೋಧಿಸಿ ವಿಶ್ವಕ್ಕೆ ಮಾದರಿ ಆಗಿದ್ದಾರೆ. ದೇಶದ ಶೋಷಿತ ಸಮುದಾಯಗಳ ಮಾಸಿಕ ವಿಮೋಚನೆಗೆ ಧಮ್ಮ ಮಾರ್ಗವಾಗಿದೆ ಎಂದು ಅಭಿಪ್ರಾಯಪಟ್ಟರು.

ಭಾರತೀಯ ಬೌದ್ಧ ಮಹಾಸಭಾದ ತಾಲೂಕು ಅಧ್ಯಕ್ಷ ಎಂ.ಸಿದ್ದರಾಜು, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಂಜುನಾಥಪ್ರಸನ್ನ, ಮಹಾಸಭಾ ಜಿಲ್ಲಾ ಖಜಾಂಚಿ ಡಿ.ಸೋಮಣ್ಣ, ಜಿಲ್ಲಾಧ್ಯಕ್ಷ ಆರ್.ಬಸವರಾಜು, ಸಂಸ್ಕಾರ ವಿಭಾಗದ ಉಪಾಧ್ಯಕ್ಷ ಪುಟ್ಟಸ್ವಾಮಿ, ಪ್ರವಾಸ ಮತ್ತು ಪ್ರಚಾರ ಸಮಿತಿ ಉಪಾಧ್ಯಕ್ಷ ಉಮೇಶ್ ಕುದರ್, ಮಹಿಳಾ ವಿಭಾಗದ ಉಪಾಧ್ಯಕ್ಷೆ ನಾಗಶಿಲ್ಪ, ಎಸ್‌ಸಿ, ಎಸ್‌ಟಿ ಸರ್ಕಾರಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ಎ.ಶಿವಣ್ಣ, ಸಿದ್ದಾರ್ಥ ಪರಿಶಿಷ್ಟ ಜಾತಿ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿದ್ದರಾಜು, ರಮಾಬಾಯಿ ಸಂಘದ ಅಧ್ಯಕ್ಷ ಪುಷ್ಪಮರಿಸ್ವಾಮಿ, ಬುದ್ಧ ನಗರ ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಮಹದೇವಯ್ಯ, ಕೆಇಬಿ ಸಹಾಯಕ ಇಂಜಿನಿಯರ್ ಸಿದ್ದರಾಜಪ್ಪ, ವಕೀಲರಾದ ನಾಗರಾಜು, ನಾಗಣ್ಣ, ಯಜಮಾನ ಬಸವಣ್ಣ ಇದ್ದರು.



ಕೊಳ್ಳೇಗಾಲ 1ನೇ ವಾರ್ಡ್‌ನ ಸಿದ್ಧಾರ್ಥ ನಗರದ ಬುದ್ಧ ಧ್ಯಾನ ಮಂದಿರದಲ್ಲಿ ಗುರುವಾರ ಬುದ್ಧ ಪೌರ್ಣಿಮೆ ಆಚರಿಸಲಾಯಿತು. ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕ ಎಸ್. ಬಾಲರಾಜು, ಆನಂದ್ ಬಂತೇಜಿ, ನಗರಸಭೆ ಸದಸ್ಯೆ ಕವಿತಾ ರಾಜೇಶ್, ಮಾಜಿ ಸದಸ್ಯ ಮೂರ್ತಿ, ಅರ್ಜುನ್ ಮಹೇಶ್, ಸಾಹಿತಿ ಮುಳ್ಳೂರು ಶಿವಮಲ್ಲು, ವಕೀಲ ರಾಜೇಂದ್ರ, ನಾಗರಾಜು, ಸಿದ್ದಪ್ಪಾಜಿ, ಜಗದೀಶ್ ಶಂಕನಪುರ, ಸಿದ್ದರಾಜು ಕೆಂಪನಪಾಳ್ಯ, ಯುವ ಮುಖಂಡ ಸಿದ್ದಪ್ಪಾಜಿ, ರಮೇಶ್ ಇದ್ದರು

ಮೈಸೂರು ಮಿತ್ರ ಶುಕ್ರವಾರ 24 ಮೇ 2024

ಮುಂಬೈನ ಡೊಂಬಿವಾಲಿಯ ಕೆಮಿಕಲ್ ಫ್ಯಾಕ್ಟರಿಯಲ್ಲಿ ಭಾರಿ ಸ್ಫೋಟ; ನಾಲ್ವರು ಸಾವು



ಮುಂಬೈ, ಮೇ23–ಮಹಾರಾಷ್ಟ್ರದ ಥಾಣೆ ಜಿಲ್ಲೆಯ ರಾಸಾಯನಿಕ ಕಾರ್ಖಾನೆಯಲ್ಲಿ ಗುರುವಾರ ಮಧ್ಯಾಹ್ನ ಭಾರಿ ಸ್ಫೋಟ ಸಂಭವಿಸಿದ್ದು, ಘಟನೆಯಲ್ಲಿ ಕನಿಷ್ಠ ನಾಲ್ವರು ಸಾವನ್ನಪ್ಪಿದ್ದಾರೆ ಮತ್ತು 34 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈ ಸಮೀಪದ ಡೊಂಬಿವಾಲಿ ಎಂಐಡಿಸಿ ಪ್ರದೇಶದ 2ನೇ ಹಂತದಲ್ಲಿರುವ ಅಮುದನ್ ಕೆಮಿಕಲ್ ಕಂಪನಿಯಲ್ಲಿ ಇಂದು ಮಧ್ಯಾಹ್ನ 1.40ರ ಸುಮಾರಿಗೆ ಬಾಯ್ಲರ್ ಸ್ಫೋಟಗೊಂಡ ನಂತರ ಭಾರೀ ಬೆಂಕಿ ಕಾಣಿಸಿಕೊಂಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಮುಂಬೈನಿಂದ ಸುಮಾರು 40 ಕಿಮೀ ದೂರದಲ್ಲಿರುವ ಡೊಂಬಿವಾಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಹಾರಾಷ್ಟ್ರ ಕೈಗಾರಿಕಾ ಸಚಿವ ಉದಯ್ ಸಮಂತ್, ಸ್ಥಳದಿಂದ ಇದುವರೆಗೆ ಮೂರು ಮೃತದೇಹಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗಳಿಗೆ ಕರೆದೊಯ್ಯಲಾಗಿದೆ. ಅವರ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದು ಮುಖ್ಯಮಂತ್ರಿ ಏಕನಾಥ್ ಶಿಂಧೆ ಘೋಷಿಸಿದ್ದಾರೆ. ಸ್ಫೋಟದ ಶಬ್ದವು ಒಂದು ಕಿಲೋಮೀಟರ್ ದೂರದವರೆಗೂ ಕೇಳಿಸಿತು ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ.

ಸ್ಫೋಟದ ತೀವ್ರತೆಗೆ ಅಕ್ಕಪಕ್ಕದ ಕಟ್ಟಡಗಳ ಗಾಜಿನ ಕಿಟಕಿಗಳು ಬಿರುಕು ಬಿಟ್ಟಿದ್ದು, ಸುತ್ತಮುತ್ತಲಿನ ಹಲವು ಮನೆಗಳಿಗೆ ಹಾನಿಯಾಗಿದೆ. ಮಧ್ಯಾಹ್ನ 1.40ರ ಸುಮಾರಿಗೆ ಸ್ಫೋಟ ಸಂಭವಿಸಿದೆ ಎಂದು ಥಾಣೆ ಮಹಾನಗರ ಪಾಲಿಕೆ ವಿಪತ್ತು ನಿರ್ವಹಣಾ ಘಟಕದ ಮುಖ್ಯಸ್ಥ ಯಾಸಿನ್ ತದ್ವಿ ಅವರು ತಿಳಿಸಿದ್ದಾರೆ.

ಒಂದನೇ ಪುಟದಿಂದ

'ಮೀಸಲು ಅರಣ್ಯ'

ಪ್ರತಿ ವರ್ಷ ವಲಸೆ ಬಂದು ಹೋಗುತ್ತಿವೆ. ಐತಿಹಾಸಿಕ ಹಿನ್ನೆಲೆ ಜೊತೆಗೆ ಪರಿಸರವೂ ಕೆರೆಯ ಮಹತ್ವವನ್ನು ಸಾರುತ್ತಿದೆ. ಆದರೆ, ದುರದೃಷ್ಟಕರ ಸಂಗತಿ ಎಂದರೆ ವಿವಿಧ ಬಡಾವಣೆಯ ಒಳಚರಂಡಿ ನೀರು ರಾಜಕಾಲುವೆ ಮೂಲಕ ಕೆರೆ ಒಡಲು ಸೇರಿ ಕೆರೆ ಪರಿಸರ ಮಲಿನಗೊಳ್ಳುತ್ತಿತ್ತು.

ಮೀಸಲು ಅರಣ್ಯವಾಗಿ ಘೋಷಣೆ: ಮೈಸೂರು ತಾಲೂಕು, ಕಸಬಾ ಹೋಬಳಿ ವ್ಯಾಪ್ತಿಯ ಈ ಲಿಂಗಾಂಬುದಿ ಕೆರೆಯ ಲಿಂಗಾಂಬುದಿ ಪಾಳ್ಯದ ಸರ್ವೆ ನಂಬರ್ 23, ದಟ್ಟಗಳ್ಳಿ ಸರ್ವೆ ನಂ.82 ಹಾಗೂ ಐಯಜಯ್ಯನಹುಂಡಿ ಸರ್ವೆ ನಂ.11ರ ವ್ಯಾಪ್ತಿಯಲ್ಲಿ ಬರುವ 218.23 ಎಕರೆ ಪ್ರದೇಶವನ್ನು 'ಮೀಸಲು ಅರಣ್ಯ' ಎಂದು ಘೋಷಣೆ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಆಕ್ಷೇಪ ಆಲಿಸಲು ಅಧಿಕಾರಿ ನೇಮಕ: ಲಿಂಗಾಂಬುದಿ ಕೆರೆಯನ್ನು ಮೀಸಲು ಅರಣ್ಯವಾಗಿ ಘೋಷಿಸಲು ಸರ್ಕಾರ ನಿವೃತ್ತ ಕೆಎಎಸ್ ಅಧಿಕಾರಿ ರೇಣುಕಾಂಬ ಎಂಬುವರನ್ನು ಅರಣ್ಯ ವ್ಯವಸ್ಥಾಪನಾಧಿಕಾರಿ ಪದನಾಮದೊಂದಿಗೆ ನೇಮಿಸಿದೆ. ಕೆರೆಗೆ ಸಂಬಂಧಪಟ್ಟ ಜಾಗಕ್ಕೆ ಯಾರಾದರೂ ಹಕ್ಕುದಾರರು ಇದ್ದರೆ, ಕೆರೆ ಜಾಗದಲ್ಲಿ ಯಾವುದಾದರೂ ಆಚರಣೆ ಇದ್ದರೆ, ಕೆರೆ ಜಾಗದಲ್ಲಿರುವ ಉತ್ಪನ್ನಗಳ ಮೇಲಿನ ಹಕ್ಕುದಾರರು ಯಾರಾದರೂ ಇದ್ದರೆ, ಖುದ್ದಾಗಿ ಹಾಜರಾಗಿ ಲಿಖಿತ ಅಥವಾ ಮೌಖಿಕವಾಗಿ ಹೇಳಿಕೆ ನೀಡಬಹುದಾಗಿದೆ. ಇದಕ್ಕೆ ಜೂ.15ರವರೆಗೆ ಅವಕಾಶ ಕಲ್ಪಿಸಲಾಗಿದೆ.

17ನೇ ನಿಯಮ ಜಾರಿ: ಯಾವುದೇ ಆಕ್ಷೇಪ, ಹಕ್ಕು ಸಲ್ಲಿಕೆಯಾಗದಿದ್ದರೆ ಲಿಂಗಾಂಬುದಿ ಕೆರೆ ಜಾಗವನ್ನು ಮೀಸಲು ಅರಣ್ಯವಾಗಿ ಘೋಷಿಸುವ ಪ್ರಕ್ರಿಯೆ ಅಂತಿಮಗೊಳ್ಳುತ್ತದೆ. ವ್ಯವಸ್ಥಾಪನಾಧಿಕಾರಿಗಳ ಸಮ್ಮುಖದಲ್ಲಿ ಕೆರೆ ಜಾಗವನ್ನು ಸರ್ವೆ ಮಾಡಿ ದಾಖಲೀಕರಿಸಲಾಗುತ್ತದೆ. ತದ ನಂತರ ಕರ್ನಾಟಕ ಅರಣ್ಯ ಕಾಯ್ದೆ 1963ರ ಅಧಿನಿಯಮ 17ರಡಿ ಕೆರೆ ಜಾಗವನ್ನು ಮೀಸಲು ಅರಣ್ಯ ಎಂದು ಘೋಷಿಸಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗುತ್ತದೆ.

ಇದರಿಂದಾಗುವ ಪ್ರಯೋಜನ: ಪ್ರಸ್ತುತ ಕೆರೆ ಜಾಗ ಕರ್ನಾಟಕ ಅರಣ್ಯ ಕಾಯ್ದೆ 1963ರ ಅಧಿನಿಯಮ 4ರಲ್ಲಿ ಇದೆ. 17ನೇ ನಿಯಮಕ್ಕೆ ಸೇರಿಸಿದರೆ, ಲಿಂಗಾಂಬುದಿ ಕೆರೆಯಲ್ಲಿರುವ ಪ್ರಾಣಿ–ಪಕ್ಷಿ ಸಂಕುಲದೊಂದಿಗೆ ಅಲ್ಲಿನ ಅರಣ್ಯ ಪ್ರದೇಶವನ್ನು ಕಾಪಾಡಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬಹುದಾಗಿದೆ. ಇದರಿಂದ ಕೆರೆ ಜಾಗದ ಮಹತ್ವ ಹಾಗೂ ಮೌಲ್ಯವೂ ಹೆಚ್ಚಾಗುತ್ತದೆ. ಅಲ್ಲದೆ, ಮೈಸೂರಿಗೆ ಮತ್ತೊಂದು ಮೀಸಲು ಅರಣ್ಯ ಸಿಕ್ಕಂತಾಗುತ್ತದೆ.

ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ: ಲಿಂಗಾಂಬುದಿ ಕೆರೆ ಕಂದಾಯ ಇಲಾಖೆ ವ್ಯಾಪ್ತಿಯಲ್ಲಿತ್ತು. ಆದರೆ, ಅಲ್ಲಿನ ಪಕ್ಷಿ ಸಂಕುಲದ ಹಿತರಕ್ಷಣೆಗೆ ಪರಿಣಾಮಕಾರಿ ಕ್ರಮ ಕೈಗೊಳ್ಳದ ಕಾರಣ, 2003ರಲ್ಲಿ ಅಂದಿನ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಲಿಂಗಾಂಬುದಿ ಕೆರೆಯನ್ನು ಅರಣ್ಯ ಇಲಾಖೆಯ ಸುಪರ್ದಿಗೆ ನೀಡಲಾಗಿತ್ತು. ಅಂದಿನಿಂದಲೂ ಅರಣ್ಯ ಇಲಾಖೆ ಕೆರೆ ಜಾಗವನ್ನು ಸಂರಕ್ಷಿಸುತ್ತಾ ಬಂದಿದೆ.

ಮಹಾರಾಜರ ಕಾಲದ ಕೆರೆ : ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ನಿರ್ಮಿಸಲಾಗಿದ್ದ ಲಿಂಗಾಂಬುದಿ ಕೆರೆ ಮೈಸೂರಿನ ಪ್ರಮುಖ ಕೆರೆಗಳಲ್ಲಿ ಮುಂಚೂಣಿಯಲ್ಲಿದೆ. ಮಹಾರಾಣಿ ಕೃಷ್ಣವಿಲಾಸ ಲಿಂಗಾಜಮ್ಮಣ್ಣಿ ಸ್ಮರಣಾರ್ಥ 1828ರಲ್ಲಿ ಈ ಕೆರೆ ನಿರ್ಮಿಸಲಾಗಿದೆ. ಲಿಂಗಾಂಬುದಿ ಗ್ರಾಮದ ಸರ್ವೆ ನಂ. 23ರಲ್ಲಿ 51.30 ಎಕರೆ, ದಟ್ಟಗಳ್ಳಿ ಸರ್ವೆ ನಂ.82ರಲ್ಲಿ 136.11 ಎಕರೆ, ಐಯಜಯ್ಯನ ಹುಂಡಿ ಸರ್ವೆ ನಂ.11ರಲ್ಲಿ 28.23 ಎಕರೆ ಹೀಗೆ 250 ಎಕರೆ ಪ್ರದೇಶದ ವಿಸ್ತೀರ್ಣದಲ್ಲಿ ಕೆರೆ ಆವರಿಸಿಕೊಂಡಿದೆ. ಅದರಲ್ಲಿ 150 ಎಕರೆಯಲ್ಲಿ ನೀರು ನಿಲ್ಲುತ್ತದೆ. ಉಳಿದ 100 ಎಕರೆಯಲ್ಲಿ ಗಿಡ ಮರ ಬೆಳೆದಿವೆ. ಇದರಲ್ಲಿ ಬೊಟಾನಿಕಲ್ ಗಾರ್ಡನ್, ತೋಟಗಾರಿಕೆ ಇಲಾಖೆಗೆ ಸೇರಿದ ಜಾಗ, ಪಾರ್ಕ್, ಮಹಾಲಿಂಗೇಶ್ವರ ದೇವಾಲಯದ ಜಾಗ ಹೊರತುಪಡಿಸಿ ಬಾಕಿ 218 ಎಕರೆ 23 ಗುಂಟೆ ಜಾಗವನ್ನು ಮೀಸಲು ಅರಣ್ಯ ಎಂದು ಘೋಷಣೆ ಮಾಡಲು ನಿರ್ಧರಿಸಲಾಗಿದೆ.

ಪಕ್ಷಿಧಾಮಕ್ಕೂ ಸೂಕ್ತ ಸ್ಥಳ: ಲಿಂಗಾಂಬುದಿ ಕೆರೆಯಲ್ಲಿ ಹಲವು ಬಗೆಯ ಪಕ್ಷಿಗಳು ಆಶ್ರಯ ಪಡೆದಿವೆ. ದೇಶ–ವಿದೇಶದಿಂದ ಪಕ್ಷಿಗಳು ವಲಸೆ ಬಂದು ಇಲ್ಲಿಯೇ ಸಂತಾನೋತ್ಪತ್ತಿ ಮಾಡುತ್ತಿವೆ. ಈ ಹಿನ್ನೆಲೆಯಲ್ಲಿ 1980ರಲ್ಲಿಯೇ ಮ್ಯಾನ್ ಸಂಸ್ಥೆ ಲಿಂಗಾಂಬುದಿ ಕೆರೆಯನ್ನು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ಜೀವ ವೈವಿಧ್ಯ ತಾಣವಾಗಿ ಮಾಡಬಹುದೆಂದು ಅಭಿಪ್ರಾಯಪಟ್ಟಿತ್ತು. ಹಾಗಾಗಿ 1990ರಲ್ಲಿ ಅಂದಿನ ಜಿಲ್ಲಾಧಿಕಾರಿ ತ.ಮ. ವಿಜಯ ಭಾಸ್ಕರ್, ಸುತ್ತಮುತ್ತಲಿನ ಬಡಾವಣೆಗಳಿಂದ ಒಳಚರಂಡಿ ನೀರು ಕೆರೆಗೆ ಸೇರುವುದನ್ನು ತಡೆಯುವ ಕ್ರಮ ಕೈಗೊಂಡಿದ್ದರು.

ನೈಜ ಕಾಡಿನ ವಾತಾವರಣ: ನಗರ ಪ್ರದೇಶಕ್ಕೆ ಹೊಂದಿಕೊಂಡಂತೆ ಇದ್ದರೂ, ಕಾಡಿನ ನೈಜ ವಾತಾವರಣವನ್ನು ಹೊಂದಿದೆ. ಬಂಡೀಪುರ ನಾಗರಹೊಳೆ ಅಭಯಾರಣ್ಯದಲ್ಲಿ ಬಿದಿರು ಸತ್ತಿದ್ದರೂ ಲಿಂಗಾಂಬುದಿ ಕೆರೆ ಆವರಣದಲ್ಲಿ ಹುಲುಸಾಗಿ ಬೆಳೆದು ನಿಂತಿದೆ. ಅಲ್ಲದೆ ಜೀವ ವೈವಿಧ್ಯಕ್ಕೆ ಬೇಕಾದಂತಹ ವಾತಾವರಣ ಈ ಕೆರೆಯಲ್ಲಿರುವುದರಿಂದ ಮೈಸೂರಿನ ಜನತೆ ಈ ಕೆರೆಯನ್ನು ಉಳಿಸಿಕೊಳ್ಳಲು ಜಿಲ್ಲಾಡಳಿತದೊಂದಿಗೆ ಸಹಕರಿಸುವ ಅನಿವಾರ್ಯತೆ ಇದೆ.

ರಾಜಕಾಲುವೆಯಲ್ಲೇ ಒಳಚರಂಡಿ ನೀರು: ಲಿಂಗಾಂಬುದಿ ಕೆರೆಗೆ ಮಳೆ ನೀರು ಹರಿದು ಬರಲು ಎರಡು ರಾಜಕಾಲುವೆಯಿದೆ. ಒಂದು ಕೆರೆ ತುಂಬಿದಾಗ ಮತ್ತೊಂದು ಕೆರೆಗೆ ನೀರು ಹರಿದು ಸರಾಗವಾಗಿ ಹೋಗಲು ನಿರ್ಮಿಸಿದ್ದ ರಾಜಕಾಲುವೆ ಒತ್ತುವರಿಯಾಗಿದ್ದರಿಂದ ಮಳೆ ನೀರು ಕೆರೆಗೆ ಹರಿದು ಬರುತ್ತಿಲ್ಲ. ಶ್ರೀರಾಮಪುರದ ಕಡೆಯಿಂದ ಬರುವ ರಾಜಕಾಲುವೆಯಲ್ಲಿ ಮಳೆಯ ಶುದ್ಧ ನೀರು ಹರಿದು ಕೆರೆ ಸೇರಿದರೆ, ಜನತಾನಗರ, ಆನಂದನಗರ, ಶಾರದಾದೇವಿ ನಗರ, ದಟ್ಟಗಳ್ಳಿ ಕಡೆಯಿಂದ ಬರುವ ರಾಜ ಕಾಲುವೆಯಲ್ಲಿ ಅಧಿಕ ಪ್ರಮಾಣದಲ್ಲಿ ಕಲುಷಿತ ನೀರು ಕೆರೆ ಸೇರುತ್ತಿದೆ. ಜನತಾನಗರದಲ್ಲಿ ಒಳ ಚರಂಡಿ ಮಾರ್ಗವನ್ನು ದುರಸ್ತಿ ಮಾಡುವ ಸಂದರ್ಭದಲ್ಲಿ ಒಳಚರಂಡಿ ನೀರನ್ನು ರಾಜಕಾಲುವೆಗೆ ಬಿಡಲಾಗಿತ್ತು ಅದನ್ನು ಇಂದಿಗೂ ಸರಿಪಡಿಸಿಲ್ಲ. ಅಲ್ಲದೆ ದಟ್ಟಗಳ್ಳಿ ಬಡಾವಣೆಯಲ್ಲಿ ರಾಜಕಾಲುವೆ ಪಕ್ಕದಲ್ಲೇ ಹಾದು ಹೋಗಿರುವ ಒಳಚರಂಡಿ ಪೈಪ್‌ಲೈನ್‌ನಿಂದಲೂ ಭಾರಿ ಪ್ರಮಾಣದ ಒಳಚರಂಡಿ ನೀರು ಸೋರಿಕೆಯಾಗುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೊಂದು ಪತ್ರ

ದೌರ್ಜನ್ಯ ಪ್ರಕರಣಗಳ ಆರೋಪ ಸಂಬಂಧ ವಿಚಾರಣೆಗೆ ಆರೋಪಿಯ ಅಗತ್ಯವಿದೆ ಎಂದು ಮುಖ್ಯಮಂತ್ರಿ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಪ್ರಜ್ವಲ್ ರೇವಣ್ಣ ವಿರುದ್ಧ ಲುಕೌಟ್ ನೋಟಿಸ್, ಬ್ಲೂಕಾರ್ನರ್ ನೋಟಿಸ್ ಅಲ್ಲದೆ, ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಅಧಿಕಾರಿಯ ಎರಡು ನೋಟಿಸ್‌ಗಳಿಗೂ ಇದುವರೆಗೆ ಸ್ಪಂದಿಸಿಲ್ಲ.

ಏಪ್ರಿಲ್ 27ರಿಂದ ತಲೆಮರೆಸಿಕೊಂಡು ರಾಜತಾಂತ್ರಿಕ ಪಾಸ್‌ಪೋರ್ಟ್ ಮೇಲೆ ವಿದೇಶದಲ್ಲಿರುವ ಪ್ರಜ್ವಲ್‌ನನ್ನು ಭಾರತಕ್ಕೆ ಕರೆತರುವ ಸಂಬಂಧ, ತಾವು ಈ ಹಿಂದೆ ಬರೆದ ಪತ್ರದಿಂದ ಇದುವರೆಗೂ ಯಾವುದೇ ಪ್ರಕ್ರಿಯೆ ಜರುಗಿಲ್ಲ ಎಂದಿದ್ದಾರೆ. ಈಗಲಾದರೂ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಪ್ರಜ್ವಲ್ ರೇವಣ್ಣನನ್ನು ವಿಚಾರಣೆಗೆ ದೇಶಕ್ಕೆ ಕರೆತರುವಲ್ಲಿ ಕೇಂದ್ರ ಸರ್ಕಾರ ಆತನ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸಬೇಕೆಂದು ಕೋರುವುದಾಗಿ ಮುಖ್ಯಮಂತ್ರಿ ಪತ್ರದಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಮೊದಲ ದಿನ ಆನೆ ಹಿಂಡು ಲೆಕ್ಕ ಹಾಕಿದ ಸಿಬ್ಬಂದಿ

ಪರಿಶೀಲಿಸಿ ಆನೆಗಳ ಅಂದಾಜು ಲೆಕ್ಕವನ್ನು ಹಾಕಲಾಗುತ್ತದೆ ಎಂದು ಬಿಳಿಗಿರಿರಂಗನಾಥ ದೇವಾಲಯ ಹುಲಿ ಸಂರಕ್ಷಿತ ಪ್ರದೇಶದ (ಬಿಆರ್‌ಟಿ) ಡಿಸಿಎಫ್ ದೀಪ್.ಜೆ ತಿಳಿಸಿದ್ದಾರೆ.

4 ರಾಜ್ಯಗಳಲ್ಲಿ ಏಕಕಾಲಕ್ಕೆ ಆನೆ ಗಣತಿ: ಇದು ಎರಡನೇ ಆನೆ ಗಣತಿಯಾಗಿದೆ. ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳ ಸೇರಿ ದಕ್ಷಿಣ ಭಾರತದ ನಾಲ್ಕು ರಾಜ್ಯಗಳಲ್ಲಿ ಏಕಕಾಲಕ್ಕೆ ಆನೆ ಗಣತಿ ನಡೆಯುತ್ತಿದೆ. ಆನೆಗಳ ಬಾಹ್ಯ ಗಾಯಗಳು, ದಂತದ ಗಾತ್ರ ಮತ್ತು ಅದರ ದಂತವಿಲ್ಲದ ಗಂಡು ಆನೆ ಸಂಖ್ಯೆಯನ್ನೂ ಪತ್ತೆ ಮಾಡಲಾಗುತ್ತದೆ. ಆನೆಗಳ ನಡವಳಿಕೆ ಮತ್ತು ಚಲನವಲನಗಳ ಬಗ್ಗೆಯೂ ಅಧ್ಯಯನ ನಡೆಸಲಾಗುತ್ತದೆ.

ಬುದ್ಧ, ಬಸವ, ಅಂಬೇಡ್ಕರ್ ವಿಚಾರಧಾರೆಗಳು ಸರ್ವಕಾಲಕ್ಕೂ ಪ್ರಸ್ತುತ

- ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ
- ಅಸಮಾನತೆ ಇದ್ದೆಡೆ ಶೋಷಣೆ ಸಹಜವಾಗಿ ಬೆಳೆಯುತ್ತದೆ
- ಜಾತಿ ವ್ಯವಸ್ಥೆ ಬಾವಿಯೊಳಗಿನ ಕಸವಿದ್ದಂತೆ; ಅದನ್ನು ತೆರವುಗೊಳಿಸಿದರೆ ತಿಳಿ ನೀರಿನ 'ಸಮ ಸಮಾಜ' ನಿರ್ಮಾಣ

ಮೈಸೂರು, ಮೇ 23(ಎಂಕೆ)– ಮನುಷ್ಯ–ಮನುಷ್ಯರನ್ನು ಪ್ರೀತಿಸಿ, ವಿಶ್ವಮಾನವರಾಗಿ ಅಲ್ಪ ಮಾನವರಾಗಬೇಡಿ, ಮೇಲು–ಕೀಳು ಎಂಬುದನ್ನು ಕಿತ್ತೆಸೆಯಿರಿ ಎಂಬ ಭಗವಾನ್ ಬುದ್ಧ, ಬಸವಣ್ಣ ಹಾಗೂ ಅಂಬೇಡ್ಕರ್ ವಿಚಾರ ಧಾರೆಗಳು ಸರ್ವಕಾಲಕ್ಕೂ ಪ್ರಸ್ತುತ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ಅಶೋಕ ವೃತ್ತದ ಸಮೀಪದಲ್ಲಿರುವ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ನಡೆದ ವೈಶಾಖ ಬುದ್ಧ ಪೂರ್ಣಿಮ ಭಗವಾನ್ ಬುದ್ಧರ 2568ನೇ ಜನ್ಮದಿನಾಚರಣೆಯನ್ನು ಬೋಧಿವೃಕ್ಷಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ವರ್ಣಾಶ್ರಮ ವ್ಯವಸ್ಥೆಯಿಂದ ಅಸಮಾನತೆ ಸೃಷ್ಟಿಯಾಯಿತು. ಅಸಮಾನತೆ ಇರುವಲ್ಲಿ ಶಾಂತಿ, ಸಮಾನತೆ ನೆಲೆಸಲು ಸಾಧ್ಯವಾಗಲ್ಲ. ಅನೇಕ ಸಮಾಜದ ಸುಧಾರಕರು ಸಮ–ಸಮಾಜದ ಕನಸನ್ನು ಕಂಡು ಸಮ–ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದರಾದರೂ ಸಾಧ್ಯವಾಗಿಲ್ಲ. ಏಕೆಂದರೆ ನಮ್ಮ ಸಾಮಾಜಿಕ ಜಾತಿ ವ್ಯವಸ್ಥೆಗೆ ಚಲನೆ ಇಲ್ಲ. ಚಲನಾರಹಿತ ಜಾತಿ ವ್ಯವಸ್ಥೆಯಲ್ಲಿ ಬದಲಾವಣೆ ಕಷ್ಟ ಎಂದರು.

ಅಸಮಾನತೆ ಇದ್ದರೆ ಶೋಷಣೆ ತಾನಾಗಿಯೇ ಬೆಳೆಯುತ್ತದೆ. ಶೋಷಣೆ ಬೆಳೆದರೆ ಗುಲಾಮಗಿರಿ ವ್ಯವಸ್ಥೆಯೂ ತಾನಾಗಿಯೇ ಬೆಳೆಯಲು ಸಾಧ್ಯವಾಗುತ್ತದೆ. ಅತ್ಯಂತ ಕಡು ಬಡವ ಮೇಲ್ಜಾತಿಯವರನ್ನು ಬುದ್ಧಿ, ಸ್ವಾಮಿ ಅಂತ ಗೌರವಿಸುತ್ತೇವೆ. ಅದೇ ಅನುಕೂಲಸ್ಥ ಕೆಳ ಜಾತಿಯವರನ್ನು ಏಕವಚನದಲ್ಲಿ ಅಗೌರವದಿಂದ ಕರೆಯುತ್ತೇವೆ. ಇದೇ ಗುಲಾಮಗಿರಿ ಮನಸ್ಥಿತಿ. ಈ ಮನಸ್ಥಿತಿಯನ್ನು ಅಳಿಸಲು ಬುದ್ಧ, ಬಸವ, ಅಂಬೇಡ್ಕರ್ ಸೇರಿ ಹಲವರು ಶ್ರಮಿಸಿದರು. ಜಾತಿ ವ್ಯವಸ್ಥೆ ಬಾವಿಯಲ್ಲಿ ಬಿದ್ದ ಕಸ(ಸೆತ್ತೆ)ದಂತೆ. ಕೊಡದಲ್ಲಿ ನೀರು ಸೇದುವಾಗ ಕಸ ಪಕ್ಕಕ್ಕೆ ಸರಿಯುತ್ತದೆ. ನೀರು ಸೇದಿದ ಮೇಲೆ ಮತ್ತೆ ಕಸ(ಸೆತ್ತೆ ಒಂದಾಗುತ್ತದೆ)ತುಂಬಿಕೊಳ್ಳುತ್ತದೆ. ಆದ್ದರಿಂದ ಕಸವನ್ನೇ ಬಾವಿಯಿಂದ ತೆಗೆದು ಹೊರಗೆ ಹಾಕಿದರೆ ತಿಳಿ ನೀರೆಂಬ ಸಮ–ಸಮಾಜ ನಿರ್ಮಾಣವಾಗುತ್ತದೆ. ಈ ಅಸಮಾನತೆ ಅಳಿಸುವ ಉದ್ದೇಶದಿಂದಲೇ ನಾವು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ್ದೇವೆ. ಆರ್ಥಿಕವಾಗಿ ಶಕ್ತಿ ಬಂದರೆ ಸ್ವಾಭಿಮಾನಿಗಳಾಗುತ್ತಾರೆ. ಮಹಿಳೆಯರಲ್ಲಿ, ಬಡವರಲ್ಲಿ ಆರ್ಥಿಕ ಶಕ್ತಿ ತುಂಬುವ ಮೂಲಕ ಅವರನ್ನು ಸ್ವಾಭಿಮಾನಿಗಳನ್ನಾಗಿ ಮಾಡುವ ಕಾರ್ಯ ನಮ್ಮ ಸರ್ಕಾರ ಮಾಡುತ್ತಿದೆ ಎಂದರು.

ಪುಕ್ಕಲರು: ತಾವೊಬ್ಬರೇ ಶ್ರೇಷ್ಠರು ಎಂದು ಕರೆಸಿಕೊಳ್ಳುವವರು ಬಹಳ ಪುಕ್ಕಲರಾಗಿರುತ್ತಾರೆ. ಶ್ರೇಷ್ಠತೆಯ ವ್ಯಸನ ಹೊಂದಿದ್ದ ಹಿಟ್ಲರ್ ಲಕ್ಷಾಂತರ ಜನರ ಕೊಲೆಗೆ ಕಾರಣರಾದರು. ಪುಕ್ಕಲರು ಮಾತ್ರ ತಾವೊಬ್ಬರೇ ಶ್ರೇಷ್ಠರು ಎಂದು ಬಿಂಬಿಸಿಕೊಳ್ಳಲು ಒದ್ದಾಡುತ್ತಾರೆ ಎಂದು ವ್ಯಂಗ್ಯವಾಡಿದರಲ್ಲದೆ ನಾವುಗಳು ಬುದ್ಧ, ಬಸವ, ಅಂಬೇಡ್ಕರ್, ಕುವೆಂಪು ಆಗಲು ಸಾಧ್ಯವಿಲ್ಲ. ಆದರೆ ಅವರ ಹಾದಿಯಲ್ಲಾದರೂ ನಡೆಯಬೇಕು. ಬಸವಣ್ಣರನ್ನು ಪೂಜಿಸುತ್ತಾ ಇವನಾರವ.. ಇವನಾರವ.. ಇವಾ ನಮ್ಮವ ಎಂಬ ವಚನ ಹೇಳಿ ಕಡೆಗೆ ನೀನು ಯಾವ ಜಾತಿ ಎಂದು ಕೇಳುವ ಜಾತಿ ಮನಸ್ಥಿತಿ ಇಟ್ಟುಕೊಳ್ಳುವುದು ತಪ್ಪು. ವಿದ್ಯಾವಂತರೇ ಹೆಚ್ಚು ಜಾತಿವಾದಿಗಳಾಗುತ್ತಿರುವುದು ದುರಂತದ ಸಂಗತಿ. ಆದ್ದರಿಂದ ವೈಚಾರಿಕತೆ ಮತ್ತು ಮಾನವೀಯತೆ ಇರುವ ಗುಣಮಟ್ಟದ ಶಿಕ್ಷಣ ವ್ಯವಸ್ಥೆ ರೂಪಿಸಬೇಕಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಗತಿಯ ಶತ್ರುಗಳು: ಪಟ್ಟಭದ್ರ ಹಿತಾಸಕ್ತಿಗಳು ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ ಕಾಲದಲ್ಲೂ ಇದ್ದರು. ಈಗಲೂ ಇದ್ದಾರೆ. ಇವರು ಸಮಾಜದ ಪ್ರಗತಿಯ ಶತ್ರುಗಳು. ಆದರೆ ನಮ್ಮ ಸಂವಿಧಾನ ಎಲ್ಲಾ ಜಾತಿ ಸಮುದಾಯಗಳಿಗೂ ಸಮಾನ ಅವಕಾಶ ಕಲ್ಪಿಸುತ್ತದೆ. ಆದ್ದರಿಂದ ಸಂವಿಧಾನದ ಜ್ಞಾನ ಸರ್ವರಿಗೂ ಅಗತ್ಯ ಎಂದರು.

ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ವಿಧಾನಪರಿಷತ್ ಸದಸ ಡಾ.ತಿಮ್ಮಯ್ಯ, ಶಾಸಕ ಎ.ಆರ್. ಕೃಷ್ಣಮೂರ್ತಿ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್, ಮಾಜಿ ಮೇಯರ್ ಪುರುಷೋತ್ತಮ್, ಬೆಂಗಳೂರು ವಿವಿ ಮನೋವಿಜ್ಞಾನ ವಿಭಾಗದ ಡಾ.ಮೀನಾಕ್ಷಿ, ಅಶೋಕಪುರಂ ಆದಿಕರ್ನಾಟಕ ಮಹಾ ಸಂಸ್ಥೆಯ ವಿ.ರಾಮಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಬೃಹತ್ ಪ್ರತಿಮೆ ನಿರ್ಮಾಣಕ್ಕೆ ಮನವಿ...

ಸರ್ಕಾರದ ವತಿಯಿಂದ ಭಗವಾನ್ ಬುದ್ಧರ ಜಯಂತಿ ಆಚರಣೆ. ಬೌದ್ಧ ಧರ್ಮದ ಉನ್ನತಿಗಾಗಿ ಬೌದ್ಧ ಅಭಿವೃದ್ಧಿ ನಿಗಮ ರಚನೆ. ಹಳೇ ಮೈಸೂರು ಪ್ರಾಂತ್ಯದ ಅಶೋಕಪುರಂ ವ್ಯಾಪ್ತಿಯ ಬುದ್ಧವಿಹಾರ ಅಭಿವೃದ್ಧಿಗೆ 5 ಕೋಟಿ ರೂ.ಅನುದಾನ ನೀಡುವುದು ಹಾಗೂ ಬಾಬಾ ಸಾಹೇಬರ ಆಶಯಗಳನ್ನು ಬಿತ್ತರಿಸಿ ಗೌರವ ಸೂಚಿಸುವ ಸಲುವಾಗಿ ನಾಡಿನ ಜನರ ಆಶಯದಂತೆ ತೆಲಂಗಾಣ ಮಾದರಿಯಲ್ಲಿ ರಾಜ್ಯದಲ್ಲಿಯೂ ಮೈಸೂರು–ಬೆಂಗಳೂರು ಹೆದ್ದಾರಿ ನಡುವೆ 150 ಅಡಿ ಎತ್ತರದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಯನ್ನು ನಿರ್ಮಿಸಿ ಜ್ಞಾನಕೇಂದ್ರವನ್ನಾಗಿ ಮಾಡುವಂತೆ ಮನವಿ ಸಲ್ಲಿಸಲಾಯಿತು.



ಮೈಸೂರಿನ ಅಶೋಕ ವೃತ್ತದ ಸಮೀಪದಲ್ಲಿರುವ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಗುರುವಾರ ಆಯೋಜಿಸಿದ್ದ ವೈಶಾಖ ಬುದ್ಧ ಪೂರ್ಣಿಮ ಭಗವಾನ್ ಬುದ್ಧರ 2568ನೇ ಜನ್ಮದಿನಾಚರಣೆಯಲ್ಲಿ ಭಾಗವಹಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಭಗವಾನ್ ಬುದ್ಧರ ವಿಗ್ರಹಕ್ಕೆ ಪುಷ್ಪನಮನ ಸಲ್ಲಿಸಿದರು. ವಿಶ್ವಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣಸಿರಿ ಭಂತೇಜಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಮತ್ತಿತರರಿದ್ದರು.

ಬುದ್ಧ ಎಂದರೆ ಎಚ್ಚೆತ್ತವರು...

ಬುದ್ಧ ಜಯಂತಿ ಅರಿವಿನ ಜಯಂತಿಯಾಗಿದೆ. ಬುದ್ಧ ಜಯಂತಿ ಎಂದರೆ ಎಚ್ಚೆತ್ತವರು, ಎಚ್ಚರಗೊಂಡವರು ಎಂದರ್ಥ. ಎಲ್ಲೆಲ್ಲಿ ಪ್ರಜ್ಞೆ, ಕರುಣೆ, ಪ್ರೀತಿ, ಮಮತೆ, ಸಮತೆ, ಸಹೋದರತ್ವ, ಮಾತೃತ್ವ, ಭ್ರಾತೃತ್ವ, ಬಂಧುತ್ವ ಇರುವೆಡೆಯಲ್ಲಾ ಬುದ್ಧರ ಅಂತಃಕರಣ ಗೋಚರವಾಗುತ್ತದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಾನವೀಯ ಮೌಲ್ಯಗಳು ಗೋಚರವಾಗುತ್ತದೆ. ವಿಶ್ವದಲ್ಲೇ ಬುದ್ಧರ ಚಿಂತನೆಗಳು ಚರ್ಚೆಯಾಗುತ್ತಿತ್ತು ಬದಲಾವಣೆಯ ಪರ್ವ ಆರಂಭವಾಗಿದೆ.

– **ಡಾ.ಕಲ್ಯಾಣಸಿರಿ ಭಂತೇಜಿ,** ವಿಶ್ವಮೈತ್ರಿ ಬುದ್ಧವಿಹಾರ

ದೇವರೇ ಅಲ್ಲ...!

ಬಹಳ ಜನರು ವೈಚಾರಿಕತೆ ಬೆಳೆಸಿಕೊಳ್ಳುವ ಪ್ರಯತ್ನವನ್ನೇ ಮಾಡಲ್ಲ. ಬಟ್ಟೆ ಇಲ್ಲದೆ, ಹೊಟ್ಟೆಗೆ ಇಟ್ಟಿಲ್ಲದೆ ಹುಟ್ಟಿದ್ದೀಯಾ ಎಂದರೆ ನಮ್ಮ ಹಣೇಬರಹ ಸ್ವಾಮಿ ಎನ್ನುತ್ತಾರೆ. ದೇವರು ಹಣೆಯಲ್ಲಿ ಬರೆದಿದ್ದಾನಾ... ಬುದ್ಧ ದೇವರ ಇರುವಿಕೆಯನ್ನೇ ಒಪ್ಪಲಿಲ್ಲ. ನಿನಗೆ ಬಟ್ಟೆ, ಮನೆ ಇರ್‌ಬಾರದು. ಆತನಿಗೊಬ್ಬನಿಗೆ ಎಲ್ಲವೂ ಇರಬೇಕು ಎಂದು ಬರೆಯುವ ದೇವರು ದೇವರೇ ಅಲ್ಲ. ಮನುಷ್ಯರಲ್ಲಿ ಭೇದ ಮಾಡುವುದೆಲ್ಲವೂ ಹೋಗಬೇಕು. ಸ್ವಾರ್ಥಕ್ಕಾಗಿ ಏನೇ ಹೇಳಿದರೂ ವಿದ್ಯಾವಂತರು ವೈಚಾರಿಕತೆಯನ್ನು ಬೆಳೆಸಿಕೊಳ್ಳಬೇಕು. ಅಂಬೇಡ್ಕರ್ ಅವರು ಹಿಂದೂ ಧರ್ಮ ಸುಧಾರಣೆಗೆ ಬಹಳ ಪ್ರಯತ್ನ ಮಾಡಿದರು. ಆದರೆ ಸುಧಾರಣೆ ಆಗದಿದ್ದರಿಂದ ಹಿಂದೂವಾಗಿ ಹುಟ್ಟಿದ್ದರೂ ಹಿಂದೂವಾಗಿ ಸಾಯಲಾರೆ ಎಂದು ಮೌಢ್ಯವಿಲ್ಲದ ಬೌದ್ಧ ಧರ್ಮವನ್ನು ಸ್ವೀಕರಿಸಿದರು.

– **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಸಿಡಿ ಶಿವುಗೆ ಡ್ರಿಲ್ ಮಾಡಿದರೆ ಸತ್ಯ ತಾನಾಗಿಯೇ ಬಹಿರಂಗವಾಗಲಿದೆ!

ಜಾತ್ಯಾತೀತ ಜನತಾದಳ ಆಗ್ರಹ

ಮೈಸೂರು, ಮೇ 23(ಬಿಎಲ್‌ಯು)– ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣ ಸಂಬಂಧ ಎಸ್‌ಐಟಿ ಅಧಿಕಾರಿಗಳು ಸಿಡಿ ಶಿವು (ಡಿ.ಕೆ. ಶಿವಕುಮಾರ್) ಹಿಡಿದು ಡ್ರಿಲ್ ಮಾಡಿದರೆ ಸತ್ಯ ತಾನಾಗಿಯೇ ಬಹಿರಂಗವಾಗಲಿದೆ ಎಂದು ಜಾತ್ಯಾತೀತ ಜನತಾ ದಳ ಆಗ್ರಹಿಸಿದೆ. ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಜೆಡಿಎಸ್, ಈ ವಿಚಾರಗಳು ಶಿವಕುಮಾರ್ ಇನ್ವೆಸ್ಟಿಗೇಷನ್ ಟೀಮ್ (ಎಸ್‌ಐಟಿ)ಗೆ ಗೊತ್ತಿಲ್ಲವೆಂದರೆ ಅದು ಶತಮಾನದ ಜೋಕಷ್ಟೆ ಅಲ್ಲ, ಸಿಡಿ ಶಿವು ಪೂರ್ವಾಶ್ರಮಕ್ಕೆ ಮಾಡಿದ ಘೋರ ಅಪಚಾರ. ಅಷ್ಟೆ ಅಲ್ಲದೆ ಶತಮಾನ ಕಂಡು ಕೇಳರಿಯದ ಸೋಜಿಗ ಎಂದು ಹೇಳಿದೆ.

ಪ್ರಜ್ವಲ್ ಎಲ್ಲಿರಬಹುದು ಎಂಬ ವಿಷಯ ನಿಮ್ಮ ಸಿಡಿ ಶಿವುಗೆ ಬಹಳ ಚೆನ್ನಾಗಿ ಗೊತ್ತಿದೆ. ಅವರನ್ನೆ ಕೇಳಿದರೆ ಉತ್ತಮವಲ್ಲವೆ ಎಂದು ಪ್ರಶ್ನಿಸಿರುವ ಜೆಡಿಎಸ್, ಸಖ್ಯ ಮತ್ತು ಸೌಖ್ಯದ ಬಗ್ಗೆ ಅವರಿಗಿಂತ ಬಲ್ಲವರು ಉಂಟೇ ಕಪಟ ಕಾಂಗಿಗಳೇ ಎಂದು ಹೇಳಿದೆ.

ಪೆನ್‌ಡ್ರೈವ್ ಫ್ಯಾಕ್ಟರಿ ಒರಿಜಿನಲ್ ಓನರ್, ಸಿಡಿ ಸಂಚುಕೋರ ಸಿಡಿ ಶಿವು ಕಣ್ಸನ್ನೆಯಂತೆ ಅವರ ಚೇಲಾಗಳು ನಡೆಸಿದ ಪೆನ್ ಡ್ರೈವ್ ಸಮಾರಾಧನೆ ಯಾರಿಗೆ ಗೊತ್ತಿಲ್ಲ ಹೇಳಿ ಎಂದು ಜೆಡಿಎಸ್ ಪ್ರಶ್ನಿಸಿದೆ. ಎಫ್‌ಐಆರ್ ಆದ ಮೇಲೆ ಕಾಲ್ಕಿತ್ತ ಪೆನ್ ಡ್ರೈವ್ ಪಿಶಾಚಿಗಳು, ಕೋರ್ಟ್ ಜಾಮೀನು ನಿರಾಕರಿಸಿದ ನಂತರವೂ ಎಸ್‌ಐಟಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದಾರೆ. ಇವರೆಲ್ಲಾ ಸಿಡಿ ಶಿವು ಆಸ್ಥಾನದಲ್ಲಿ ಓಡಾಡುತ್ತಿರುವುದು ಯಾರಿಗೆ ಗೊತ್ತಿಲ್ಲ ಹೇಳಿ ಎಂದು ಮರು ಪ್ರಶ್ನಿಸಿದೆ. ಅಸಲಿ ಎಸ್‌ಐಟಿ, ಸಿಡಿ ಶಿವು ನೇತೃತ್ವದ ಎಸ್‌ಐಟಿ ತಂಟೆಗೆ ಹೋಗುತ್ತಿಲ್ಲ. ವಿಧಾನಸೌಧದ ಗಾಡ್ ಫಾದರ್‌ಗಳ ಕಚೇರಿಯಲ್ಲಿಯೇ ಪೆನ್ ಡ್ರೈವ್ ಪಿಶಾಚಿಗಳು ಕಳ್ಳರಂತೆ ಅವಿತಿದ್ದರೂ ಕೂಗಳತೆ ದೂರದಲ್ಲಿರುವ ಎಸ್‌ಐಟಿಗೆ ಸೊಳ್ಳೆ ಕಚ್ಚಿದ ಹಾಗೆಯೂ ಆಗುತ್ತಿಲ್ಲ ಎಂದು ಹೇಳಿದೆ. ಅವರೆಲ್ಲಾ ಎಲ್ಲಿದ್ದಾರೆ, ಇವರು ಎಲ್ಲಿದ್ದಾರೆ ಎನ್ನುವುದನ್ನು ನಿಮ್ಮ ಸಿಡಿ ಶಿವುಗೆ ಕೇಳಪ್ಪಾ ಎಂದು ಜೆಡಿಎಸ್ ಸಲಹೆ ನೀಡಿದೆ. ರಾಜ್ಯದ ಜನರು ಶೀಘ್ರದಲ್ಲಿಯೇ ಸಿಡಿ ಶಿವು ಎಲ್ಲಿದ್ದೀಯಪ್ಪಾ ಎಂದು ಕೇಳುವ ದಿನವೂ ದೂರವಿಲ್ಲ ಎಂದು ಜೆಡಿಎಸ್ ಭವಿಷ್ಯ ನುಡಿದಿದೆ.

ಪರಿಷತ್ ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸಲು ಮನವಿ

ಮೈಸೂರು,ಮೇ 23(ಎಂಟಿವೈ)– ವಿಧಾನ ಪರಿಷತ್‌ಗೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ನಡೆಯುವ ಚುನಾವಣೆಯಲ್ಲಿ ತಾವು ಪಕ್ಷೇತರರಾಗಿ ಸ್ಪರ್ಧಿಸಿದ್ದು, ಮತದಾರರು ತಮ್ಮನ್ನು ಬೆಂಬಲಿಸುವಂತೆ ಉಪನ್ಯಾಸಕ ಡಾ.ಎಸ್. ಅನಿಲ್‌ಕುಮಾರ್ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಕ್ಷಕರು ವಿಧಾನಪರಿಷತ್ ಪ್ರವೇಶಿಸಲು ಅವಕಾಶವಿರುವ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಬೋಧಕ ವರ್ಗ ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಬದ್ಧವಾಗಿರುವ ಯಾವುದೇ ಅಭ್ಯರ್ಥಿಗಳು ಕಣದಲ್ಲಿಲ್ಲದ ಕಾರಣ ಈ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದೇನೆ. ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ಕೊಡುಗೆ ನೀಡುವ ನಿಟ್ಟಿನಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಆದರೆ, ಶಿಕ್ಷಕರ ಕ್ಷೇತ್ರದಲ್ಲಿ ಶಿಕ್ಷಕರನ್ನು ಆಯ್ಕೆ ಮಾಡದೇ ಇದುವರೆಗೆ ರಾಜಕಾರಣಿಗಳ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ಹಾಗಾಗಿ ಪಕ್ಷೇತರ ಅಭ್ಯರ್ಥಿಯಾಗಿರುವ ತಮ್ಮನ್ನು ಬೆಂಬಲಿಸಲು ಕೋರಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಬಿ.ಆರ್.ನೃಪತುಂಗ, ಸಂದೇಶ್ ಇನ್ನಿತರರು ಉಪಸ್ಥಿತರಿದ್ದರು.

ವಿವಿಧೆಡೆ ನಾಳೆ ವಿದ್ಯುತ್ ವ್ಯತ್ಯಯ



ಮೈಸೂರು, ಮೇ 23–ನಿರ್ವಹಣಾ ಕೆಲಸದ ನಿಮಿತ್ತ ಮೇ 25ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮೈಸೂರು ನಗರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಿಜಯನಗರ 4ನೇ ಹಂತ, ಕೆ.ಹೆಚ್.ಬಿ ಕಾಲೋನಿ, ಹೂಟಗಳ್ಳಿ, ಬೆಳವಾಡಿ, ಬಸವನಪುರ, ಮರಟಿಕ್ಯಾತನಹಳ್ಳಿ, ಪಂಚಚಾರ್ಯ ಲೇಔಟ್, ಕೆ.ಹೆಮ್ಮನಹಳ್ಳಿ, ಲಿಂಗದೇವರಕೊಪ್ಪಲು, ಇಲವಾಲ, ಕೆಆರ್‌ಎಸ್ ರೋಡ್, ಆದಿತ್ಯಾ ಬಡಾವಣೆ, ಎಸ್‌ಆರ್‌ಎಸ್ ಕಾಲೋನಿ, ಕೂರ್ಗಳ್ಳಿ, ಎನ್.ಹೆಚ್.ಬಿ ಕಾಲೋನಿ, ಬೆಳವಾಡಿ ಕೈಗಾರಿಕಾ ಪ್ರದೇಶ, ಶಾಹಿ ಗಾರ್ಮೆಂಟ್ಸ್, ಹೂಟಗಳ್ಳಿ ಕೈಗಾರಿಕಾ ಪ್ರದೇಶ, ಕೂರ್ಗಳ್ಳಿ ಕೈಗಾರಿಕಾ ಪ್ರದೇಶ, ಗ್ರ್ಯಾಂಡ್ ಮೌರ್ಯ ಹೋಟೆಲ್, ರಿಲಾಯನ್ಸ್, ಮಾಸ್ ಫರ್ನಿಚರ್ಸ್, ಯಶಸ್ವಿನಿ ಕಲ್ಯಾಣ ಮಂಟಪ, ಸೌಪರ್ಣಿಕ ಅಪಾರ್ಟ್‌ಮೆಂಟ್ ಹಿನಕಲ್, ಎಸ್‌ವಿಇಐ ಕಾಲೇಜು ಸುತ್ತಮುತ್ತ, ಜಟ್ಟಿಹುಂಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಡಿ.ಎಂ.ಜಿ.ಹಳ್ಳಿ, ಕಮರಹಳ್ಳಿ, ಮಾಣಿಕ್ಯಪುರ, ದೊಡ್ಡಹಟ್ಟಿಹುಂಡಿ, ಮರಿಯ್ಯನಹುಂಡಿ, ಕಟ್ಟೆಹುಂಡಿ, ಶೆಟ್ಟಿನಾಯಕನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಪ್ರದೇಶಗಳು.

ಗೋಕುಲಂ 1ನೇ ಮತ್ತು 2ನೇ ಹಂತ, ಮಾದೇಶ್ವರ ಬಡಾವಣೆ, ವಿಜಯನಗರ 1ನೇ ಮತ್ತು 2ನೇ ಹಂತ, ಹಿನಕಲ್, ಯಾದವಗಿರಿ, ಮಂಜುನಾಥಪುರ, ಮಹಾಜನ ಲೇಔಟ್, ಒಂಟಿಕೊಪ್ಪಲ್, ಗೋಕುಲಂ 3ನೇ ಹಂತ, ಜಯಲಕ್ಷ್ಮಿಪುರಂ, ಸಿ.ಎಫ್.ಟಿ.ಆರ್.ಐ, ಡಿ.ಸಿ.ಹೌಸ್, ನರ್ಸ್ ಕ್ವಾಟ್ರಸ್, ಆಕಾಶವಾಣಿ, ಇ.ಎಸ್.ಐ ಆಸ್ಪತ್ರೆ, ಹಸುಕರು ಪಾರ್ಕ್, ಗೋಕುಲಂ ಪಾರ್ಕ್, ಕಾಳಿದಾಸ ರೋಡ್, ಯಾದವಗಿರಿ ಕೈಗಾರಿಕಾ ಪ್ರದೇಶ, ವಿಜಯನಗರ ವಾಟರ್ ಸಪ್ಲೈ, ಆದಿಪಂಪ ರಸ್ತೆ ಎಂ.ಎಂ.ಸಿ ಲೇಡಿಸ್ ಹಾಸ್ಟೆಲ್, ಜನರಲ್ ತಿಮ್ಮಯ್ಯ ರಸ್ತೆ, ಬೃಂದಾವನ, ಯೋಗನರಸಿಂಹಸ್ವಾಮಿ ದೇವಸ್ಥಾನ, ಆಯಿಸ್ಟಾರ್ ಬೇ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಮಿಲೇನಿಯಂ ಸರ್ಕಲ್‌ನಲ್ಲಿ ಈಗ ಸಂಚಾರ ಸುಗಮ

ನರಸಿಂಹರಾಜ ಸಂಚಾರ ಪೊಲೀಸರ ಸುಧಾರಣಾ ಕ್ರಮಕ್ಕೆ ಸಾರ್ವಜನಿಕರಿಂದ ಪ್ರಶಂಸೆ





ಮೈಸೂರು, ಮೇ 23 (ಆರ್‌ಕೆ)– ಸಂಚಾರ ದಟ್ಟಣೆಯಿಂದಾಗಿ ಆಗಿಂದಾಗ ಅಪಘಾತ, ಸಂಚಾರ ಕಿರಿಕಿರಿ ಆಗುತ್ತಿದ್ದ ಮೈಸೂರಿನ ಮಿಲೇನಿಯಂ ಸರ್ಕಲ್‌ನ ಸೇಂಟ್ ಫಿಲೋಮಿನಾ ಕಾಲೇಜು ಗೇಟ್ ಬಳಿ ರಸ್ತೆ ವಿಭಜಕ ಅಳವಡಿಸಲಾಗಿದೆ.

ಸುಭಾಷ್‌ನಗರ, ಶ್ರೀರಂಗಪಟ್ಟಣದಿಂದ ಬರುವ ವಾಹನಗಳು ಮಿಲೇನಿಯಂ ಸರ್ಕಲ್ ಬಳಿಯ ಸೇಂಟ್ ಫಿಲೋಮಿನಾ ಕಾಲೇಜು ದಕ್ಷಿಣ ಗೇಟ್ ಬಳಿ ಬಲ ಭಾಗಕ್ಕೆ ತಿರುಗುತ್ತಿದ್ದರಿಂದ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಮಿಲೇನಿಯಂ ಸರ್ಕಲ್‌ನಿಂದ ಬಂದು ಸುಭಾಷ್‌ನಗರ ಕಡೆಗೆ ಹೋಗಲು ಬಲಕ್ಕೆ ತಿರುಗುತ್ತಿದ್ದ ಕಾರಣ ಅಪಘಾತಗಳು ಸಂಭವಿಸುತ್ತಿದ್ದವು.

ಬೆಳಿಗ್ಗೆ ಮತ್ತು ಸಂಜೆ ವೇಳೆಯಂತೂ ಈ ಜಂಕ್ಷನ್‌ನಲ್ಲಿ ವಾಹನ ಸವಾರರು ನಾ ಮುಂದು, ತಾ ಮುಂದು ಎಂಬಂತೆ ನುಗ್ಗುತ್ತಿದ್ದರಿಂದ ಕೆಲ ಸಂದರ್ಭ ಸ್ಥಳದಲ್ಲಿ ಟ್ರಾಫಿಕ್ ಜಾಮ್ ಆಗುತ್ತಿತ್ತು. ಪರಿಣಾಮ ಆಂಬುಲೆನ್ಸ್, ಶಾಲಾ ಮಕ್ಕಳ ವಾಹನಗಳು ಕೆಎಸ್‌ಆರ್‌ಟಿಸಿ ಬಸ್ಸುಗಳ ಸಂಚಾರಕ್ಕೆ ತೊಂದರೆ ಉಂಟಾಗುತ್ತಿತ್ತು.

> “ಸದರಿ ಸ್ಥಳದಲ್ಲಿ ವಾಹನ ಸವಾರರು ಅಡ್ಡಾದಿಡ್ಡಿ ನುಗ್ಗುತ್ತಿದ್ದರಿಂದ ಅಪಘಾತಗಳು ಸಂಭವಿಸುತ್ತಿದ್ದವು. ಇದೀಗ ರಸ್ತೆ ವಿಭಜಕ ಅಳವಡಿಸಿರುವುದರಿಂದ ಸಮಸ್ಯೆ ನಿವಾರಣೆಯಾಗಿದೆ. ಕೆಲ ಯುವಕರು ಒಮ್ಮೊಮ್ಮೆ ಮಧ್ಯ ಮೀಡಿಯನ್ ಅನ್ನು ಪಕ್ಕಕ್ಕೆ ಸರಿಸಿ ಚಾಲನೆ ಮಾಡುತ್ತಿರುವುದು ಕಂಡುಬಂದಿದೆ. ಕ್ರಮೇಣ ಈ ಸಮಸ್ಯೆಯನ್ನು ನಿವಾರಿಸುತ್ತೇವೆ.
>
> **–ರೇಖಾ ಭಾಯಿ, ಎನ್‌ಆರ್ ಸಂಚಾರ ಠಾಣೆ ಇನ್ಸ್‌ಪೆಕ್ಟರ್**

ಈ ಸಮಸ್ಯೆ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಖುದ್ದು ಪರಿಶೀಲಿಸಿ, ಅಪರಾಧ ಮತ್ತು ಸಂಚಾರ ಡಿಸಿಪಿ ಎಸ್.ಜಾಹ್ನವಿ, ಸಂಚಾರ ಉಪವಿಭಾಗದ ಎಸಿಪಿ ಪರಶುರಾಮಪ್ಪರೊಂದಿಗೆ ಸಭೆ ನಡೆಸಿ, ಸ್ಥಳದಲ್ಲಿ ಮೀಡಿಯನ್ ಅಳವಡಿಸಲು ಸಲಹೆ ನೀಡಿದ್ದರು.

ಅದರಂತೆ ಒಂದು ವಾರದವರೆಗೆ ಸ್ಥಳದಲ್ಲಿ ಸಂಚಾರ ಸಮಸ್ಯೆ ಬಗ್ಗೆ ಖುದ್ದು ಪರಿಶೀಲನೆ ನಡೆಸಿದ ಎಸಿಪಿ ಪರಶುರಾಮಪ್ಪ ಹಾಗೂ ಎನ್‌ಆರ್ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ರೇಖಾ ಬಾಯಿ, ಎಲ್‌ಐಸಿ ಕಟ್ಟಡದಿಂದ ಸೆಂಟ್ ಫಿಲೋಮಿನಾ ಕಾಲೇಜು ಸೌತ್ ಕಾಂಪೌಂಡ್‌ವರೆಗೆ ಯು ಆಕಾರದಲ್ಲಿ ಸಿಮೆಂಟ್ ಕಾಂಕ್ರಿಟ್ ರಸ್ತೆ ವಿಭಜಕಗಳನ್ನು ಅಳವಡಿಸಿದ್ದಾರೆ.

ಪರಿಣಾಮ, ಮಿಲೇನಿಯಂ ಸರ್ಕಲ್ ಕಡೆಯಿಂದ ಸುಭಾಷ್‌ನಗರ ಕಡೆಗೆ ಹೋಗುವ ವಾಹನಗಳು, ಬಲಕ್ಕೂ ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಕಡೆಯಿಂದ ಬರುವ ವಾಹನಗಳು ಎಡಕ್ಕೆ ತಿರುಗಿ ಸರಾಗವಾಗಿ ಸುಭಾಷ್‌ನಗರ ಕಡೆಗೆ ಸಂಚರಿಸುತ್ತಿವೆ.

ಅದೇ ರೀತಿ ಸುಭಾಷ್‌ನಗರ ಕಡೆಯಿಂದ ಬರುವ ವಾಹನಗಳು ಮೀಡಿಯನ್ ಅಳವಡಿಸಿರುವುದರಿಂದ ಸೆಂಟ್ ಫಿಲೋಮಿನಾ ಕಾಲೇಜು ಗೇಟ್ ಬಳಿ ಬಲಕ್ಕೆ ತಿರುಗಲು ಅಡ್ಡಿಯಾಗುವುದರಿಂದ ಕಡ್ಡಾಯವಾಗಿ ಎಡಕ್ಕೆ ತಿರುಗಿ ಎಲ್‌ಐಸಿ ಬಿಲ್ಡಿಂಗ್ ಮುಂದೆ ಮಿಲೇನಿಯಂ ಸರ್ಕಲ್ ಬಳಸಿಕೊಂಡು ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಕಡೆಗೆ ಸುರಕ್ಷಿತವಾಗಿ ಮುಂದೆ ಸಾಗುತ್ತಿವೆ.

ಮೀಡಿಯನ್ ಅಳವಡಿಸುವ ಮೊದಲು ಫೌಂಟನ್ ಸರ್ಕಲ್, ಹೈವೇ ಸರ್ಕಲ್ ಕಡೆಯಿಂದ ಬರುವ ವಾಹನ ತಿರುವು ಪಡೆಯಲು ಕಷ್ಟವಾಗುತ್ತಿತ್ತು. ಏಕೆಂದರೆ, ಸುಭಾಷ್‌ನಗರ ಕಡೆಯಿಂದ ಬರುವ ವಾಹನಗಳು, ಕಾಲೇಜು ಗೇಟ್ ಬಳಿ ಬಲಕ್ಕೆ ತಿರುಗುತ್ತಿದ್ದವು. ಪರಿಣಾಮ ಸ್ಥಳದಲ್ಲಿ ಆಗಿಂದಾಗ್ಗೆ ಅಪಘಾತಗಳು ಸಂಭವಿಸುತ್ತಿದ್ದವಲ್ಲದೆ ಪದೇ ಪದೆ ಟ್ರಾಫಿಕ್ ಜಾಮ್ ಆಗುತ್ತಿತು. ಇದೀಗ ಯು ಶೇಪ್ ರಸ್ತೆ ವಿಭಜಕ ಹಾಕಿರುವುದರಿಂದ ಈ ಜಂಕ್ಷನ್‌ನಲ್ಲಿ ಸಂಚಾರ ಸುಗಮವಾಗಿದ್ದು, ಎನ್‌ಆರ್ ಸಂಚಾರ ಠಾಣೆ ಪೊಲೀಸರ ಈ ಕ್ರಮಕ್ಕೆ ವಾಹನ ಸವಾರರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.



ಕರಾವಳಿ ಬೆಡಗಿ ರಚನಾ ರೈ 'ಡೆವಿಲ್' ಹೀರೋಯಿನ್!

ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿನಯದ 'ಡೆವಿಲ್' ಚಿತ್ರದ ನಾಯಕಿ ಯಾರಾಗಬಹುದೆಂಬ ಕುತೂಹಲಕ್ಕೆ ಇದೀಗ ತೆರೆ ಬಿದ್ದಿದೆ. ಈಗಾಗಲೇ ವಾಮನ ಸೇರಿದಂತೆ ಕೆಲವು ಚಲನಚಿತ್ರಗಳಲ್ಲಿ ನಾಯಕಿಯಾಗಿ ನಟಿಸಿರುವ ಪುತ್ತೂರಿನ ನಟಿ ರಚನಾ ರೈ 'ಡೆವಿಲ್' ಚಿತ್ರದಲ್ಲಿ ದರ್ಶನ್‌ಗೆ ಜೊತೆಯಾಗಿ ನಟಿಸಲಿದ್ದಾರೆ. ಪ್ರಕಾಶ್‌ವೀರ್ ನಿರ್ದೇಶನದ ಬಹುನಿರೀಕ್ಷಿತ 'ಡೆವಿಲ್' ಚಿತ್ರದ ಶೂಟಿಂಗ್ ಆರಂಭವಾದಾಗಿನಿಂದ ಒಂದಲ್ಲ ಒಂದು ವಿಷಯಕ್ಕೆ ಸುದ್ದಿಯಾಗುತ್ತಲೇ ಇದೆ. ಮೋಹನ್ ಬಿ. ಕೆರೆ ಸ್ಟುಡಿಯೋದಲ್ಲಿ 'ಡೆವಿಲ್' ಚಿತ್ರದ ಆಕ್ಷನ್ ಸನ್ನಿವೇಶಗಳ ಚಿತ್ರೀಕರಣ ನಡೆಯುತ್ತಿದ್ದಾಗ ದರ್ಶನ್ ಅವರು ತಮ್ಮ ಕೈಗೆ ಪೆಟ್ಟು ಮಾಡಿಕೊಂಡು, ನಂತರ ವಿಶ್ರಾಂತಿ ಪಡೆದು ಗುಣಮುಖರಾಗಿದ್ದರು. ಈ ಹಿಂದೆ ತುಳು ಸಿನಿಮಾವೊಂದರಲ್ಲಿ ನಟಿಸಿದ್ದ ರಚನಾ ರೈಗೆ ಶಂಕರ ರಾಮನ್ ಅವರ ನಿರ್ದೇಶನದ, ಧನ್ವೀರ್‌ಗೌಡ ಅಭಿನಯದ 'ವಾಮನ' ಮೊದಲ ಕನ್ನಡ ಚಿತ್ರ. ಮೂಲತಃ ಮಂಗಳೂರಿನವರಾದ ರಚನಾ ರೈ ತುಳು ಹಾಗೂ ಕನ್ನಡ ಚಿತ್ರರಂಗದಲ್ಲಿ ಸಕ್ರಿಯವಾಗಿರುವ ನಟಿ. ರಾಷ್ಟ್ರೀಯ ಮಟ್ಟದ ಬ್ಯಾಡ್ಮಿಂಟನ್ ಪ್ಲೇಯರ್, ಜೊತೆಗೆ ಉತ್ತಮ ಲೇಖಕಿ.

ಇದೀಗ ಚಾಲೆಂಜಿಂಗ್‌ಸ್ಟಾರ್ ದರ್ಶನ್ ಅಭಿನಯದ 57ನೇ ಸಿನಿಮಾ ಡೇವಿಲ್‌ಗೆ ನಾಯಕಿಯಾಗಿದ್ದಾರೆ. ಈಗಾಗಲೇ 'ಓ ಮೈ ಡಾಗ್' ಪುಸ್ತಕವನ್ನು ಪ್ರಕಟಿಸಿರುವ ರಚನಾ ರೈ, ಕಲೆ, ಸಾಹಿತ್ಯ ಎರಡರಲ್ಲೂ ಗುರುತಿಸಿಕೊಂಡಿದ್ದಾರೆ. ಈಗವರು ಸ್ಯಾಂಡಲ್ ವುಡ್‌ನ ಸ್ಟಾರ್ ನಟನೊಬ್ಬನ ಜೊತೆ ನಟಿಸುವ ಅವಕಾಶ ಗಿಟ್ಟಿಸಿಕೊಂಡಿದ್ದಾರೆ. ಡೆವಿಲ್ ಚಿತ್ರಕ್ಕೆ 'ಖುಷಿ', 'ಮಿಲನ'ದಂತಹ ಸೂಪರ್ ಹಿಟ್ ಚಿತ್ರಗಳನ್ನು ಕನ್ನಡ ಸಿನಿರಸಿಕರಿಗೆ ನೀಡಿದ ನಿರ್ದೇಶಕ ಪ್ರಕಾಶ್‌ವೀರ್ ಅವರು ಆಕ್ಷನ್ ಕಟ್ ಹೇಳುತ್ತಿದ್ದಾರೆ. ಇತ್ತೀಚೆಗಷ್ಟೇ 'ಡೆವಿಲ್' ಚಿತ್ರದ ಎಕ್ಸ್‌ಕ್ಲೂಸಿವ್ ಮೇಕಿಂಗ್ ವೀಡಿಯೋವನ್ನು ಒಳಗೊಂಡ ಗ್ಲಿಂಪ್ಸ್ ಬಿಡುಗಡೆಯಾಗಿ ವೈರಲ್ ಆಗಿತ್ತು. ಜೈಮಾತಾ ಕಂಬೈನ್ಸ್ ಅರ್ಪಿಸುವ ವೈಷ್ಣೋ ಸ್ಟುಡಿಯೋಸ್ ಲಾಂಛನದಲ್ಲಿ ಜೆ.ಜಯಮ್ಮ ಅವರು ಈ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಪ್ರಕಾಶ್ ವೀರ್ ಅವರೇ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ.



ಪ್ರೇಕ್ಷಕರದ್ದೇ 'ಫೈನಲ್ ಜಡ್ಜ್‌ಮೆಂಟ್'

ಕೋರ್ಟ್ ಹಾಲ್‌ನಲ್ಲಿ ನಡೆಯುವ ಕುತೂಹಲಕರ ಲೀಗಲ್, ಥ್ರಿಲ್ಲರ್ ದೃಶ್ಯಗಳನ್ನು ಒಳಗೊಂಡ ಚಿತ್ರ 'ದ ಜಡ್ಜ್‌ಮೆಂಟ್'. ಕ್ರೇಜಿಸ್ಟಾರ್ ರವಿಚಂದ್ರನ್. ದಿಗಂತ್, ಧನ್ಯಾ, ರಾಮ್‌ಕುಮಾರ್ ನಟಿಸಿರುವ ಈ ಚಿತ್ರ ಇಂದಿನಿಂದ ರಾಜ್ಯಾದ್ಯಂತ ತೆರೆ ಕಂಡಿದೆ. ಇತ್ತೀಚೆಗಷ್ಟೇ ಬಿಡುಗಡೆಯಾದ ಟ್ರೇಲರ್ ಅತೀ ಹೆಚ್ಚು ವೀಕ್ಷಣೆಯಾಗುವ ಮೂಲಕ ವೈರಲ್ ಆಗಿದೆ. 120 ಸೆಕೆಂಡ್‌ಗಳ ಈ ಟ್ರೇಲರ್ ಚಿತ್ರದ ಒಂದು ಝಲಕನ್ನು ಒಳಗೊಂಡಿದೆ.

ಈಗಾಗಲೇ ಹಲವಾರು ಕೋರ್ಟ್ ರೂಂ ಡ್ರಾಮಾ ಇರುವ ಚಿತ್ರಗಳು ತೆರೆಗೆ ಬಂದಿದ್ದರೂ, ಜಡ್ಜ್‌ಮೆಂಟ್ ಚಿತ್ರ ನೋಡುಗರಿಗೆ ಒಂದು ಹೊಸ ಅನುಭವ ನೀಡಲಿದೆ. ಈ ಹಿಂದೆ ಬಂದ ಬಹುತೇಕ ಕೋರ್ಟ್ ಡ್ರಾಮಾ ಸಿನಿಮಾಗಳಲ್ಲಿ ನಾಯಕ ವ್ಯವಸ್ಥೆಯ ವಿರುದ್ಧ ಹೋರಾಡುವ ಕಥೆಯಿದ್ದರೆ, ನಮ್ಮ ಚಿತ್ರದಲ್ಲಿ ನಾಯಕ ವ್ಯವಸ್ಥೆಯ ಒಳಗೇ ಇದ್ದುಕೊಂಡು, ಕಾನೂನುಬದ್ಧವಾಗಿ ಅಪರಾಧಿಗಳನ್ನು ಹೇಗೆ ಹಿಡಿದು ಹಾಕುತ್ತಾನೆ ಎಂದು ಹೇಳಲಾಗಿದೆ. ಅರಿಯದೆ ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುವ ನ್ಯಾಯವಾದಿಯಾಗಿ, ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವ ಲಾಯರ್ ಆಗಿ ಕ್ರೇಜಿಸ್ಟಾರ್ ರವಿಚಂದ್ರನ್ ಅವರು ಪ್ರೇಕ್ಷಕರ ಮುಂದೆ ಬರಲಿದ್ದಾರೆ. ಚಿತ್ರ ಕುರಿತಂತೆ ಮಾತನಾಡಿದ ರವಿಚಂದ್ರನ್, ನನ್ನ ಸಿನಿ ಜೀವನದಲ್ಲೇ ಇದೊಂದು ವಿಶೇಷ ಚಿತ್ರ. ಸಿನಿಮಾ ಬಗ್ಗೆ ನಾವೇನೇ ಹೇಳಿದರೂ, ಸಿನಿಮಾ ನೋಡಿದ ಮೇಲೆ ಪ್ರೇಕ್ಷಕ ಹೇಳುವುದೇ ಫೈನಲ್ ಜಡ್ಜ್‌ಮೆಂಟ್ ಎಂದರು. ನಿರ್ಮಾಪಕ ಹಾಗೂ ನಿರ್ದೇಶಕ ಗುರುರಾಜ್ ಕುಲಕರ್ಣಿ (ನಾಡಗೌಡ) ಮಾತನಾಡಿ, ನಿಜಕ್ಕೂ ಈ ಚಿತ್ರದ ಪಯಣ ಒಂದು ಗೌರಿಶಿಖರವನ್ನೇ ಹತ್ತಿದಂತಹ ಅನುಭವ ನೀಡಿದೆ. ಎಲ್ಲರ ಸಹಕಾರದಿಂದ ಚಿತ್ರ ನಾವಂದುಕೊಂಡದ್ದಕ್ಕಿಂತ ಚೆನ್ನಾಗಿ ಮೂಡಿಬಂದಿದೆ ಎಂದರು.

ಜಿ 9 ಕಮ್ಯುನಿಕೇಷನ್ ಮೀಡಿಯಾ ಅಂಡ್ ಎಂಟರ್‌ಟೈನ್ಮೆಂಟ್ ಲಾಂಛನದಲ್ಲಿ ಶಾರದಾ ನಾಡಗೌಡ, ವಿಶ್ವನಾಥ ಗುಪ್ತ, ರಾಮು ರಾಯಚೂರು, ರಾಜಶೇಖರ ಪಾಟೀಲ ಮತ್ತು ಪ್ರತಿಮಾ ಬಿರಾದಾರ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಕೋರ್ಟ್ ಎಪಿಸೋಡ್ ಈ ಚಿತ್ರದ ಹೈಲೈಟಾಗಿದ್ದು, ಇದುವರೆಗೂ ಕನ್ನಡ ಚಿತ್ರರಂಗದಲ್ಲಿ ಇಷ್ಟು ದೊಡ್ಡಮಟ್ಟದ, ತೀಕ್ಷ್ಣವಾದ ಸಂಭಾಷಣೆಗಳನ್ನೊಳಗೊಂಡ ಕೋರ್ಟ್ ಕಲಾಪವನ್ನು ಯಾರೂ ತೆರೆಮೇಲೆ ತೋರಿಸಿಲ್ಲವೆಂದೇ ಹೇಳಬಹುದು. ಗುರುರಾಜ್ ಕುಲಕರ್ಣಿ ನಾಡಗೌಡ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರಕ್ಕೆ ಪಿ.ಕೆ.ಹೆಚ್. ದಾಸ್ ಅವರ ಛಾಯಾಗ್ರಹಣ, ಅನೂಪ ಸೀಳಿನ್ ಅವರ ಸಂಗೀತ ನಿರ್ದೇಶನವಿದೆ. ಈ ಚಿತ್ರದಲ್ಲಿ ಟಿ.ಎಸ್. ನಾಗಾಭರಣ, ರವಿಶಂಕರ್‌ಗೌಡ, ರೇಖಾ ಕೂಡಲಗಿ, ನವೀಲಾ, ಪ್ರಕಾಶ್ ಬೆಳವಾಡಿ, ರಂಗಾಯಣ ರಘು, ಕೃಷ್ಣ ಹೆಬ್ಬಾಳೆ, ರೂಪಾ ರಾಯಪ್ಪ, ಪ್ರೀತಮ್, ಅಶ್ವಿನ್‌ರಾವ್, ಬಾಲಾಜಿ ಮನೋಹರ್, ಅರವಿಂದ್ ಕುಪ್ಳೀಕರ್, ಜಗದೀಶ್ ಮಲ್ನಾಡ್ ಇತರರು ನಟಿಸಿದ್ದಾರೆ.

ಚೈನೀಸ್ ಹೋಟೆಲ್ ಹುಡುಗರ ಕಥೆ 'ಚಿಲ್ಲಿ ಚಿಕನ್'



ಇತ್ತೀಚೆಗೆ ಪ್ರತೀಕ್ ಪ್ರಜೋಶ್ ನಿರ್ದೇಶನದ 'ಚಿಲ್ಲಿ ಚಿಕನ್' ಚಿತ್ರದ ಟೀಸರ್ ಬಿಡುಗಡೆಯಾಯಿತು. ಉತ್ತರ ಭಾರತದಿಂದ ಬಂದ ಐವರು ಹುಡುಗರು ಬೆಂಗಳೂರಿನಲ್ಲಿ ಚೈನೀಸ್ ರೆಸ್ಟೋರೆಂಟ್ ಒಂದರಲ್ಲಿ ಕೆಲಸ ಮಾಡುತ್ತ, ತಾವೇ ಸ್ವಂತ ಹೋಟೆಲ್ ತೆರೆಯಲು ಮುಂದಾಗುತ್ತಾರೆ. ಅನಿರೀಕ್ಷಿತ ಘಟನೆಯೊಂದು ಇವರ ಪ್ರಯತ್ನಕ್ಕೆ ಅಡ್ಡಿಯಾಗುತ್ತದೆ. ಕೊನೆಗೆ ಅದೆಲ್ಲದರಿಂದ ಪಾರಾಗಿ ಅವರು ಗೆಲ್ತಾರಾ, ಇಲ್ವಾ ಅನ್ನೋದೇ 'ಚಿಲ್ಲಿ ಚಿಕನ್' ಚಿತ್ರದ ಕಾನ್ಸೆಪ್ಟ್.

ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರದ ನಿರ್ದೇಶಕ ಕೇರಳದವರು. ನಿರ್ಮಾಪಕ ಗುಜರಾತಿನವರು. ಮಣಿಪುರ, ಮೇಘಾಲಯ, ಚೆನ್ನೈನ ಕಲಾವಿದರು. ಹೀಗೆ ಈ ಚಿತ್ರಕ್ಕಾಗಿ ಬೇರೆ ಬೇರೆ ರಾಜ್ಯಗಳಿಂದ ಬಂದ ಸಿನಿಪ್ರಿಯರು ಒಂದಾಗಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ನಿರ್ಮಾಪಕ ದೀಪ್ ಭೀಮಾಜಿಹಾನಿ, ಈಗಾಗಲೇ ಹಿಂದಿಯಲ್ಲಿ ಒಂದಿಷ್ಟು ಶಾರ್ಟ್ ಫಿಲಂಗಳನ್ನು ನಿರ್ಮಿಸಿದ್ದು, ಕನ್ನಡದಲ್ಲಿ ಇದು ಮೊದಲ ಚಿತ್ರ. ಜೂನ್‌ನಲ್ಲಿ ರಿಲೀಸ್ ಮಾಡುವ ಯೋಜನೆಯಿದೆ ಎಂದರು. ನಿರ್ದೇಶಕ ಪ್ರತೀಕ್ ಪ್ರಜೋಶ್ ಮಾತನಾಡಿ, ನಾನು ಮೂಲತಃ ಕೇರಳದವನಾದರೂ ಬೆಂಗಳೂರಿನಲ್ಲೇ ಓದಿದ್ದೇನೆ. ಹಾಗಾಗಿ ಇಲ್ಲಿಯ ಪರಿಸರ ನನಗೆ ತುಂಬಾ ಇಷ್ಟ. ಹಿಂದಿ ಸೇರಿದಂತೆ ಮಲಯಾಳಂ, ಗುಜರಾತಿ ಭಾಷೆಯ ಸಿನಿಮಾಗಳಿಗೆ ಕೆಲಸ ಮಾಡಿ, ಒಂದಷ್ಟು ಕಿರುಚಿತ್ರಗಳನ್ನು ನಿರ್ದೇಶಿಸಿದ್ದೇನೆ. ಚಿಲ್ಲಿ ಚಿಕನ್ ಮೂಲಕ ಮೊದಲ ಬಾರಿಗೆ ನಿರ್ದೇಶನಕ್ಕೆ ಕೈ ಹಾಕಿದ್ದೇನೆ. ಸಿನಿಮಾ ಬಗ್ಗೆ ಹೇಳುವುದಾದರೆ, ಉತ್ತರ ಭಾರತದ ನಾಲ್ವರು ಹುಡುಗರು ಬೆಂಗಳೂರಿನಲ್ಲಿ ಚೈನೀಸ್ ರೆಸ್ಟೋರೆಂಟ್ ಪ್ರಾರಂಭಿಸಲು ಪ್ಲ್ಯಾನ್ ಮಾಡುತ್ತಾರೆ. ಮುಂದೇನಾಗುತ್ತೆ ಅನ್ನೋದೇ ಇದರ ಚಿತ್ರಕಥೆ. ಬೆಂಗಳೂರಿನ ಫ್ರೇಜರ್ ಟೌನ್‌ನಲ್ಲಿ ನಡೆದ ನೈಜ ಘಟನೆಯೊಂದು ಈ ಚಿತ್ರಕ್ಕೆ ಸ್ಫೂರ್ತಿ. ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ. ಇದನ್ನು ಕೊರಿಯನ್ ಮಾದರಿಯ ಕನ್ನಡ ಡ್ರಾಮಾ ಸಿನಿಮಾ ಎನ್ನಬಹುದು.

ನಟ ಶೃಂಗಾ ಮಾತನಾಡಿ, ನನ್ನದು ಆದರ್ಶ ಎಂಬ ಹೋಟೆಲ್ ಮಾಲೀಕನ ಪಾತ್ರ. ಕಥೆಯಲ್ಲಿ ತುಂಬಾ ಸೂಕ್ಷ್ಮವಾದ ವಿಚಾರಗಳನ್ನು ಹ್ಯೂಮರಸ್ ಆಗಿ ಹೇಳಲಾಗಿದೆ. ಬೇರೆ ರಾಜ್ಯದಿಂದ ನಮ್ಮಲ್ಲಿಗೆ ಬಂದ ಹುಡುಗರು ಯಾವ ರೀತಿ ಇರುತ್ತಾರೆ. ಏನೆಲ್ಲಾ ಕಷ್ಟಗಳನ್ನು ಎದುರಿಸುತ್ತಾರೆ. ನಾವು ಬೇರೆಯವರನ್ನು ಹೇಗೆ ನೋಡುತ್ತೇವೆ ಮತ್ತು ಅವರು ನಮ್ಮೊಂದಿಗೆ ಹೇಗೆ ಹೊಂದಿಕೊಳ್ಳುತ್ತಾರೆ ಎಂಬುದನ್ನು ತೋರಿಸಲಾಗಿದೆ ಎಂದರು. ಚಿತ್ರದ ನಾಯಕಿ ನಟಿ ರಿನಿ ಹಾಗೂ ನಿತ್ಯಶ್ರೀ ಮಾತನಾಡಿ, ತಮ್ಮ ಪಾತ್ರಗಳ ಬಗ್ಗೆ ಹೇಳಿಕೊಂಡರು. ಸಿದ್ಧಾಂತ್ ಸುಂದರ್ ಅವರ ಸಂಗೀತ, ಶ್ರೀಶ್ ತೋಮರ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಬಿ.ವಿ.ಶೃಂಗಾ, ರಿನಿ, ನಿತ್ಯಶ್ರೀ, ಬಿಜೌ ತಾಂಜಿಂ, ವಿಕ್ಟರ್ ತೌಡಂ, ಟಾಮ್ಥಿನ್ ಥೋಕ್ಚೋಮ್, ಹಿರಾಕ್ ಸೋನೋವಾಲ್ ತಾರಾಗಣದಲ್ಲಿದ್ದಾರೆ.

ನಾಳೆ ಮೈಸೂರಿನಲ್ಲಿ 'ಕೃಷ್ಣಂ ಪ್ರಣಯ ಸಖಿ' ಚಿತ್ರದ ಮೊದಲ ಹಾಡು



ಶ್ರೀನಿವಾಸರಾಜು ಅವರ ನಿರ್ದೇಶನದ, ಗೋಲ್ಡನ್ ಸ್ಟಾರ್ ಗಣೇಶ್ ನಾಯಕರಾಗಿ ನಟಿಸಿರುವ "ಕೃಷ್ಣಂ ಪ್ರಣಯ ಸಖಿ" ಚಿತ್ರ ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ. ಈ ಚಿತ್ರದ ಫಸ್ಟ್ ಲುಕ್ ಹಾಗೂ ಪೋಸ್ಟರ್ ಗಮನ ಸೆಳೆದಿದೆ. ಬಹು ನಿರೀಕ್ಷಿತ ಈ ಚಿತ್ರದ ಮೊದಲ ಹಾಡು ಮೇ 25 ರಂದು ಮೈಸೂರಿನಲ್ಲಿ ಬಿಡುಗಡೆಯಾಗಲಿದೆ.

ಅರ್ಜುನ್ ಜನ್ಯ ಅವರು ಸಂಗೀತ ನೀಡಿರುವ ಆರು ಸುಮಧುರ ಹಾಡುಗಳು "ಕೃಷ್ಣಂ ಪ್ರಣಯ ಸಖಿ" ಚಿತ್ರದಲ್ಲಿದೆ. ಆ ಪೈಕಿ ನಿಶಾನ್ ರಾಯ್ ಅವರು ಬರೆದು ಗಾಯಕ ಚಂದನ್ ಶೆಟ್ಟಿ ಹಾಡಿರುವ ಈ ಚಿತ್ರದ ಮೊದಲ ಹಾಡು ಸಾಂಸ್ಕೃತಿಕ ನಗರಿ ಮೈಸೂರಿನ "ಮಾಲ್ ಆಫ್ ಮೈಸೂರಿನಲ್ಲಿ" ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಮೈಸೂರಿನಲ್ಲಿ ಮೊದಲ ಹಾಡು ಬಿಡುಗಡೆ ಮಾಡುವ ಮೂಲಕ ಚಿತ್ರದ ಪ್ರಚಾರ ಕಾರ್ಯಕ್ಕೆ ಚಾಲನೆ ಸಿಗಲಿದೆ.

ಕೌಟುಂಬಿಕ ಕಥಾಹಂದರ ಹೊಂದಿರುವ ಈ ಚಿತ್ರವನ್ನು ತ್ರಿಶೂಲ್ ಎಂಟರ್ಟೈನ್ಮೆಂಟ್ ಲಾಂಛನದಲ್ಲಿ ಪ್ರಶಾಂತ್ ಜಿ ರುದ್ರಪ್ಪ ಅವರು ನಿರ್ಮಿಸಿದ್ದಾರೆ. ಈಗಾಗಲೇ ಚಿತ್ರೀಕರಣ ಮುಕ್ತಾಯವಾಗಿದ್ದು, ಬೆಂಗಳೂರು, ವಿಯೆಟ್ನಾಂ ಮುಂತಾದ ಕಡೆ ಚಿತ್ರೀಕರಣವಾಗಿದೆ. ಸದ್ಯದಲ್ಲೇ ಚಿತ್ರವನ್ನು ತೆರೆಗೆ ತರುವ ಸಿದ್ದತೆ ನಡೆಯುತ್ತಿದೆ. ಬಹು ನಿರೀಕ್ಷಿತ "ಕೃಷ್ಣಂ ಪ್ರಣಯ ಸಖಿ" ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ 41ನೇ ಚಿತ್ರ. ಗಣೇಶ್ ಅವರಿಗೆ ನಾಯಕಿಯಾಗಿ ಮಾಳವಿಕ ನಾಯರ್ ನಟಿಸಿದ್ದಾರೆ. ಶರಣ್ಯ ಶೆಟ್ಟಿ, ಶ್ರೀನಿವಾಸಮೂರ್ತಿ, ಸಾಧುಕೋಕಿಲಾ, ರಂಗಾಯಣ ರಘು, ಶಶಿಕುಮಾರ್, ಶ್ರುತಿ, ಭಾವನ, ಅಶೋಕ್, ರಾಮಕೃಷ್ಣ, ಶಿವಧ್ವಜ್, ರಘುರಾವ್, ಮಾನಸಿ ಸುಧೀರ್, ಅಂಬುಜ, ಗಿರಿ ಶಿವಣ್ಣ ಇತರರು ತಾರಾಬಳಗದಲ್ಲಿದ್ದಾರೆ.

ಸುದೀಪರಿಂದ 'ಮ್ಯಾಕ್ಸ್' ಅಪ್‌ಡೇಟ್



ಸುದೀಪ್ ಅಭಿನಯದ 'ಮ್ಯಾಕ್ಸ್' ನಿಂತು ಹೋಗಿದೆ. ಬಜೆಟ್ ಹೆಚ್ಚಾದ್ದರಿಂದ ನಿರ್ಮಾಪಕ ಕಲೈಪುಲಿ ಧನು ಚಿತ್ರೀಕರಣಕ್ಕೆ ಹಣ ನೀಡುತ್ತಿಲ್ಲ. ಚಿತ್ರ ಬಿಡುಗಡೆ ಆಗುವುದಿಲ್ಲ ಎಂಬ ಮಾತುಗಳು ಇತ್ತೀಚೆಗೆ ಸೋಷಿಯಲ್ ಮೀಡಿಯಾದಲ್ಲಿ ಕೇಳಿಬಂದಿತ್ತು. ಅದಕ್ಕೆ ಉತ್ತರವೆಂಬಂತೆ ಇದೀಗ 'ಮ್ಯಾಕ್ಸ್' ಚಿತ್ರೀಕರಣ ಮಹಾಬಲಿಪುರಂನಲ್ಲಿ ಮುಗಿದಿದೆ ಎಂದು ಸ್ವತಃ ಸುದೀಪ್ ಅವರೇ ಖಚಿತಪಡಿಸಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ಕೊನೆಯ ದಿನದ ವೀಡಿಯೋವೊಂದನ್ನು ಪೋಸ್ಟ್ ಮಾಡುವುದರ ಜೊತೆಗೆ, ಚಿತ್ರಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದ ತಿಳಿಸಿದ್ದಾರೆ. ಕಳೆದ ವರ್ಷ ಸುದೀಪ್ ಅಭಿನಯದ 'ಮ್ಯಾಕ್ಸ್' ಚಿತ್ರದ ಚಿತ್ರೀಕರಣ ಶುರುವಾಗಿತ್ತು. ಅಂದುಕೊಂಡಂತೆ ಆದರೆ, ಡಿಸೆಂಬರ್‌ನಲ್ಲೇ ಚಿತ್ರವನ್ನು ಬಿಡುಗಡೆ ಮಾಡಬೇಕೆಂದು ಸುದೀಪ್ ಹೇಳಿಕೊಂಡಿದ್ದರು. ಆದರೆ, ಬಿಗ್ ಬಾಸ್, ಕೆಸಿಸಿ ಮತ್ತು ಸಿಸಿಎಲ್‌ನಲ್ಲಿ ಸುದೀಪ್ ಬ್ಯುಸಿಯಾಗಿದ್ದರಿಂದ ಚಿತ್ರೀಕರಣ ವಿಳಂಬವಾಗಿ ಕೊನೆಗೂ ಮುಗಿದಿದೆ. ಚಿತ್ರೀಕರಣವೇನೋ ಮುಗಿದಿದೆ. ಚಿತ್ರದ ಬಿಡುಗಡೆ ಯಾವಾಗ ಎಂಬ ಪ್ರಶ್ನೆ ಬರುವುದು ಸಹಜ. ಮೂಲಗಳ ಪ್ರಕಾರ, ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಸಹ ಭರದಿಂದ ಸಾಗಿದ್ದು, ಎಲ್ಲವೂ ಅಂದುಕೊಂಡಂತೆ ಮುಗಿದರೆ, ಜುಲೈ ತಿಂಗಳಲ್ಲಿ ಚಿತ್ರ ಬಿಡುಗಡೆ ಆಗುವ ಸಾಧ್ಯತೆ ಇದೆಯಂತೆ. ಮ್ಯಾಕ್ಸ್ ಪ್ಯಾನ್ ಇಂಡಿಯಾ ಚಿತ್ರವಾಗಿದ್ದು, ಐದು ಭಾಷೆಗಳಲ್ಲಿ ಏಕಕಾಲಕ್ಕೆ ಬಿಡುಗಡೆಯಾಗುತ್ತಿದೆ. ಈ ಚಿತ್ರವನ್ನು ತಮಿಳಿನ ಕಲೈಪುಲಿ ಧನು ನಿರ್ಮಿಸಿದರೆ, ವಿಜಯ್ ಕಾರ್ತಿಕೇಯ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿದ್ದಾರೆ. ಈ ಚಿತ್ರವು ತೆಲುಗಿನ ರವಿತೇಜ ಅಭಿನಯ 'ಕ್ರ್ಯಾಕ್' ಚಿತ್ರದ ರೀಮೇಕ್ ಎಂದು ಹೇಳಲಾಗುತ್ತಿದೆ. ಆದರೆ, ಚಿತ್ರತಂಡ ಈ ಕುರಿತು ಯಾವುದೇ ಸ್ಪಷ್ಟನೆ ನೀಡಿಲ್ಲ. ಈ ಚಿತ್ರದಲ್ಲಿ ಸುದೀಪ್ ಜೊತೆಗೆ ವರಲಕ್ಷ್ಮೀ ಶರತ್‌ಕುಮಾರ್, ಸಂಯುಕ್ತ ಹೊರನಾಡು, ಉಗ್ರಂ ಮಂಜು, ಸುಕೃತಾ ವಾಗ್ಲೆ ಮುಂತಾದವರು ಅಭಿನಯಿಸಿದ್ದಾರೆ. ಶೇಖರ್‌ಚಂದ್ರ ಛಾಯಾಗ್ರಹಣ, ಅಜನೀಶ್ ಲೋಕನಾಥ್ ಅವರ ಸಂಗೀತ ಮತ್ತು ಕೆಜಿಎಫ್ ಖ್ಯಾತಿಯ ಶಿವಕುಮಾರ್ ಕಲಾ ನಿರ್ದೇಶನವಿದೆ.

ಸಿನಿಪದಬಂಧ–527

■	1	2		■	3	4		5		6
7	■		■	8	■		■		■	
	■		■		■		■	■	■	
9					■	10				
	■	■	■	■	■		■	■	■	■
11				12	■	13				14
■	■	■	■		■	■	■	■	■	
15					■	16		17		
	■	■	■		■		■		■	
	■	18	■		■		■		■	
19						■	20			■

ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಜಲರಾಶಿ ತರಂಗಗಳ ಸರಣಿ ತೆರೆಗೂ ಅಪ್ಪಳಿಸಿದೆ 3
3. ಶಂಕರ್ ನಾಗ್ ಅಭಿನಯದಿ ನರನ ಜೊತೆ ರಕ್ಕಸನು ಇದ್ದಾನೆ 6
9. ಪ್ರಭಾಕರ್ ಅಲ್ಲೋಲ ಕಲ್ಲೋಲ ಎಬ್ಬಿಸಲು ಪಿ.ಎಸ್.ಪ್ರಕಾಶ್ ನಿರ್ದೇಶನವಿದೆ 5
10. ಚಿನ್ನಾರಿ ಮುತ್ತ ಗೆಲುವಿನ ಕೇಸರಿಯಾಗಿ ಇಲ್ಲಿ ತಿರುಗಿದ್ದಾನೆ 5
11. ಕನ್ನಡದ ಬಾಕ್ಸಾಫೀಸ್ 5
13. ಶಂಕರ್ ನಾಗ್ ಜಯಮಾಲಾಳಿಗೆ ಇಟ್ಟ ನೆತ್ತರಿನ ಬೊಟ್ಟು 5
15. ಸುದರ್ಶನ್ – ಶೈಲಶ್ರೀ ಅಭಿನಯದಲ್ಲಿ ಬಿರಿದ ಪುಷ್ಪ 5
16. ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ ಎಂದ ಭಕ್ತ 5
19. ಕಿತ್ತೂರು ಚೆನ್ನಮ್ಮ ಎಂಡೊಡನೆ ನೆನಪಾಗುವ ನಟಿ 6
20. ಕನಸಿನ ನಿಜ 3



ವಿಜೇತರು: ಮನೋಹರ್, ನಂ.120/3, 6ನೇ ಅಡ್ಡ ರಸ್ತೆ, ವಿಜಯನಗರ 2ನೇ ಹಂತ, ಮೈಸೂರು.



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 526ರ ಉತ್ತರ

■	ಕಾಂ	ಗ	ರೂ	■	ಪ್ರೇ	ಮ	ಸಿಂ	ಹಾ	ಸ	ನ
ಪ	■	ಟ್ಟಿ	■	ಸು	■	ಹಾ	■	ಲು	■	ವ
ರ	■	ಮೋ	■	ಕ	■	ಪ್ರ	■	■	■	ನೀ
ಮ	ಕ್ಕ	ಳ	ಸೈ	ನ್ಯ	■	ಚಂ	ಡ	ಮಾ	ರು	ತ
ಶಿ	■	■	■	■	■	ಡ	■	■	■	■
ವ	ಸಿ	ಷ್ಠ	ಸಿಂ	ಹ	■	ರು	ದ್ರ	ತಾಂ	ಡ	ವ
■	■	■	■	ತ್ತೂ	■	■	■	■	■	ಸಂ
ಅ	ಜ	ರಾ	ಮ	ರ	■	ಭ	ವ್ಯ	ಭಾ	ರ	ತ
ಸಂ	■	■	■	ಒ	■	ರಾ	■	ಗ್ಯ	■	ಕಾ
ಭ	■	ವೇ	■	ಡೆ	■	ಟೆ	■	ವಂ	■	ವ್ಯ
ವ	ರ	ದ	ನಾ	ಯ	ಕ	■	ಹಂ	ತ	ಕ	■

ಮೇಲಿನಿಂದ ಕೆಳಕ್ಕೆ

2. ಜೀವನ ಚೈತ್ರ ಚಿತ್ರದ ಹಾಡಿನಲ್ಲಿ ಈ ಲೋಕವೆಲ್ಲಾ ಸಂಗೀತದಿಂದ ಕೂಡಿದೆ 4
4. ಅಂಬರೀಶ್ – ಸುಮನ್ ರಂಗನಾಥ್ ಅಭಿನಯದಲ್ಲಿ ಬಂದ ಸರದಾರ 6
5. ಈ ಚಿತ್ರಕ್ಕೆ ಬಾಯಾರಿಕೆಯಾಗಿದೆ 2
6. ಕಾಡಿನ ದೈವ 4
7. ಪರಮೇಶಿ _ _ _ _ _ 5
8. ಅಕ್ಕಿ ಇಲ್ಲ ಬೇಳೆ ಇಲ್ಲ ಎಂದವನು 3
12. ಅಂಬಿ, ಪ್ರಭಾಕರ್, ಜಯಮಾಲಾ ಅಭಿನಯಕ್ಕೆ ಎಸ್. ಚಂದ್ರಶೇಖರ್ ನಿರ್ದೇಶಕ 6
14. ಕಲ್ಯಾಣ್ ಕುಮಾರ್ ನ ಘನರೂಪದ ವಸ್ತು ಸಿಹಿಯಾಗಿದೆ 5
15. ಪುರುಷರನ್ನು ಆಕರ್ಷಿಸಲು ಹೆಂಗಸಿನ ಮನೋಹರ ಚೇಷ್ಟೆ ಇಲ್ಲಿ ತಲೆಕೆಳಗು 4
16. ಕುಮಾರ್ ಗೋವಿಂದನ ಚೌಕಕಾರದ ಕೊಳ 3
17. ಇಂದುಶೇಖರ್ – ಹರಿಣಿ ಅಭಿನಯದಲ್ಲಿ ಹೆಣ್ಣನ್ನು ಧಾರೆ ಎರೆದಿದ್ದಾರೆ 4
18. ಆಂಗ್ಲದ ಕಥಾ ನಾಯಕ 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015



ಕೇರಳದ ವೈನಾಡಿನಲ್ಲಿ ಭಾರಿ ಮಳೆ ಹಿನ್ನೆಲೆ

ಕಬಿನಿ ಜಲಾಶಯಕ್ಕೆ ಒಳಹರಿವು ಹೆಚ್ಚಳ

ಜಲಾಶಯದ ಗರಿಷ್ಠ ಮಟ್ಟ 2284	ಕಳೆದ ವರ್ಷ
ಇಂದಿನ ಮಟ್ಟ: 2259 ಅಡಿ.	ಇಂದಿನ ಮಟ್ಟ: 2251 ಅಡಿ.
ಒಳಹರಿವು: 7000 ಕ್ಯೂಸೆಕ್.	ಒಳಹರಿವು: 46 ಕ್ಯೂಸೆಕ್.
ಹೊರಹರಿವು: 300 ಕ್ಯೂಸೆಕ್	ಹೊರಹರಿವು: 500 ಕ್ಯೂಸೆಕ್.

ಹೆಚ್.ಡಿ.ಕೋಟೆ, ಮೇ 23– ಕೇರಳದ ವೈನಾಡಿನಲ್ಲಿ ಭಾರಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ತಾಲೂಕಿನ ಬೀಚನಹಳ್ಳಿ ಗ್ರಾಮದ ಕಬಿನಿ ಜಲಾಶಯದ ಒಳಹರಿವು ಹೆಚ್ಚಳವಾಗುತ್ತಿದೆ ಎಂದು ಕಬಿನಿ ಕಾರ್ಯಪಾಲಕ ಅಭಿಯಂತರ ಚಂದ್ರಶೇಖರ್ ತಿಳಿಸಿದ್ದಾರೆ.

ಕೇರಳದ ವೈನಾಡಿನಲ್ಲಿ ಕಳೆದ ಮೂರ್‍ನಾಲ್ಕು ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆಯಿಂದ ಕಬಿನಿ ಜಲಾಶಯಕ್ಕೆ 7000 ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಒಟ್ಟಾರೆ 2284 ಅಡಿ ಗರಿಷ್ಠ ಸಾಮರ್ಥ್ಯದ ಜಲಾಶಯದಲ್ಲಿ ಪ್ರಸ್ತುತ 2259 ಅಡಿ ನೀರು ಶೇಖರಣೆಯಾಗಿದ್ದು, 300 ಕ್ಯೂಸೆಕ್ ನೀರನ್ನು ಜಲಾಶಯದಿಂದ ನದಿಗೆ ಹರಿಸಲಾಗುತ್ತಿದೆ. ಕಳೆದ ವರ್ಷ ಇದೇ ವೇಳೆ ಜಲಾಶಯದಲ್ಲಿ 2251 ಅಡಿ ನೀರು ಇದ್ದರೇ, ಜಲಾಶಯಕ್ಕೆ 46 ಕ್ಯೂಸೆಕ್ ಒಳಹರಿವಿತ್ತು. ಇನ್ನು ಜಲಾಶಯದಿಂದ ನದಿಗೆ 500 ಕ್ಯೂಸೆಕ್ ನೀರನ್ನು ಹರಿಸಲಾಗುತ್ತಿತ್ತು ಎಂದರು.

ಕಳೆದ ವರ್ಷ ಮಳೆಯಾಗದೇ ರಾಜ್ಯದಲ್ಲಿ ಬರಗಾಲ ಆವರಿಸಿದ್ದರಿಂದ ಬಿಸಿಲಿನ ತಾಪ ಹೆಚ್ಚಾಗಿತ್ತು. ಅಲ್ಲದೇ ಜಲಾಶಯದಲ್ಲಿ ನೀರಿನ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಾ ಬಂದಿತ್ತು. ಆದರೆ ಈ ಬಾರಿ ಕೇರಳದ ವೈನಾಡು ಸೇರಿದಂತೆ ಕಬಿನಿ ಜಲಾಶಯದ ಸುತ್ತಮುತ್ತ ಭಾರಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ 7 ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿದೆ ಎಂದರು.

ಇನ್ನು ಮುಂಗಾರು ಚುರುಕುಗೊಂಡಿಲ್ಲ. ಅದಕ್ಕೂ ಮುನ್ನವೇ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ಮುಂಗಾರು ಮಳೆ ಆರಂಭಗೊಂಡರೆ ಜಲಾಶಯದ ಒಳಹರಿವಿನ ಪ್ರಮಾಣ ಜಾಸ್ತಿಯಾಗುವ ಸಾಧ್ಯತೆಗಳಿವೆ ಎಂದು ತಿಳಿಸಿದರು.

ಬಿದರಹಳ್ಳಿ ಗ್ರಾಮದ ರೈತ ಚಂದ್ರಶೇಖರ್ ಮಾತನಾಡಿ, ರಣಬಿಸಿಲಿನಿಂದ ಜಲಾಶಯದ ನೀರಿನ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಾ ಬಂದಿತ್ತು. ಇದರಿಂದ ಕಬಿನಿ ಜಲಾಶಯವನ್ನೇ ನಂಬಿದ್ದ ಅನ್ನದಾತರು ಆತಂಕಕ್ಕೆ ಒಳಗಾಗಿದ್ದರು. ಆದರೆ, ಇದೀಗ ಕೇರಳದ ವೈನಾಡಿನಲ್ಲಿ ಭಾರಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯದ ಒಳಹರಿವು ಹೆಚ್ಚಾಗುತ್ತಿರುವುದು ಸಂತಸ ತಂದಿದೆ ಎಂದ ಅವರು, ಕಳೆದ ಬಾರಿ ಮುಂಗಾರು ಆರಂಭಗೊಂಡರೂ ಜಲಾಶಯದ ಒಳಹರಿವಿನ ಪ್ರಮಾಣ ಕಡಿಮೆಯಾಗಿತ್ತು. ಆದರೆ ಈ ಬಾರಿ ಮೇ ತಿಂಗಳಲ್ಲೇ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದಿರುವುದು ಇತಿಹಾಸದಲ್ಲೇ ಮೊದಲು. ಮುಂಬರುವ ದಿನಗಳಲ್ಲಿ ಹೆಚ್ಚಿನ ಮಳೆಯಾಗಿ ಆದಷ್ಟು ಬೇಗ ಜಲಾಶಯ ಭರ್ತಿಯಾಗಲಿ ಎಂದರು.

ತಾಲೂಕಿನಲ್ಲಿ ಈಗಾಗಲೇ ರೈತರು ಹತ್ತಿ, ಚೆಂಡು ಮಲ್ಲಿಗೆ, ಜೋಳ, ರಾಗಿ, ಮುಸುಕಿನ ಜೋಳ ಇನ್ನಿತರ ಬೆಳೆಗಳ ಬಿತ್ತನೆ ಮಾಡಿದ್ದರು. ಆದರೆ ಕಳೆದ ನಾಲ್ಕೈದು ದಿನದಿಂದ ಸುರಿದ ಭಾರಿ ಮಳೆಯಿಂದ ಬಿತ್ತನೆ ಮಾಡಿರುವ ಬೀಜಗಳೆಲ್ಲ ಸಂಪೂರ್ಣ ಕೊಚ್ಚಿ ಹೋಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ತಿರುಮಲಪುರದಲ್ಲಿ ಹೊಲಿಗೆ ಯಂತ್ರ ವಿತರಣೆ



ಬೈಲಕುಪ್ಪೆ, ಮೇ 23– ಸಮಾಜದಲ್ಲಿ ಬಡ ಮತ್ತು ಮಧ್ಯಮ ವರ್ಗದವರು ಆರ್ಥಿಕವಾಗಿ ಸಬಲರಾಗಿ, ಉತ್ತಮ ಜೀವನ ನಡೆಸಲು ಪುರುಷರೇ ಹೆಚ್ಚು ದುಡಿಮೆಯಲ್ಲಿ ನಿರತರಾಗಿದ್ದಾರೆ. ಶಿಕ್ಷಿತ ಮಹಿಳೆಯರು ಅತ್ಯುನ್ನತ ಹುದ್ದೆಗೇರುತ್ತಿದ್ದಾರೆ. ಶಿಕ್ಷಣದಿಂದ ವಂಚಿತರಾದವರು ಟೈಲರಿಂಗ್, ಬ್ಯೂಟಿಷಿಯನ್ ಕೌಶಲಗಳನ್ನು ಬಳಸಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ರೋಟರಿ ಅಧ್ಯಕ್ಷ ರಾಜೇಗೌಡ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ತಿರುಮಲಪುರದಲ್ಲಿ ಪಿರಿಯಾಪಟ್ಟಣ ಮಿಟ್ಟೋನ್ ರೋಟರಿ ವತಿಯಿಂದ ಮಹಿಳೆಯರಿಗೆ ಉಚಿತವಾಗಿ ಹೊಲಿಗೆ ಯಂತ್ರ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇದೇ ವೇಳೆ ಆರ್ಥಿಕವಾಗಿ ಹಿಂದುಳಿದ ಬಡ ಕುಟುಂಬದ ಇಬ್ಬರು ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ ಮಾಡಲಾಯಿತು.

ಈ ವೇಳೆ ಮಾಜಿ ರೋಟರಿ ಅಧ್ಯಕ್ಷ ಸತ್ಯನಾರಾಯಣ, ಕಾರ್ಯದರ್ಶಿ ಐಕೆಪಿ ಹೆಗಡೆ, ರೋಟರಿ ಸದಸ್ಯ ಜಗನ್, ಗ್ರಾಪಂ ಸದಸ್ಯ ರಾಜು, ಮುಖಂಡರಾದ ವೆಂಕಟೇಶ್, ಪರಮೇಶ್‌ಗೌಡ, ಸುಬ್ಬಣ್ಣ, ತಿಲಕ್ ಇದ್ದರು.

ಎಸ್.ಸಿ.ಬಸವರಾಜ್‌ಗೆ ಎಂಎಲ್‌ಸಿ ಟಿಕೆಟ್ ನೀಡಲು ಒತ್ತಾಯ



ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡ ನಾಗೇಶ್‌ರಾಜ್ ಮಾತನಾಡಿದರು.

ನಂಜನಗೂಡು, ಮೇ 23– ರಾಜ್ಯ ವಿಧಾನ ಪರಿಷತ್‌ಗೆ ಜೂನ್‌ನಲ್ಲಿ ನಡೆಯುವ ಚುನಾವಣೆಯಲ್ಲಿ ನಾಯಕ ಸಮಾಜದ ಮುಖಂಡ ಎಸ್.ಸಿ.ಬಸವರಾಜ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಬೇಕು ಎಂದು ಮುಖಂಡ ನಾಗೇಶ್‌ರಾಜ್ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮತನಾಡಿದ ಅವರು, ಎಸ್.ಸಿ.ಬಸವರಾಜ್ ಅವರು ಜಿಪಂ ಅಧ್ಯಕ್ಷ, ರಾಜ್ಯ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಕಳೆದ 30 ವರ್ಷಗಳಿಂದ ಪಕ್ಷದ ವಿವಿಧ ಘಟಕಗಳ ನೇತೃತ್ವ ವಹಿಸಿ ಪಕ್ಷ ಸಂಘಟನೆ ಮಾಡುವ ಮೂಲಕ ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ದುಡಿದಿದ್ದಾರೆ. ಅವಿಭಾಜಿತ ಹಳೇ ಮೈಸೂರು ಭಾಗದ ಪ್ರಭಾವಿ ಮುಖಂಡರಾಗಿರುವ ಎಸ್.ಸಿ.ಬಸವರಾಜ್ ಅವರಿಗೆ ಟಿಕೆಟ್ ನೀಡುವ ಮೂಲಕ ಕಾಂಗ್ರೆಸ್ ಮೈಸೂರು, ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯ ನಾಯಕ ಜನಾಂಗಕ್ಕೆ ವಿಧಾನ ಪರಿಷತ್ ಸ್ಥಾನ ನೀಡಿದ ಕೀರ್ತಿ ಲಭಿಸುತ್ತದೆ. ಕ್ಷೇತ್ರದಲ್ಲಿ ಎಲ್ಲಾ ಸಮಾಜಗಳನ್ನು ಒಟ್ಟಿಗೆ ಕರೆದೊಯ್ಯುವ ಸಾಮರ್ಥ್ಯ ಹೊಂದಿರುವ ಸಂಘಟನಾ ಚತುರ ಎಚ್.ಸಿ.ಬಸವರಾಜ್ ಅವರಿಗೆ ಕಾಂಗ್ರೆಸ್ ವಿಧಾನ ಪರಿಷತ್ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದರು.

ರಾಜ್ಯ ಕಾಂಗ್ರೆಸ್ ಎಸ್‌ಟಿ ಘಟಕದ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿ ನಾಯಕ ಮಾತನಾಡಿ, ಈ ಹಿಂದೆ ರಾಜ್ಯದಲ್ಲಿ ಜೆಡಿಎಸ್ ಅಧಿಕಾರವಧಿಯಲ್ಲಿ ನಾಯಕ ಸಮಾಜದ ಮುಖಂಡ ಎಸ್.ಚಿಕ್ಕಮಾದು ಅವರಿಗೆ, ಬಿಜೆಪಿ ಅಧಿಕಾರದಲ್ಲಿದ್ದಾಗ ಸಮಾಜದ ಸಿದ್ದರಾಜು ಅವರಿಗೆ ವಿಧಾನ ಪರಿಷತ್ ಟಿಕೆಟ್ ನೀಡಿತ್ತು. ಕಾಂಗ್ರೆಸ್ ಪಕ್ಷದಲ್ಲಿ ಮೈಸೂರು, ಚಾಮರಾಜನಗರ ಜಿಲ್ಲೆಗಳ ನಾಯಕ ಸಮಾಜದವರಿಗೆ ವಿಧಾನ ಪರಿಷತ್ ಟಿಕೆಟ್ ನೀಡಿಲ್ಲ. ಈ ಬಾರಿಯಾದರೂ ಎಸ್.ಸಿ.ಬಸವರಾಜ್ ಅವರಿಗೆ ಟಿಕೆಟ್ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಸತೀಶ್ ಜಾರಕಿಹೊಳಿ ಅವರಲ್ಲಿ ಮನವಿ ಮಾಡುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಾಗೇಶ್, ಮುನಿಯಪ್ಪ, ಸಿದ್ದಶೆಟ್ಟಿ, ಬೀರೇಗೌಡ, ಶಿವಕುಮಾರ್, ಬಸವರಾಜ್, ಅರುಣ್, ರವಿಕುಮಾರ್, ನಾಗರಾಜು, ಸಿದ್ದರಾಜು, ಮಾದಪ್ಪ, ಮಹದೇವ್ ಉಪಸ್ಥಿತರಿದ್ದರು.

ಸರಗೂರಲ್ಲಿ ಶೀಘ್ರ ಡಯಾಲಿಸಿಸ್ ಕೇಂದ್ರ ಪ್ರಾರಂಭ

ಆರೋಗ್ಯ ಇಲಾಖೆ ರಾಜ್ಯ ಉಪ ನಿರ್ದೇಶಕ ಡಾ.ಗೋಳೂರು ಶ್ರೀನಿವಾಸ್



ಸರಗೂರು, ಮೇ 23– ಗ್ರಾಮೀಣ ಜನರು ಜಿಲ್ಲಾ ಕೇಂದ್ರಕ್ಕೆ ಹೋಗುವುದನ್ನು ತಪ್ಪಿಸುವ ಉದ್ದೇಶದಿಂದ ತಾಲೂಕಿಗೊಂದು ಡಯಾಲಿಸಿಸ್ ಕೇಂದ್ರ ಪ್ರಾರಂಭಿಸುತ್ತೇವೆ ಎಂದು ಆರೋಗ್ಯ ಇಲಾಖೆ(ಎನ್‌ಸಿಡಿ ವಿಭಾಗ) ರಾಜ್ಯ ಉಪ ನಿರ್ದೇಶಕ ಡಾ.ಗೋಳೂರು ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹೊಸದಾಗಿ ಪ್ರಾರಂಭಿಸಿರುವ ಡಯಾಲಿಸಿಸ್ ಕೇಂದ್ರ ಉದ್ಘಾಟನೆ ಹಿನ್ನೆಲೆಯಲ್ಲಿ ಗುರುವಾರ ಭೇಟಿ ನೀಡಿ ಮಾತನಾಡಿದರು. ತಾಲೂಕು ಮಟ್ಟದಲ್ಲಿ ಡಯಾಲಿಸಿಸ್ ಕೇಂದ್ರ ಇಲ್ಲದೆ ಬಡ ರೋಗಿಗಳು ತೊಂದರೆ ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ತಾಲೂಕು ಕೇಂದ್ರದಲ್ಲೇ ಸ್ಥಾಪನೆ ಮಾಡಲು ಸರ್ಕಾರ ಸೂಚನೆ ನೀಡಿದೆ. ಶೀಘ್ರ ಸರಗೂರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಡಯಾಲಿಸಿಸ್ ಕೇಂದ್ರವನ್ನು ಪ್ರಾರಂಭಿಸುತ್ತಿದ್ದೇವೆ ಎಂದು ತಿಳಿಸಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಟಿ. ರವಿಕುಮಾರ್ ಮಾತನಾಡಿ, ಗ್ರಾಮೀಣ ಭಾಗದ ರೋಗಿಗಳು ಆಸ್ಪತ್ರೆಗೆ ತಲುಪಲು ಮತ್ತು ಡಯಾಲಿಸಿಸ್‌ಗೆ ಒಳಗಾಗಲು ಕಷ್ಟಪಡುತ್ತಿದ್ದಾರೆ. ಹಾಗಾಗಿ, ಪ್ರತಿ ತಾಲೂಕಿನಲ್ಲಿ ಕನಿಷ್ಠ ಒಂದು ಕೇಂದ್ರದ ಅಗತ್ಯವಿದೆ. ಸರಗೂರಿನಲ್ಲೂ ಶೀಘ್ರದಲ್ಲೇ ಕೇಂದ್ರ ಸ್ಥಾಪನೆ ಕಾರ್ಯ ಆರಂಭವಾಗಲಿದೆ ಎಂದು ಹೇಳಿದರು.

ಹಣಕಾಸು ಇಲಾಖೆ ಸಲಹೆಗಾರರಾದ ನೇತ್ರಾವತಿ, ಮೈಸೂರು ಜಿಲ್ಲಾ ಸರ್ವೇಕ್ಷಣಾಧಿಕಾರಿ ಕಚೇರಿ ಎನ್‌ಸಿಡಿ ವಿಭಾಗದ ವೈದ್ಯಾಧಿಕಾರಿ ಡಾ.ಅರ್ಚನಾ, ಹರೀಶ್, ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಪಾರ್ಥಸಾರಥಿ, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ಭಾಗ್ಯಲಕ್ಷ್ಮೀ, ಸಮುದಾಯ ಆರೋಗ್ಯ ಕೇಂದ್ರ ಸಿಬ್ಬಂದಿ ಇನ್ನಿತರರು ಹಾಜರಿದ್ದರು.

ಬಿಳಿಕೆರೆಯಲ್ಲಿ ಬುದ್ಧ ಪೂರ್ಣಿಮೆ ಆಚರಣೆ



ಹುಣಸೂರು, ಮೇ 23– ತಾಲೂಕಿನ ಬಿಳಿಕೆರೆ ಗ್ರಾಮದಲ್ಲಿ ಬುದ್ಧ ಪೂರ್ಣಿಮೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಅನಾಥ ಶವಗಳನ್ನು ತಮ್ಮ ವಾಹನದಲ್ಲಿ ಸಾಗಿಸಿ ಶವ ಸಂಸ್ಕಾರ ಮಾಡುತ್ತಿದ್ದ ಬಿಳಿಕೆರೆ ಗ್ರಾಮದ ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ದಲಿತ ಮುಖಂಡ ಬಸವಲಿಂಗಯ್ಯ, ದಸಂಸ ಜಿಲ್ಲಾ ಸಂಚಾಲಕ ನಿಂಗರಾಜ್ ಮಲ್ಲಾಡಿ, ಮಲ್ಲಿಕಾರ್ಜುನ ಖರ್ಗೆ ಅಭಿಮಾನಿ ಸಂಘದ ಅಧ್ಯಕ್ಷ ಸ್ವಾಮಿ, ಉದ್ಯಮಿ ಮಧು, ಯಜಮಾನರಾದ ಕಾಳಿದಾಸ ನಾಯಕ, ಪ್ರೇಮಕುಮಾರ್, ಸಣ್ಣಯ್ಯ, ಪ್ರಭು, ರೈತ ಸಂಘ ಮುಖಂಡರಾದ ಕುಮಾರ್, ಚಿಕ್ಕಣ್ಣ, ಗ್ರಾಪಂ ಸದಸ್ಯ ಸ್ವಾಮಿ, ಮುಖಂಡರಾದ ನಾರಾಯಣ್, ಬಿಳಿಕೆರೆ ಆಟೋ ಮಾಲೀಕರ ಸಂಘದ ಸದಸ್ಯರಾದ ಚಂದ್ರು, ಶೇಖರ್, ದೇವರಾಜ್, ರವಿ ಹಾಗೂ ಬಿಳಿಕೆರೆ ಮತ್ತು ಅಕ್ಕಪಕ್ಕದ ಗ್ರಾಮಸ್ಥರು ಉಪಸ್ಥಿತರಿದ್ದರು.


ನೂರಕ್ಕೂ ಹೆಚ್ಚು ಮಂದಿಗೆ ವಾಂತಿ–ಭೇದಿ ಹಿನ್ನಲೆ

ತಗಡೂರು ಪಿಡಿಓ, ಎಇಇ ಅಮಾನತು

ನಂಜನಗೂಡು, ಮೇ 23– ತಾಲೂಕಿನ ತಗಡೂರು ಗ್ರಾಮದಲ್ಲಿ ಕಲುಷಿತ ನೀರು ಸೇವನೆಯಿಂದ ನೂರಕ್ಕೂ ಹೆಚ್ಚು ಮಂದಿಗೆ ವಾಂತಿ ಭೇದಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ನಂಜನಗೂಡು ಉಪ ವಿಭಾಗದ ಎಇಇ ಶಿವಕುಮಾರ್ ಹಾಗೂ ಸ್ಥಳೀಯ ಗ್ರಾಪಂ ಪಿಡಿಓ ದಿವಾಕರ್ ಅವರನ್ನು ಅಮಾನುಗೊಳಿಸಲಾಗಿದೆ.

ತಗಡೂರು ಗ್ರಾಮದಲ್ಲಿ ಕಳೆದ ಐದಾರು ದಿನಗಳ ಹಿಂದೆ ಕಲುಷಿತ ನೀರು ಸೇವನೆಯಿಂದಾಗಿ ನೂರಕ್ಕೂ ಹೆಚ್ಚು ವಾಂತಿ ಭೇದಿ ಪ್ರಕರಣಗಳು ದಾಖಲಾಗಿದ್ದವು. ಹೀಗಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳ ತಂಡ ತಗಡೂರು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಗ್ರಾಮದಲ್ಲಿ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸಲು ಅಗತ್ಯ ಕ್ರಮ ಕೈಗೊಳ್ಳದಿರುವುದನ್ನು ಗಮನಿಸಿ ಜಿಲ್ಲಾ ಪಂಚಾಯಿತಿಗೆ ವರದಿ ನೀಡಿದ್ದರು. ವರದಿಯಲ್ಲಿ ಸ್ಥಳೀಯ ಪಿಡಿಓ ದಿವಾಕರ್ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದ ಹಿನ್ನಲೆಯಲ್ಲಿ ಜಿಲ್ಲಾ ಪಂಚಾಯಿತಿ ಕಾರ್ಯ ನಿರ್ವಾಹಕಾಧಿಕಾರಿ ಕೆ.ಎಂ.ಗಾಯತ್ರಿ ಅವರು ಪಿಡಿಓ ಅವರನ್ನು ಸೇವೆಯಿಂದ ಅಮಾನತುಗೊಳಿಸಿದ್ದಾರೆ. ಜೊತೆಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗದ ಎಇಇ ಶಿವಕುಮಾರ್ ಅವರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದೆ.

ಧಾರಾಕಾರ ಮಳೆಗೆ ಮನೆ ಗೋಡೆ ಕುಸಿತ



ಧಾರಾಕಾರ ಮಳೆಗೆ ಮನೆ ಗೋಡೆ ಕುಸಿದಿರುವುದು.

ಭೇರ್ಯ, ಮೇ 23– ಧಾರಾಕಾರ ಮಳೆಗೆ ಮನೆ ಗೋಡೆ ಕುಸಿದಿರುವ ಘಟನೆ ಸಮೀಪದ ಮುಂಜನಹಳ್ಳಿ ಗ್ರಾಮದಲ್ಲಿ ಗುರುವಾರ ನಡೆದಿದೆ.

ಗ್ರಾಮದ ನಿವಾಸಿ ನಾಗಮ್ಮ ಎಂಬುವರಿಗೆ ಸೇರಿದ ಮನೆ ಗೋಡೆ ಕುಸಿದಿದ್ದು, ಮನೆಯಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನೆಯಲ್ಲಿ ಮನೆಯಲ್ಲಿದ್ದ ಬೆಲೆ ಬಾಳುವ ವಸ್ತುಗಳು, ಆಹಾರ ಪದಾರ್ಥಗಳು ಸೇರಿದಂತೆ ಗೃಹೋಪಯೋಗಿ ವಸ್ತುಗಳು ನಾಶವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಗ್ರಾಪಂ ಸದಸ್ಯ ಮಹದೇವ ನಾಯಕ ಪರಿಶೀಲನೆ ನಡೆಸಿದರು. ಅಲ್ಲದೇ ಸರ್ಕಾರದಿಂದ ದೊರೆಯಬಹುದಾದ ಪರಿಹಾಕ ಕಲ್ಪಿಸುವದಾಗಿ ಭರವಸೆ ನೀಡಿದರು.

ವಿದ್ಯಾರ್ಥಿಗಳಿಗೆ ಸನ್ಮಾನ...



ಬಸವ ಜಯಂತಿ ಅಂಗವಾಗಿ ಬೆಟ್ಟದಪುರದ ವೀರಶೈವ ಲಿಂಗಾಯತ ಸಮಾಜದಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು, ಪೋಷಕರನ್ನು ಸನ್ಮಾನಿಸಲಾಯಿತು.

ಡಾ.ಯತೀಂದ್ರ, ವಿಜಯ್‌ಕುಮಾರ್‌ರನ್ನು ಪರಿಷತ್‌ಗೆ ಆಯ್ಕೆ ಮಾಡಿ

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಒತ್ತಾಯ



ಸುದ್ದಿಗೋಷ್ಠಿಯಲ್ಲಿ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿದರು.

ತಿ.ನರಸೀಪುರ, ಮೇ 23– ತಂದೆಗಾಗಿ ಕ್ಷೇತ್ರ ಬಿಟ್ಟುಕೊಟ್ಟು ಪಕ್ಷ ಸಂಘಟನೆಯಲ್ಲಿ ತೊಡಗಿರುವ ಮಾಜಿ ಶಾಸಕ ಡಾ.ಯತೀಂದ್ರ ಹಾಗೂ ಪಕ್ಷದ ನಿಷ್ಠಾವಂತ ಕಾರ್ಯಕರ್ತ, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಅವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡಬೇಕೆಂದು ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಒತ್ತಾಯಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವಿಧಾನಸಭಾ ಚುನಾವಣೆ ವೇಳೆ ಮಾಜಿ ಶಾಸಕ ಡಾ.ಯತೀಂದ್ರ ಅವರು ತಮ್ಮ ತಂದೆ ಸಿಎಂ ಸಿದ್ದರಾಮಯ್ಯ ಅವರ ಸ್ಪರ್ಧೆಗಾಗಿ ವರುಣ ಕ್ಷೇತ್ರ ಬಿಟ್ಟುಕೊಟ್ಟು ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗಾಗಿ ರಾಜ್ಯಾದ್ಯಂತ ಸುತ್ತಾಡಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಯತೀಂದ್ರ ಅವರು ವರುಣ ಕ್ಷೇತ್ರ ಬಿಟ್ಟುಕೊಟ್ಟಿದ್ದರಿಂದ ಆ ಕ್ಷೇತ್ರದಲ್ಲಿ ಸ್ಪರ್ಧಿಸಿದ ಸಿದ್ದರಾಮಯ್ಯರವರು ಅತ್ಯಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಿ ರಾಜ್ಯದ ಮುಖ್ಯಮಂತ್ರಿಯಾದರು. ಮತ್ತೊಂದೆಡೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ಪಕ್ಷ ಸಂಘಟನೆಯಲ್ಲಿ ತೊಡಗಿರುವ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಅವರನ್ನು ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆ ಮಾಡಬೇಕು. ಇಬ್ಬರಿಗೂ ವಿಧಾನ ಪರಿಷತ್‌ನಲ್ಲಿ ಸ್ಥಾನ ಕಲ್ಪಿಸಿದರೆ ಪಕ್ಷ ಮತ್ತು ಕ್ಷೇತ್ರ ಹೆಚ್ಚು ಅಭಿವೃದ್ಧಿ ಹೊಂದಲಿದೆ. ಹಾಗಾಗಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವ ಕುಮಾರ್ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇವರಿಗೆ ಸದಸ್ಯ ಸ್ಥಾನ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ದಲಿತರ ಪರವಾದ ಪಕ್ಷ: ಕಾಂಗ್ರೆಸ್ ದಲಿತರ ಪರವಾದ ಪಕ್ಷ ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಿದೆ. ಸಂಸದ ಶ್ರೀನಿವಾಸ ಪ್ರಸಾದ್ ನಿಧನರಾದ ವೇಳೆ ರಾಜ್ಯ ಸರ್ಕಾರ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗೆ ಸರ್ಕಾರಿ ರಜೆ ಘೋಷಿಸುವ ಮೂಲಕ ಅವರಿಗೆ ಗೌರವ ಸಲ್ಲಿಸಿದೆ. ಈ ಹಿಂದೆ ಇದ್ದ ಸರ್ಕಾರಗಳು ಯಾವುದೇ ದಲಿತ ನಾಯಕರು ನಿಧನರಾದಾಗ ರಜೆ ಘೋಷಣೆ ಮಾಡುವ ಗೋಜಿಗೆ ಹೋಗಲಿಲ್ಲ. ಆದರೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಶ್ರೀನಿವಾಸ ಪ್ರಸಾದ್ ಅವರ ನಿಧನಕ್ಕೆ ಸಂತಾಪ ಸೂಚಿಸಿ ಗೌರವ ಸಲ್ಲಿಸಿತು. ಇದಕ್ಕಾಗಿ ರಾಜ್ಯ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದ ಅವರು, ಸಚಿವ ಡಾ.ಹೆಚ್.ಸಿ.ಮಹದೇವಪ್ಪರನ್ನು ಮೈಸೂರು ಉಸ್ತುವಾರಿ ಸಚಿವರನ್ನಾಗಿ ಮುಂದುವರೆಸಬೇಕೆಂದು ಮನವಿ ಮಾಡಿದರು.

ಪುರಸಭೆ ಸದಸ್ಯ ಪ್ರಕಾಶ್ ಮಾತನಾಡಿ, ಸಿದ್ದರಾಮಯ್ಯ ಕ್ಷೇತ್ರ ಬದಲಾಯಿಸುವ ವೇಳೆ ಡಾ.ಯತೀಂದ್ರ ಕ್ಷೇತ್ರ ಬಿಟ್ಟು ಕೊಟ್ಟಿದ್ದರು. ಆ ವೇಳೆ ಸಿದ್ದರಾಮಯ್ಯ ಅವರೇ ಅವರಿಗೆ ಬೇರೆ ಜವಾಬ್ದಾರಿ ವಹಿಸುವ ಭರವಸೆ ನೀಡಿದ್ದರು. ಇದೀಗ ಅವರಿಗೆ ರಾಜ್ಯದಲ್ಲಿ ತೆರವಾಗುವ 11 ವಿಧಾನ ಪರಿಷತ್ ಸ್ಥಾನಗಳ ಪೈಕಿ ಸ್ಥಾನ ದೊರಕಿಸಿಕೊಡುವ ಜೊತೆಗೆ ಲೋಕಸಭಾ ಚುನಾವಣೆಗೆ ಮೈಸೂರು ಕ್ಷೇತ್ರದಿಂದ ಆಕಾಂಕ್ಷಿಯಾಗಿದ್ದ ಡಾ.ಬಿ.ಜೆ.ವಿಜಯಕುಮಾರ್ ಅವರಿಗೂ ಎಂಎಲ್‌ಸಿ ಸ್ಥಾನ ದೊರಕಿಸಿ ಕೊಡಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಪುರಸಭೆ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಸದಸ್ಯ ಬಾದಾಮಿ ಮಂಜು, ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ. ಜೆ.ವೆಂಕಟೇಶ್, ಗ್ರಾಪಂ ಮಾಜಿ ಸದಸ್ಯ ಹೇಮಂತ್ ಕುಮಾರ್. ಅಲ್ಪಸಂಖ್ಯಾತ ವಿಭಾಗದ ಕಾರ್ಯದರ್ಶಿ ಮನ್ಸೂರ್ ಅಲಿ. ಡೈರಿ ಮಾಜಿ ಅಧ್ಯಕ್ಷ ಮಹದೇವು ಮುಖಂಡರಾದ ಘಟಕ ಮಹದೇವ್, ಪ್ರಕಾಶ್, ಕೃಷ್ಣಪ್ಪ ನೀಲಕಂಠ, ದಿವಾಕರ್, ನಂಜುಂಡೇಗೌಡ, ಕಿಟ್ಟಣ್ಣ ಮತ್ತಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಟರ್ಬೋ (ಮ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮ್ಯಾಟ್ನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ)	4 ಪ್ರದರ್ಶನಗಳು
ಸಂಗಂ	
3ನೇ ಕೃಷ್ಣಪ್ಪ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ತ್ರಿಭುಜ (ಕ)	ಬೆಳಗಿನ ಪ್ರದರ್ಶನ
ಕೃಷ್ಣ ನೀ ಬೇಗನೆ ಬಾರೋ (ಕ)	3 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, 3ನೇ ಕೃಷ್ಣಪ್ಪ (ಕ): ಮ.1.10ಕ್ಕೆ.
ಸ್ಕ್ರೀನ್ 2	ರಾಮನ ಅವತಾರ (ಕ): ಬೆ.10.30ಕ್ಕೆ, ಬಯ್ಯಾ ಜಿ (ಹಿಂ): ಮ.1.35ಕ್ಕೆ, ಸಂ.4.25ಕ್ಕೆ, ಥಾಲವನ್ (ಮ): ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.20ಕ್ಕೆ, ಸಂ.4.05ಕ್ಕೆ, ರಾ.7.05ಕ್ಕೆ, ಪಿಟಿ ಸರ್ (ತ): ಮ.1.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಟರ್ಬೋ (ಮ): ಬೆ.10.10ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಗಾರ್ಫೀಲ್ಡ್ ಮೂವಿ (3ಡಿ)(ಇಂ): ಮ.1.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ,
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಎವಿಡೆನ್ಸ್ (ಕ): ಬೆ.11.15ಕ್ಕೆ, ಅರನ್‌ಮನೈ 4 (ತ): ಮ.1.15ಕ್ಕೆ, ಟರ್ಬೋ (ಮ): ಸಂ.4ಕ್ಕೆ, ಮೂರನೇ ಕೃಷ್ಣಪ್ಪ (ಕ): ಸಂ.6.40ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.20ಕ್ಕೆ, ಸಂ.4.05ಕ್ಕೆ, ಟರ್ಬೋ (ಮ): ಮ.1.05ಕ್ಕೆ, ಸಂ.6.50ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಮ.3.55ಕ್ಕೆ, 3ದೇವಿ (ಕ): ಮ.1.30ಕ್ಕೆ, ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹೃದಯ ರೋಗ ಉಚಿತ ತಪಾಸಣಾ ಶಿಬಿರ

ಗಾವಡಗೆರೆ, ಮೇ 23–ಡಾ. ಮುರಳೀರಾವ್ ಹೃದಯ ರೋಗ ತಜ್ಞರು ಮುಕ್ತಾ ಹೃದ್ರೋಗ ಕೇಂದ್ರ, ರಾಯಚೂರು, ಭಾರತೀಯ ವೈದ್ಯಕೀಯ ಸಂಘ ಕೃಷ್ಣರಾಜ ನಗರ, ಶ್ರೀ ಶಿವಛತ್ರಪತಿ ಮರಾಠ ಶ್ರೇಯೋಭಿವೃದ್ಧಿ ಸಮಿತಿ. ಗಾವಡಗೆರೆ, ಸುತ್ತಮುತ್ತಲಿನ ಮರಾಠ ಮಾಜಿ ಸೈನಿಕರ ಸಂಯುಕ್ತಾಶ್ರಯದಲ್ಲಿ ಮೇ 26ರಂದು ಇಲ್ಲಿನ ಮರಾಠ ಭವನದಲ್ಲಿ ಬೆಳಗ್ಗೆ 8 ರಿಂದ ಮಧ್ಯಾಹ್ನ 2 ಗಂಟೆವರೆಗೆ ಉಚಿತ ಹೃದಯ ರೋಗ ತಪಾಸಣಾ ಶಿಬಿರ ಆಯೋಜಿಲಾಗಿದೆ. ಶಿಬಿರದಲ್ಲಿ ಬಿ.ಪಿ, ಶುಗರ್, ಇಸಿಜಿ, ಆದ್ಯತೆ ಮೇರೆಗೆ ಎಕೋ ಪರೀಕ್ಷಿಸಲಾಗುವುದು.

ಆಸಕ್ತರು ತಮ್ಮ ಹೆಸರನ್ನು ಅಂದು ಬೆಳಗ್ಗೆ 8 ಗಂಟೆಗೆ ನೋಂದಾಯಿಸಿಕೊಂಡು ಶಿಬಿರದ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಶಿಬಿರದ ಸಂಚಾಲಕ ಜಿ.ವಿ.ಶ್ರೀನಾಥ್ (ಮೊ.9900927259) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಂಕ್ರಾಮಿಕ ರೋಗಗಳು ಕಂಡು ಬಂದರೆ ಆಯಾಯ ಜಿಲ್ಲಾಧಿಕಾರಿಗಳೇ ಹೊಣೆ

*** ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ * ಮೈಸೂರು ಕಲುಷಿತ ನೀರಿನ ದುರಂತದ ಬೆನ್ನಲ್ಲೇ ಡಿಸಿಗಳೊಂದಿಗೆ ಸಿಎಂ ವೀಡಿಯೋ ಸಂವಾದ * ಮಳೆ ಬಿದ್ದಿರುವುದರಿಂದ ರೈತರಿಗೆ ಅಗತ್ಯ ಬಿತ್ತನೆ ಬೀಜ, ಗೊಬ್ಬರ, ಸಾಲ ಸೌಲಭ್ಯ ವ್ಯವಸ್ಥೆ ಮಾಡುವಂತೆಯೂ ಸೂಚನೆ * ಬರ ಪರಿಹಾರ ಸಾಲಕ್ಕೆ ವಜಾ ಮಾಡಿಕೊಳ್ಳದಂತೆ ಬ್ಯಾಂಕ್‌ಗಳಿಗೆ ಸೂಚನೆ**



ಬೆಂಗಳೂರು, ಮೇ 23(ಕೆಎಂಶಿ)– ಕಾಲರಾ ಅಥವಾ ಇನ್ನಿತರ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡರೆ ಹಿರಿಯ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ಕಲುಷಿತ ನೀರಿನಿಂದ ಯಾರಿಗಾದರೂ ತೊಂದರೆಯಾದರೆ ಡಿಸಿಗಳೇ ನೇರ ಹೊಣೆ ಹೊರಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ಮೈಸೂರಿನಲ್ಲಿ ಕಲುಷಿತ ನೀರು ಕುಡಿದು ಸಾವು–ನೋವು ಸಂಭವಿಸಿದ ಬೆನ್ನಲ್ಲೇ ಮುಖ್ಯಮಂತ್ರಿ ಅವರು ಇಂದು ಗೃಹ ಕಚೇರಿ ಕೃಷ್ಣಾದಲ್ಲಿ ಜಿಲ್ಲಾಡಳಿತಗಳೊಂದಿಗೆ ವಿಡಿಯೊ ಸಂವಾದ ನಡೆಸಿ ಈ ಎಚ್ಚರಿಕೆ ನೀಡಿದ್ದಾರೆ. ಅಷ್ಟೇ ಅಲ್ಲ, ಪೂರ್ವ ಮುಂಗಾರು ಮಳೆ ಪ್ರಾರಂಭ ಆಗಿರುವುದರಿಂದ ಕೃಷಿಗೆ ಅಗತ್ಯವಾದ ಬಿತ್ತನೆ ಬೀಜ, ಗೊಬ್ಬರ ಹಾಗೂ ರೈತರಿಗೆ ಸಹಕಾರಿ ಸಂಘಗಳಲ್ಲಿ ಸಾಲ ಸೌಲಭ್ಯ ದೊರಕಿಸಲು ಕ್ರಮ ಕೈಗೊಳ್ಳಿ ಎಂದು ಸೂಚಿಸಿದ್ದಾರೆ.

ಮೈಸೂರಿನ ಎರಡು ಗ್ರಾಮಗಳಲ್ಲಿ ಕಾಲರಾ ಕಂಡು ಬಂದಿದೆ, ಇದಕ್ಕೆ ಕಾರಣ ಕಲುಷಿತ ನೀರು, ಕಲುಷಿತ ನೀರಿಗೆ ಸಂಬಂಧಪಟ್ಟ ಇಂಜಿನಿಯರುಗಳೇ ಕಾರಣ. ಕುಡಿಯಲು ನೀರು ಯೋಗ್ಯವೇ, ಇಲ್ಲವೇ ಎಂಬುದನ್ನು ಪತ್ತೆ ಮಾಡದಿರುವುದು ದೊಡ್ಡ ಅಪರಾಧ, ಅಧಿಕಾರಿಗಳ ನಿರ್ಲಕ್ಷ್ಯದಿಂದ ಈ ರೀತಿಯ ಘಟನೆ ಸಂಭವಿಸಿದೆ, ಇದಕ್ಕೆ ಯಾರು ಜವಾಬ್ದಾರಿ.

ರಾಜ್ಯದೆಲ್ಲೆಡೆ ಕುಡಿಯುವ ನೀರಿನ ಪರೀಕ್ಷೆ ನಿತ್ಯವೂ ಆಗಬೇಕು. ಜಿಲ್ಲಾ ಮಟ್ಟದ ಅಧಿಕಾರಿಗಳೇ ಇದಕ್ಕೆ ಹೊಣೆ, ತಪ್ಪಿತಸ್ಥ ಅಧಿಕಾರಿಗಳನ್ನು ಕೂಡಲೆ ಅಮಾನತು ಮಾಡಲಾಗುವುದು.

ಪೂರ್ವ ಮುಂಗಾರು ಮಳೆ ಪ್ರಾರಂಭವಾಗಿದೆ. ಈ ಬಾರಿ ನೀತಿ ಸಂಹಿತೆ ಅನುಷ್ಠಾನದ ಅವಧಿ ಸುದೀರ್ಘವಾಗಿತ್ತು, ಸರ್ಕಾರದ ಆಡಳಿತಕ್ಕೆ ಲಕ್ವ ಹೊಡೆದಂತಾಗಿತ್ತು, ಎಲ್ಲಾ ಜಿಲ್ಲಾಧಿಕಾರಿಗಳು ಚುನಾವಣಾಧಿಕಾರಿಗಳಾಗಿದ್ದರು, ಚುನಾವಣಾ ಕೆಲಸದಲ್ಲಿ ನಿರತರಾಗಿದ್ದರಿಂದ ಅಭಿವೃದ್ಧಿ ಕೆಲಸಗಳಿಗೆ ಆದ್ಯತೆ ನೀಡಲು ಸಾಧ್ಯವಾಗಿರಲಿಲ್ಲ. ಮೇನಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಆಗಿದೆ, ಬಿತ್ತನೆ ಕೆಲಸವೂ ಪ್ರಾರಂಭವಾಗಿದೆ, ಮೇ ತಿಂಗಳ ಗುರಿ 2.95 ಲಕ್ಷ ಹೆಕ್ಟೇರ್ ಪ್ರದೇಶ, ಸಾಧನೆಯಾಗಿರುವುದು 68,000 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಇನ್ನೂ 13 ದಿನ ಬಾಕಿ ಇದೆ. ಜೂನ್ 6ರವರೆಗೆ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ, ಈ ಕಾರಣದಿಂದ ತುರ್ತು ಕೆಲಸಗಳಿಗೆ ಗಮನ ಕೊಡಬೇಕು, ಎಲ್ಲ ಜಿಲ್ಲಾ ಅಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡಲು ಪ್ರಾರಂಭಿಸಬೇಕು, ಫೆಬ್ರವರಿಯಲ್ಲಿ ಬಜೆಟ್ ಮಂಡಿಸಲಾಗಿದೆ, ಆರ್ಥಿಕ ವರ್ಷದ 2 ತಿಂಗಳು ಕಳೆದು ಹೋಗುತ್ತಿದೆ.

ಈ ವರ್ಷದ ಸಾಲ ಯೋಜನೆ ಕಳುಹಿಸಲಾಗಿದೆ. ಜಿಲ್ಲಾ ಬ್ಯಾಂಕರುಗಳೊಂದಿಗೆ ಸಮನ್ವಯ ವಹಿಸಿ, ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಬರ ಪರಿಹಾರ ಮೊತ್ತವನ್ನು ರೈತರ ಸಾಲಕ್ಕೆ ವಜಾ ಮಾಡಿಕೊಳ್ಳದಂತೆ ಬ್ಯಾಂಕರುಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಬೆಳೆ ವಿಮೆ ಕ್ಲೇಮ್ ಮಾಡುವ ಸಂದರ್ಭದಲ್ಲಿ ಕಂಪೆನಿಗಳ ಸ್ಯಾಂಪಲ್ ಪರಿಶೀಲನೆಯ ಕುರಿತು ರೈತರು ಹಲವು ಸಂದೇಹಗಳನ್ನು ಹೊಂದಿದ್ದಾರೆ. ಕಂಪನಿಗಳು ಆಡುವ ಆಟದಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ಅಪಾಯವಿದೆ ಎನ್ನುವ ಸಲಹೆ ಸಚಿವ ಲಾಡ್ ಅವರಿಂದ ಬಂತು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಈ ಕುರಿತು ಮುಂಚಿತವಾಗಿಯೇ ವಿಮಾ ಕಂಪೆನಿಗಳೊಂದಿಗೆ ಚರ್ಚಿಸಿ, ರೈತರಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

ಮೇ 26, 27ರಂದು ಮೈಸೂರಿನ ಕೆಲವೆಡೆ ನೀರು ಪೂರೈಕೆ ವ್ಯತ್ಯಯ

ಮೈಸೂರು, ಮೇ 23–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಬೆಳಗೊಳ ಮತ್ತು ಹೊಂಗಳ್ಳಿ 2ನೇ ಹಂತದ ಬೂಸ್ಟರ್ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಮೇಟಗಳ್ಳಿ ವಿತರಣಾ ಕೇಂದ್ರದಲ್ಲಿ ಕೆಪಿಟಿಸಿಎಲ್ ವತಿಯಿಂದ ತ್ರೈಮಾಸಿಕ ನಿರ್ವಹಣೆಗಾಗಿ ವಿದ್ಯುತ್ ಸರಬರಾಜು ನಿಲುಗಡೆ ಮಾಡುವುದರಿಂದ ಮೇ 26 ಮತ್ತು 27ರಂದು ನಗರದ ಕೆಲವೆಡೆ ನೀರು ಸರಬರಾಜುವಿನಲ್ಲಿ ವ್ಯತ್ಯಯವಾಗಲಿದೆ. ವಾರ್ಡ್ ನಂ.4, 5, 6, 7, ಹೆಚ್.ಎಲ್.ಆರ್. ಸಂಬಂಧಪಟ್ಟ ಪ್ರದೇಶಗಳಾದ ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಉದಯಗಿರಿ, ಬನ್ನಿಮಂಟಪ ಎ, ಬಿ, ಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ವಿಶ್ವೇಶ್ವರನಗರ, ಚಾಮುಂಡಿಪುರಂ, ದೇವರಾಜ ಮೊಹಲ್ಲಾ, ಲೂರ್ದ್ ನಗರ, ಮೀನಾಬಜಾರ್, ವಾರ್ಡ್ ಸಂಖ್ಯೆ 8, 17, 18, 19, 23 ರಿಂದ 27ರವರೆಗೆ, 40, 41, 55, 60, 61, 62 ಹಾಗೂ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕಾ ಪ್ರದೇಶಗಳು ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಪೂರೈಕೆ ವ್ಯತ್ಯಯವಾಗಲಿದೆ.

ಬರ ಪರಿಹಾರ, ಕುಡಿಯುವ ನೀರು ಪೂರೈಕೆ, ಬಿತ್ತನೆ ಬೀಜ, ರಸಗೊಬ್ಬರ ಸರಿಯಾಗಿ ಕಲ್ಪಿಸಿ

ವಿಡಿಯೋ ಕಾನ್ಫರೆನ್ಸ್ ಮೂಲಕ ಮೈಸೂರು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಾಕೀತು

ಮೈಸೂರು, ಮೇ 23(ಆರ್‌ಕೆ)–ಬರ ಪರಿಸ್ಥಿತಿ ನಿರ್ವಹಣೆ, ಪರಿಹಾರ, ಕುಡಿಯುವ ನೀರು, ಬಿತ್ತನೆ ಬೀಜ, ರಸಗೊಬ್ಬರವನ್ನು ಸಮರ್ಪಕವಾಗಿ ವಿತರಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಮೈಸೂರು ಜಿಲ್ಲೆಯ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಬೆಂಗಳೂರಿನಲ್ಲಿ ಇಂದು ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಹಾಗೂ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಬರ ಪರಿಸ್ಥಿತಿ, ಮುಂಗಾರು ಕೃಷಿ ಚಟುವಟಿಕೆ ಕುರಿತಂತೆ ಸಭೆ ನಡೆಸಿದ ಮುಖ್ಯಮಂತ್ರಿಗಳು, ಈ ಬಾರಿ ವಾಡಿಕೆಗಿಂತ ಅಧಿಕ ಮಳೆಯಾಗಿದೆ. ಮೈಸೂರು ಜಿಲ್ಲೆಯಾದ್ಯಂತ ರೈತರು ಬೇಸಾಯ ಆರಂಭಿಸಿರುವುದರಿಂದ ಅಧಿಕಾರಿಗಳು ಫೀಲ್ಡ್‌ಗೆ ಹೋಗಿ ಯಾವ ಭೂಮಿಯಲ್ಲಿ ಏನು ಬಿತ್ತನೆ ಮಾಡಬೇಕು ಎಂಬುದರ ಬಗ್ಗೆ ತಿಳುವಳಿಕೆ ಹೇಳಿ ಎಂದರು.

ಕೃಷಿ ಇಲಾಖೆಯಿಂದ ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ, ತೋಟಗಾರಿಕೆ ಬೆಳೆಗೆ ಬೇಕಾಗುವ ಸೌಲಭ್ಯಗಳನ್ನು ವಿತರಿಸಬೇಕು. ಕೃಷಿ ಅಧಿಕಾರಿಗಳು ರೈತರ ಜಮೀನುಗಳಿಗೆ ಹೋಗಿ ಯಾವ ತಳಿಯ ಬಿತ್ತನೆ ಮಾಡಬೇಕೆಂಬುದರ ಬಗ್ಗೆ ಮಾಹಿತಿ ನೀಡಬೇಕು ಎಂದು ಸಿದ್ದರಾಮಯ್ಯ ತಿಳಿಸಿದರು.ಬೇಸಿಗೆಯಿಂದಾಗಿ ರಾಜ್ಯದಲ್ಲಿ ಬರ ಪರಿಸ್ಥಿತಿ ಉಂಟಾಗಿತ್ತು. ಈಗಾಗಲೇ ಬರಕ್ಕೆ ತುತ್ತಾದ ಪ್ರದೇಶಗಳ ಮಾಹಿತಿ ಆಧರಿಸಿ ಸರ್ಕಾರದಿಂದ ಪರಿಹಾರದ ಹಣ ಬಿಡುಗಡೆಯಾಗಿದೆ. ಬರದಿಂದ ತೊಂದರೆಗೆ ಸಿಲುಕಿದ ರೈತರಿಗೆ ತಪ್ಪದೇ ಪರಿಹಾರದ ಹಣ ತಲುಪಿಸಬೇಕು. ಬ್ಯಾಂಕ್ ಅಕೌಂಟ್, ತಾಂತ್ರಿಕ ತೊಂದರೆ, ಆಧಾರ್ ಲಿಂಕ್ ಎಂಬ ಸಬೂಬು ಹೇಳದೇ ರೈತರ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸಬೇಕು ಎಂದು ಅವರು ಸೂಚನೆ ನೀಡಿದರು.

ಬರ ಪರಿಹಾರದ ಹಣವನ್ನು ರೈತರು ಪಡೆದಿರುವ ಬೆಳೆ ಸಾಲಕ್ಕೆ ಜಮಾ ಮಾಡಿಕೊಳ್ಳದಂತೆ ಬ್ಯಾಂಕ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಲೀಡ್ ಬ್ಯಾಂಕ್ ಮ್ಯಾನೇಜರ್‌ರೊಂದಿಗೆ ಸಂಪರ್ಕ ಇರಿಸಿ ಸಮನ್ವಯತೆಯಿಂದ ಆದ್ಯತೆ ಮೇಲೆ ಕೆಲಸ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಸಿಎಂ ನಿರ್ದೇಶನ ನೀಡಿದರು.

ಬೇಸಿಗೆಯಿಂದಾಗಿ ಕೆಲ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗಿದೆ ಎಂದು ಮಾಹಿತಿ ಇತ್ತು. ಈಗ ಮಳೆಯಾಗಿರುವುದರಿಂದ ಸಮಸ್ಯೆ ಉಲ್ಬಣವಾಗದಿದ್ದರೂ, ಅಧಿಕಾರಿಗಳು ಸಮರ್ಪಕವಾಗಿ ಜನ–ಜಾನುವಾರುಗಳಿಗೆ ಕುಡಿಯುವ ನೀರು ಪೂರೈಸಬೇಕು. ಅಗತ್ಯ ಮುಂಜಾಗ್ರತೆ ವಹಿಸುವುದು ಅತೀ ಮುಖ್ಯ ಎಂದ ಸಿದ್ದರಾಮಯ್ಯ, ಕಾರ್ಯ ಸ್ಥಗಿತಗೊಂಡಿರುವ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಿ, ಖಾತರಿಪಡಿಸಿದ ಸ್ಥಳದಲ್ಲಿ ಹೊಸ ಕೊಳವೆ ಬಾವಿ ತೋಡಿಸಿ, ಅಗತ್ಯ ಬಿದ್ದರೆ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆದು ನೀರು ಪೂರೈಸಿ ಎಂದರು.



ಸಿಎಂ ಸಿದ್ದರಾಮಯ್ಯ ಗುರುವಾರ ಬೆಂಗಳೂರಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಅಧಿಕಾರಿಗಳೊಂದಿಗೆ ಸಂವಾದ ನಡೆಸಿದರು.

ಮೈಸೂರು ಮಿತ್ರ 45
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು